# ಐರಾವತ

(ಚಲನಚಿತ್ರವಾಗಿರುವ ಕಾದಂಬರಿ)

ಲೇಖಕರು

ಸುದರ್ಶನ ದೇಸಾಯಿ

ಪ್ರಕಾಶಕರು

…ಪಬ್ಲಿಕೇಷನ್ಸ್

894.814 3
DES N93
ಗ್ರಂಥ ಸ್ವಾಮ್ಯ ವಿಭಾಗ

# ಐರಾವತ

(ಚಲನಚಿತ್ರವಾಗಿರುವ ಕಾದಂಬರಿ)

ಲೇಖಕರು :

ಸುದರ್ಶನ ದೇಸಾಯಿ

ಮಹಾರಾಜ ಪಬ್ಲಿಕೇಷನ್ಸ್

ಮಲ್ಲೇಶ್ವರಂ, ಬೆಂಗಳೂರು–560 003

**Iravatha** — A novel by Sudarshna Desai,
Published by Maharaja Publications, Malleswaram,
Bangalore-3.

ಮೊದಲನೇ ಮುದ್ರಣ : ೧೯೯೩

ಎಲ್ಲ ಹಕ್ಕುಗಳು · ಲೇಖಕರದು

**ಬೆಲೆ : ರೂ. 30-00**

ಮುದ್ರಕರು :

**ಕೇಟ್ ಪ್ರಿಂಟರ್ಸ್**
ಮಲ್ಲೇಶ್ವರಂ, ಬೆಂಗಳೂರು-3

## ಆತ್ಮೀಯ ಓದುಗರೆ !

ಇದು ನನ್ನ ಹದಿನಾಲ್ಕನೆಯ ಕಾದಂಬರಿ. ಇದು ಪುಸ್ತಕ ರೂಪತಳೆದುದು ಲೇಖಕನಾದ ನನಗೆ ಮತ್ತು ನನ್ನ ಓದುಗರಿಗೆ ಸಂತಸದ ಸಂಗತಿ ಇದಕ್ಕೆ ನಮ್ಮ ಸಹೃದಯ ಓದುಗರೇ ಕಾರಣ ಅವರ ಪ್ರೋತ್ಸಾಹ ಸದಾ ನಮಗಿರಲಿ ಅವರಿಗೆ ಮೊದಲನೆಯ ವಂದನೆಗಳು

ಮತ್ತು ಈ ಕಾದಂಬರಿಯನ್ನು ಅಂದವಾಗಿ ಮುದ್ರಿಸಿ, ಪ್ರಕಟಿಸಿ ಹೊರ ತಂದಿರುವ ಮಹಾರಾಜ ಪಬ್ಲಿಕೇಷನ್ಸ್‌ನ ಕೆ ಜಾನಕಿಯವರಿಗೂ ಅಂದವಾಗಿ ಮುದ್ರಿಸಿ ಕೊಟ್ಟಿರುವ ಶೇಟ್ ಪ್ರಿಂಟರ್ಸ್‌ರವರಿಗೂ ನನ್ನ ವಂದನೆಗಳು

**ಸುದರ್ಶನ ದೇಸಾಯಿ**

# ಐರಾವತ

## ಒಂದು

ನಗರದ ಮಧ್ಯಭಾಗದಲ್ಲೊಂದು ಸುಂದರವಾದ ಬಂಗಲೆ. ಸುತ್ತಲೂ ಕಂಪೌಂಡು—ಗೋಡೆ. ಕಬ್ಬಿಣದ ಗೇಟು. ಬಂಗಲೆಯ ಎದುರು ಚಿಕ್ಕದಾದ ಕೈತೋಟ. ಕೆಂಪು ಗುಲಾಬಿಗಳ ಸಂತೆಯೇ ಅಲ್ಲಿ ನೆರೆದಿತ್ತು. ಸುಮಾರು ಹತ್ತೆಂಟು ತೆಂಗಿನ ಮರಗಳು ಬೆಳೆದು ನಿಂತು, ಆ ಮನೆಗೆ ಒಂದು ವಿಶಿಷ್ಟವಾದ ಸೌಂದರ್ಯವನ್ನು ನೀಡಿದ್ದವು. ಬಂಗಲೆಯ ಗೇಟಿಗಾಗಲಿ, ಗೋಡೆಗಾಗಲಿ, ಮಾಲೀಕರ ಹೆಸರು ಬರೆದ ಫಲಕ ತೂಗು ಹಾಕಿರಲಿಲ್ಲ. ಆದರೂ ದಿನ ನಿತ್ಯ ಬೆಳಗಿನಿಂದ ಸಾಯಂಕಾಲದವರೆಗೆ ಹತ್ತಾರು ಜೀಪುಗಳು, ಕಾರುಗಳು, ಮೋಟಾರ್ ಬೈಕ್‌ಗಳು ಆ ಮನೆಗೆ ಓಡಾಡುತ್ತಿದ್ದವು. ಬರುವವರು ಬರುತ್ತಿದ್ದರು. ನೇರವಾಗಿ ಗೇಟು ತೆರೆದು, ಮನೆಯೊಳಗೆ ಪ್ರವೇಶಿಸುತ್ತಿದ್ದರು. ಸ್ವಲ್ಪ ಹೊತ್ತು ಕುಳಿತಿದ್ದು, ಮಾತನಾಡಿ, ನಂತರ—ಬಂದಂತೆಯೇ ವಾಪಸಾಗುತ್ತಿದ್ದರು. ಇದು ದಿನ ನಿತ್ಯದ ನೋಟ. ಹೀಗಾಗಿ ಆ ಮನೆಯ ಯಜಮಾನ ಅವನೊಂದಿಗಿದ್ದ ನಾಲ್ಕಾರು ಜನ, ಆ ಬಡಾವಣೆಯ ಜನರಿಗೆ ರಹಸ್ಯಮಯ ವ್ಯಕ್ತಿಗಳಾಗಿ ಕಾಣಿಸುತ್ತಿದ್ದರು. ಆ ಮನೆಯ ಯಜಮಾನ ಯಾರು ?.. ' ಅವನ ಆ ಮನೆಯಲ್ಲಿ ಯಾರು, ಯಾರು ಇದ್ದಾರೆ ? ಅವನ ಉದ್ಯೋಗವೇನು ? ಮುಂತಾದ ಅನೇಕ ಪ್ರಶ್ನೆಗಳು ಎಲ್ಲರ ಮನದಲ್ಲಿ ಬೆಳೆಯುತ್ತಿದ್ದವು. ಆದರೆ, ಉತ್ತರ ಮಾತ್ರ ಇನ್ನೂವರೆಗೂ, ಯಾರಿಗೂ ದೊರೆತಿರಲಿಲ್ಲ. ಅದು ಸಾಮಾನ್ಯ ಜನರಿಗೆ ಹೊಳೆಯುವಂತೆಯೂ ಇರಲಿಲ್ಲ.

ನಿಜ ಹೇಳಬೇಕೆಂದರೆ, ಆ ಮನೆಯ ಯಜಮಾನನ ಹೆಸರು ..ಹೇಮಂತ ; ಇನ್‌ಸ್ಪೆಕ್ಟರ್ ಹೇಮಂತ,... ಹೇಮಂತ ಸಿ ಐ ಡಿ. ಇಲಾಖೆಯ ಪ್ರತಿಷ್ಠೆಗೆ ಕೋಡು ಮೂಡಿಸಿದ ವ್ಯಕ್ತಿಯಾಗಿದ್ದ. ಎಂತಹದೇ ಜಟಿಲವಾದ ಸಮಸ್ಯೆ ಇರಲಿ, ಅದು ಅವನ ಕೈಗೆ ಬಂದಿತೆಂದರೆ, ಕೆಲವೇ ದಿನಗಳಲ್ಲಿ ಅದು ಪರಿಹಾರವಾಯಿತೆಂದೇ ತಿಳಿಯಬೇಕು. ಅವನಷ್ಟು ಕುಶಲ, ಚಾಣಾಕ್ಷ, ಧೈರ್ಯಶಾಲಿ ಅಧಿಕಾರಿ ಯಾರೂ ಇಲ್ಲವೆಂದು ಸಿ.ಐ.ಡಿ. ಇಲಾಖೆಯೇ ಮಾತನಾಡುತ್ತಿತ್ತು.

ಸಿಂಹದ ಗವಿಯಲ್ಲಿ ಹೊಕ್ಕು, ಅದರೊಂದಿಗೆ ಆಟವಾಡಿ ಬರುವ ಎದೆಗಾರಿಕೆ ಅವನಿಗಿದೆಯೆಂದು ಎಲ್ಲೆಲ್ಲೂ ಪ್ರತೀತಿ! ..ಹತ್ತೆಂಟು ಕೊಲೆ, ದರೋಡೆ ಮಾಡಿ, ಜನರ ಪಾಲಿಗೆ ಭಯ-ಭೀತಿಗಳ ಕನಸಾಗಿದ್ದುಕೊಂಡು, ಪೋಲೀಸ್ ಇಲಾಖೆ ತಲೆ ನೋವಾಗಿ ಕಠಿಣವೆನಿಸಿದ ನಾ-ನೀ-ಎನ್ನುವ ಕೊಲೆಗಡುಕರು -ದರೋಡೆಕೋರರಿಗೆ, ಆತ-ಚಳ್ಳೆ ಹಣ್ಣು ತಿನ್ನಿಸಿದ್ದ. ಹೀಗಾಗಿ,ಇನ್‌ಸ್ಪೆಕ್ಟರ್ ಹೇಮಂತನ ಹೆಸರು ಸಾರ್ವಜನಿಕರಿಗೆ ಅಷ್ಟು ಹತ್ತಿರವಾಗದಿದ್ದರೂ, ಅಪರಾಧ ಜಗತ್ತಿನಲ್ಲಿಯ ಕೇಡಿಗಳಿಗೆಲ್ಲ ಅವನ ಹೆಸರು ಚೆನ್ನಾಗಿ ಗೊತ್ತು. ಅವನ ಹೆಸರು ಕೇಳಿದರೆ ಸಾಕು—ಅವರೆಲ್ಲ ಚಳಿ ಬಂದವರಂತೆ, ನಡುಗುತ್ತಿದ್ದರು. ಅವರ ಪಾಲಿಗೆ ಆತ ಸಾಕ್ಷಾತ್ ಯಮನಾಗಿದ್ದ. ಹೇಮಂತನನ್ನು ಮುಗಿಸಿ ಬಿಡಲು ಎಷ್ಟೋ ಪ್ರಯತ್ನಗಳು ನಡೆದಿದ್ದವು. ಆದರೆ ಪರಿಣಾಮ ಮಾತ್ರ ಶೂನ್ಯ ಹೇಮಂತನನ್ನು ಮುಗಿಸಲು ಬಂದವರೇ, ಅವನ ಕೈಯಲ್ಲಿ ಪರಾಜಿತರಾಗಿ, ಕೆಲವರು ಯಮಪುರಿಗೆ ಸೇರಿದರೆ, ಮತ್ತೆ ಕೆಲವರು ಶ್ರೀಕೃಷ್ಣನ ಜನ್ಮಸ್ಥಾನವಾದ ತುರಂಗ ಕಂಡಿದ್ದರು. ಹೇಮಂತ ಮಾತ್ರ ಅವರೆಲ್ಲರ ಪಾಲಿಗೆ ಒಂದು ಭೀತಿಯ ನೆರಳಾಗಿ, ಅಜೇಯನಾಗಿ ನಿಂತಿದ್ದ, ಜೀವಂತವಾಗಿ ಇಂದಿನವರೆಗೂ.

ಬೆಳಗು ಇನ್ನೂ ಏಳು ಸಹ ಹೊಡೆದಿರಲಿಲ್ಲ ಪೋನಿನ ಗಂಟೆ ಬಾರಿಸಿತು; ಟ್ರಿನ್ ..ಟ್ರಿನ್ . ಟ್ರಿನ್ ..! ಪೇಪರ್ ಓದುತ್ತಾ ಕುಳಿತಿದ್ದ ಸೂರಪ್ಪ, ರಿಸೀವರ್ ಎತ್ತಿ ಮಾತನಾಡಿದ

"ಎಸ್ ಸುದ್ದೀ ಸೂರಪ್ಪ—ಹಿಯರ್ !"

"ಡಬಲ್ ಚಿಕನ್ ಬಿರಿಯಾನಿ ಮಾತನಾಡ್ತಾ ಇರೋದು."

"ಅಂ ಏನು? ..ಡಬ್ಬಲ್ ಚಿಕನ್ ಬಿರಿಯಾನಿನಾ?. ವ್ಹಾರೇ,.... ಬೆಳಿಗ್ಗೆ ಎದ್ದ ಕೂಡಲೇ ಎಂತಹ ಪಕ್ವಾನ್ನ ದೊರೆಯಿತಲ್ಲ! ವ್ಹಾರೇ ಗುರು ನಿನ್ನ ದಯೆ ಇದೇ ರೀತಿ ನನ್ನ ಮೇಲಿರಲೀ" ..."ಏಯ್! ತಲೆ ಹರಟೆ ಬೇಡ ... ಹೇಮಂತರಿಗೆ ಕರೆ .ಏಯ್ "ಏನಯ್ಯಾ ...ನೀನೆ ಫೋನು ಮಾಡ್ಬಿಟ್ಟು, ಡಬ್ಬಲ್ ಬಿರಿಯಾನಿ ಅಂತಾ ಹೇಳೀ ನನ್ನ ಬಾಯಲ್ಲಿ ಜುಳು, ಜುಳು ನೀರು ತರಿಸಿ, ಈಗ ನನಗೆ ರೋಪ್ ಹಾಕ್ತೀಯಾ? ..ನಾನಂದ್ರೇ ಏನೂಂತ ತಿಳಿದಿದೀಯಾ? ಸುದ್ದೀ—ಸೂರಪ್ಪ ಅಂದ್ರೇ ಸಾಮಾನ್ಯನಲ್ಲ. ಡಬ್ಬಲ್ ಚಿಕನ್ ಬಿರಿಯಾನಿ ಆದ ನಿನ್ನನ್ನು, ಕ್ಷಣಾರ್ಧದಲ್ಲಿ, ಇಡ್ಲಿ—ಸಾಂಬರ್ ಮಾಡಿ ಬಿಟ್ಟೇನು! ..ಹುಷಾರ್. ..ಸ್ವಲ್ಪ ಮರ್ಯಾದೆಯಿಂದ ಮಾತಾಡು .."

"ಏಯ್ ತಲೆ ಹರಟೆ! ...ಹೇಮಂತಗೆ ಕರೆ ಅಂದ್ರೇ ನಿನ್ನ ಪುರಾಣ ಪ್ರಾರಂಭ ಮಾಡಿದೆಯಲ್ಲ. ಬಾಯಿಮುಚ್ಕೊಂಡುಹೋಗಿ ಕರೆಯಯ್ಯಾ!....

"ಏನಯ್ಯಾ ನೀನು ಹೇಳ್ತಾ ಇರೋದು? ಬಾಯಿ ಮುಚ್ಚಿಕೊಂಡು ಹೋಗಿ, ಕರೆ ಅಂತೀಯಾ? ಬಾಯಿ ಮುಚ್ಚಿಕೊಂಡ ಮೇಲೆ ಕರಯೋದು ಹೇಗೆ? ಅಂ?"

"ಏಯ್ ಬೇವಕೂಫ್! ..ಇನ್ನೊಂದು ಮಾತೇನಾದ್ರು ನೀ ಆಡಿದ್ರೇ— ನಾ ಅಲ್ಲಿಗೇ ಬಂದು, ಹೇಮಂತನ ಎದುರಿಗೆ ನಿನ್ನ ಚಚ್ಚಿಬಿಡ್ತೀನಿ ನೋಡು ....! ಹೋಗಯ್ಯಾ—ಕರೆ"

"ಅಯ್ಯೋ! ಪುಣ್ಯಾತ್ಮ—ಹಾಗೆ ಮಾತ್ರ ಮಾಡಬೇಡ ಹಾಗೇನಾದ್ರೂ ಆದ್ರೇ, ಇಪ್ಪತ್ತು ವರ್ಷದಿಂದ ಬಂದ ಈ ಪಿ.ಸಿ. ನೌಕರಿ ಸಹ ಹೊರಟು ಹೋಗ್ತುತ್ತೆ! ಆದರೆ ಬಾಪರೇ! ..ನಾನು-ಪಿ.ಸಿ. ಅಂತ ಹೇಳಿಬಿಟ್ಟೆನಲ್ಲಾ?! ಏಯ್ ದೊಡ್ಡ ಮನುಷ್ಯ—ನಾನು, ಪಿ. ಸಿ ಅಂದರೆ, ಪೋಲೀಸ್ ಕಾನ್‌ಸ್ಟೇಬಲ್ ಅಂತ ಅಂದದ್ದು, ನಿನಗೆ ಕೇಳಿಸ್ತಾ?"

"ಇಲ್ಲ ..ಇಲ್ಲ .ನೀನು ಪಿ.ಸಿ. ಅಂದದ್ದು ನನಗೆ ಕೇಳಿಸಿಲ್ಲ ..ಸರೀನಾ?"

"ಸಧ್ಯ! ದೇವರು—ನನ್ನನ್ನು ಕಾಪಾಡಿದ!"

"ಹಾಗಾದರೆ, ಹೋಗಿ ಹೇಮಂತನನ್ನು ಕರೆ!"

"ಸರೀ—ಮರಾಯ್ರೇ!, ಅಂದಹಾಗೇ ನಿಮ್ಮ ಹೆಸರು?"

"ಡಬ್ಬಲ್ ಚಿಕನ್ ಬಿರಿಯಾನಿ."

"ವಾಹರೆ ಗುರು! ..ಬೆಳಿಗ್ಗೆ ಏಳತ್ಲೂ ಪೊಗದಸ್ತಾದ ಹೆಸರೇ ಕಿವಿಗೆ ಬಿತ್ತಲ್ಲ! ಸ್ವಲ್ಪ ಇರಿ!"

ಮುಸುಗೆಳೆದುಕೊಂಡು ಮಲಗಿದ್ದ ಹೇಮಂತ, ಪ್ರತಿನಿತ್ಯ ಬೆಳಿಗ್ಗೆ ಐದು ಗಂಟೆಗೆ ಎದ್ದು ಸ್ವಲ್ಪ ರನ್ನಿಂಗ್, ಸ್ವಲ್ಪ ವ್ಯಾಯಮ ಮಾಡುವುದು ಅವನ ರೂಢಿ ಆದರೆ ಹಿಂದಿನ ರಾತ್ರಿ, ಎರಡು ಗಂಟೆಯವರೆಗೂ ಕ್ಲಬ್‌ಮೇಲೆ ದಾಳಿಮಾಡಿ, ಅಲ್ಲಿಯ ವೇಶ್ಯಾಲಯ ಹಾಗೂ ಜೂಜಿನಾಟ ಬಯಲಿಗೆ ತಂದು, ಅವರನ್ನೆಲ್ಲಾ ಪೋಲೀಸರಿಗೆ ಒಪ್ಪಿಸಿ, ಬರುವದರಲ್ಲಿ, ಬೆಳಿಗ್ಗೆ ನಾಲ್ಕು ಗಂಟೆಯಾಗಿತ್ತು. ಹೀಗಾಗಿ, ಅಂದು ಹೇಮಂತ, ಎದ್ದಿರಲಿಲ್ಲ. ಇನ್ನೂ ಮಲಗಿಯೇ ಇದ್ದ.

ಸೂರಪ್ಪ, ಎರಡು ಮೂರು ಬಾರಿ. 'ಸರ್. ಸರ್, ಸರ್,' ಎಂದು ಕೂಗಿದಾಗ, "ಊಂ . ಊಂಊಂಊಂ" ಎಂದು ಮುಲಗಿ ಮಗ್ಗುಲು ಬದಲಿಸಿದ್ ಏಳಲಿಲ್ಲ. "ಸರ್, ಫೋನು ಬಂದಿದೆ ಡಬ್ಬಲ್ ಚಿಕನ್ ಬಿರಿಯಾನಿ—ಅಂತೆ!

ಅಲ್ಲಿಯವರೆಗೂ ನಿದ್ದೆಯ ಮಬ್ಬಿನಲ್ಲಿದ್ದ ಹೇಮಂತನಿಗೆ ಡಬ್ಬಲ್ ಚಿಕನ್ ಬಿರಿಯಾನಿ ಎಂಬ ಹೆಸರು ಕಿವಿಗೆ ಬೀಳುತ್ತಲೇ ಅವನ ನಿದ್ದೆಯ

ಮಬ್ಬು ಫುರ್ರ್ ಎಂದು ಹಾರಿಹೋಯಿತು. ಸ್ಪ್ರಿಂಗ್‌ನಂತೆ ನೆಗೆದು ನಿಂತ ಹೇಮಂತ, ಎರಡೇಹಾರಿಕೆಗೆ ಫೋನ್ ಬಳಿಬಂದಿದ್ದ. ರಿಸೀವರ್ ಎತ್ತಿಕೊಂಡು,

'ಹಲೋ! .ಹೇಮಂತ ದಿಸ್ ಎಂಡ್'' ಎಂದ. ಆಕಡೆಯಿಂದ—'ಏನು ಇಷ್ಟು ಲೇಟು? ಇಷ್ಟು ಹೊತ್ತು ನಿಂತರೆ, ನಾನು ಸಾವಿಗೆ ಶರಣಾಗ ಬೇಕಾಗುತ್ತೆ' ಎಂದಿತು ಡಬ್ಬಲ್ ಚಿಕನ್ ಬಿರಿಯಾನಿ.

"ಸಾರೀ! ಮೆಸೇಜ್ ಹೇಳಿ..."

"ಸರಿ! ..ಇಂದೇ, ಬೆಳಗಿನ ರಾಜಧಾನಿ ಎಕ್ಸಪ್ರೆಸ್ ಟ್ರೈನಿನಲ್ಲಿ ಅದೂ—ಫಸ್ಟ್ ಕ್ಲಾಸ್ ಕಂಪಾರ್ಟಮೆಂಟನಿಂದ ಸುಮಾರು ಐದು ಲಕ್ಷ ರೂಪಾಯಿಗಳ ಚರಸ್...ಗಾಂಜಾ ಸ್ಮಗ್ಲ್ ಆಗ್ತಾ ಇದೆ!"

"ಓಹ್! ಗಾಡ್! ..ಟ್ರೈನು ಬರುವುದು ಎಂಟೂವರೆಗೆ ಅಲ್ವಾ?. "

"ಹೌದು! ..ಅದಕ್ಕೇ ನಾನು—ಇಷ್ಟು ಅರ್ಜೆಂಟಾಗಿ ತಿಳಿಸಿದ್ದು! ತುಂಬಾ ಉಪಕಾರವಾಯ್ತು! .."ನಾನು ಕೂಡಲೇ, ಸಿದ್ಧತೆ ಮಾಡಿಕೊಳ್ಳಬೇಕು ."

"ಓಕೆ, ಓಕೆ! ..ಹಾಗೆ, ನಿನ್ನ ಆ ಸೂರಪ್ಪನಿಗೆ ಹೇಳಿಬಿಡು ನನ್ನ ಫೋನು ಬರುತ್ತಲೇ, ತಲೆಹರಟೆ ಮಾಡುವ ಬದಲು, ನಿನಗೆ ಕರೆಯುಲು—ವಾರ್ನಿಂಗ್ ಮಾಡೀ "

"ಆಯ್ತು ...ಗುಡ್ ಮಾರ್ನಿಂಗ್! ಬಾಯ್!" ಹೇಮಂತ, ರಿಸೀವರ್ ಕೆಳಗೆ ಕುಕ್ಕುವದಕ್ಕೂ,"ಸೂರಪ್ಪ ಏನ್‌ಸರ್—ಬಾಯ್ ಅಂತೀರಾ? ಆಗಲೇ, ಚಿಕನ್ ಬಿರಿಯಾನಿ ಬಾಯ್‌ಗೆ ಬಿದ್ದಾಯ್ತಾ?" ಎಂದ. ಹೇಮಂತ, ಅವನ ಮೇಲೆ ಹುಲಿಯಂತೆ ಹಾರಿ ಗದರಿದ—ಯೂ ಫೂಲ್!. ನಿನಗೆ ಯಾವಾಗಲೂ, ಅದೇ ಧ್ಯಾನ! .ಅದಕ್ಕಂತಲೇ, ಇಪ್ಪತ್ತು ವರ್ಷದಿಂದ, ಪಿ.ಸಿ. ಆಗೇ ಇರುವೆ. ಚೆನ್ನಾಗಿ ಕೆಲಸ ಮಾಡಿದ್ರೇ—ಇಷ್ಟು ಹೊತ್ತಿಗೆ ಎಸ್.ಪಿ. ಆಗ್ತಿದ್ದೆ."

"ಹೌದು ಸರ್!....ನೀವು ಹೇಳೋದು ಸೆಂಟ್ ಪರ್ಸೆಂಟ್ ಕರೆಕ್ಟ್ ಸರ್ ಆದ್ರೆ—ಏನು ಮಾಡೋದು, ನನ್ನ ಹಣೇಬರಹ ಅದೇ ನಿಮ್ಮದು ನೋಡಿ . ಬಂದು ಐದು ವರ್ಷ ಆಗಿಲ್ಲ, ಆಗ್ಲೇ—ಎಸ್.ಪಿ ಯಿಂದ ಇನ್‌ಸ್ಪೆಕ್ಟರ್ ಆದ್ರೀ .."

"ಅಯ್ಯೋ! . ಛೀ ..ಛೀ ಮತ್ತೆ ತಲೆಹರಟೆಗೆ ನಿಂತೆಯಲ್ಲ, ಸೂರಪ್ಪಾ .! ಇನ್ನೊಮ್ಮೆ ಚಿಕನ್ ಬಿರಿಯಾನಿ ಫೋನು ಬಂದ್ರೇ, ಒಂದು ಕ್ಷಣಾನೂ ಕಳಿಯದೇ—ನನಗೆ ತಿಳಿಸಬೇಕು, ಇದು, ನನ್ನ ಆರ್ಡರ್...."...."ಹೂಂ....

ಹೋಗೀ, ತಯಾರಾಗು ..ಹೋಗಬೇಕಾಗಿದೆ !"

"ಸರಿಸಾರ್ !" ಎಂದ ಮೆತ್ತಗೆ ಸೂರಪ್ಪ. ಹೇಮಂತ ಬಾತ್‌ರೂಂಗೆ ನುಗ್ಗುತ್ತಲೂ, "ಎಲ್ಲಾ ಚಿಕನ್ ಬಿರಿಯಾನೀ ತಾವೇ ತಿನ್ನಬೇಕು ಅಂತಾರೇ ಸಾಹೇಬ್ರು! ನನಗೆ ಚಿಕ್ಕ-ಚಿಕ್ಕ ಮೂಳೇನಾದ್ರೂ ಉಳಿಸ್ತಾರೋ ಇಲ್ಲೋ " ಎಂದು ಗೊಣಗಿಕೊಂಡ

ಹೇಮಂತನ ಮೋಟಾರ್ ಬೈಕ್ ಬಂದು, ರೈಲು ನಿಲ್ದಾಣದ ಎದುರು ನಿಲ್ಲುತ್ತಲು, ಪಾರ್ಕ್ ಮಾಡಿದ ಹೇಮಂತ, ಚಿಗರೆಯಂತೆ ನೆಗೆಯುತ್ತಾ, ನಿಲ್ದಾಣದ ಒಳಗೆ ಹೊರಟ ಅವನ ಹಿಂದೆ ಸೂರಪ್ಪ, ಸೂರಪ್ಪನ ಹಿಂದೆ, ಜೀಪಿನಿಂದಿಳಿದ ಆರು ಜನ ಪಿ ಸಿ —ಅವನನ್ನು ಹಿಂಬಾಲಿಸಿದರು. ರೈಲು ಬರಲು ಕೇವಲ ಎರಡೇ ನಿಮಿಷಗಳು ಉಳಿದಿದ್ದವು ಮಧ್ಯೆ—ಡ್ರೆಸ್‌ನಲ್ಲಿದ್ದ ತನ್ನ ಸಿಬ್ಬಂದಿಗೆ ಯಾವ ರೀತಿ ರೇಡ್ ಮಾಡಬೇಕೆಂಬುದನ್ನು ಹೇಮಂತ ಪಟಪಟನೆ ತಿಳಿಸಿ ಹೇಳಿದ ಅವರೆಲ್ಲರೂ, ಆಗಲೇ, ಅವನ ಕೈಯಲ್ಲಿ ಕೆಲಸ ಮಾಡಿ ನುರಿತವರು ಸ್ವಲ್ಪ ಸೂಚನೆ ಕೊಟ್ಟರೆ ಸಾಕು ..ಅದಕ್ಕೆಂದೇ, ಹೇಮಂತನ ಮಾತಿಗೆ ಸಾಕು ಅವರು ತಲೆಯಾಡಿಸಿದರು. ಅಷ್ಟೇ! ..

ರೈಲು ಇನ್ನೂ ನಿಂತಿರಲಿಲ್ಲ ರೈಲಿನೊಡನೆ ಓಡುತ್ತಾ ಹೇಮಂತ, ಫಸ್ಟ್‌ಕ್ಲಾಸ್ ಕಂಪಾರ್ಟ್‌ಮೆಂಟ್‌ನೊಳಗೆ ನುಗ್ಗಿದ ಆನಂತರ ಒಬ್ಬೊಬ್ಬರಾಗಿ ಅವನ ಸಿಬ್ಬಂದಿ, ಒಳಗೆ ಪ್ರವೇಶಿಸಿತು. ಪ್ರಯಾಣಿಕರಿಗೆ ಹೇಮಂತ ವಿನಂತಿಸಿಕೊಂಡು, ತನ್ನ ಕೆಲಸದಲ್ಲಿ ಸಹಕಾರ ನೀಡಬೇಕೆಂದು ಕೇಳಿಕೊಂಡ. ಸರೀ–ಶುರುವಾಯಿತು ತಪಾಸಣೆ. ಪ್ರತಿಯೊಬ್ಬ ಪ್ರಯಾಣಿಕನ ಸಾಮಾನುಗಳನ್ನು ಕೂಲಂಕಶವಾಗಿ ಪರಿಶೀಲಿಸಿ, ಹೇಮಂತ 'ಓ ಕೆ' ಅಂದಮೇಲೆ, ಅವರನ್ನು ಬೋಗಿಯಿಂದ ಹೊರಗೆ ಬಿಡಲಾಗುತ್ತಿತ್ತು. ರೈಲು ಆ ನಿಲ್ದಾಣದಲ್ಲಿ ಇಪ್ಪತ್ತು ನಿಮಿಷ ನಿಲ್ಲುತ್ತಿತ್ತು. ಹೀಗಾಗಿ ಯಾವ ತೊಂದರೆಯೂ ಬರಲಿಲ್ಲ.

ಕೊನೆಯದಾಗಿ ಉಳಿದವರೆಂದರೆ, ಆರೆಂಟು ಜನ ನವ ಯುವತಿಯರು. ಎಲ್ಲರೂ ಆಧುನಿಕ ರಮಣಿಯರು ಒಬ್ಬರಿಗಿಂತ ಒಬ್ಬರು, ತಮ್ಮ ಸೌಂದರ್ಯದಿಂದ, ಎದುರಿಗಿದ್ದವರ ಮನದಲ್ಲಿ ಆಸೆಯ ಬೆಂಕಿ ಹೊತ್ತಿಸುವಂಥವರೇ! ಅದರ ಮೇಲೆ ಅತ್ಯಾಧುನಿಕ ರೀತಿಯಿಂದ ಹೊಲಿದ ಬಟ್ಟೆ ಧರಿಸಿದವರೇ .. ಕೇಳಬೇಕೇ! .

ಅವರೆಲ್ಲರ ಮಧ್ಯೆ ಮಾತ್ರ ಓರ್ವ ಸುಂದರಿ! ..ಅವರೆಲ್ಲರಿಗಿಂತ ಭಿನ್ನವಾಗಿ ಕಂಡಳು—ಹೇಮಂತನಿಗೆ! ಅದೂ ಒಂದು ಆಚ್ಚರಿಯ ಸಂಗತಿ!....

ಸಾದಾ ಹರಿದ ನೂಲಿನ ಸೀರೆ ಕುಪ್ಪಸ ತೊಟ್ಟ ಆಕೆಯ ಮುಖದ ಮೇಲೆ ಗಾಂಭೀರ್ಯ ತುಂಬಿ ತುಳುಕುತ್ತಿತ್ತು. ಉಳಿದ ಯುವತಿಯರೆಲ್ಲ ಆಕೆಯನ್ನು ಸುತ್ತುಗಟ್ಟಿ ನಿಂತಿದ್ದಾರೆ. ಆಕೆ ಮಾತ್ರ ಕುಳಿತೇ ಇದ್ದಳು—ಯಾವುದೋ ದೇಶದ ಮಹಾರಾಣಿಯಂತೆ! ಹೇಮಂತನಿಗೆ, ಕಿಂಚಿತ್ತೂ ಆಕೆ ಸೊಪ್ಪು ಹಾಕಿದಂತೆ ಕಾಣುತ್ತಿರಲಿಲ್ಲ. ಹೇಮಂತ ಅವರ ಬಳಿ ಬಂದು, ಅವರ ಸೂಟ್‌ಕೇಸಿಗೆ ಕೈ ಹಾಕುವುದಕ್ಕೆ—ಆಕೆ ತಡೆದು, ಹೇಳಿದಳು

"ರೀ ಮಿಸ್ಟರ್, .ನೀವು ಯಾರು ? .ನಮ್ಮ ತಪಾಸಣೆ ನಡೆಸಲು ನಿಮಗೇನು ಅಧಿಕಾರವಿದೆ ? ನಮ್ಮೆಲ್ಲರನ್ನು ತಪಾಸಿಸಲು ಏನು ಕಾರಣ ಹೇಳದೇ ನಮ್ಮ ಸಾಮಾನುಗಳನ್ನು ನೀವು ಮುಟ್ಟಕೂಡದು" ಮೆದುವಾಗಿ ಆಕೆ ಹೇಳಿದ್ದರೂ, ಆಕೆಯ ಧ್ವನಿಯಲ್ಲಿ ಒಂದು ಬಗೆಯ ಗಾಂಭೀರ್ಯ, ಎಚ್ಚರಿಕೆ, ಎಲ್ಲಕ್ಕಿಂತ ಹೆಚ್ಚಾಗಿ ಗರ್ವ ತುಂಬಿ ತುಳುಕುತಿತ್ತು. ಅದನ್ನು ಸೂರಪ್ಪ, ಒಂದು ಕ್ಷಣ ಪಿಳಿ-ಪಿಳೀ ಕಣ್ಣುಬಿಟ್ಟು, ಮನದಲ್ಲಿಯೇ ಅಂದು ಕೊಂಡ—"ವಾಹರೇ ಮುರ್ಗಿ ಒಳ್ಳೇ ಪಸಂದಾಗೈತೀ ನಮ್ಮ ಗುರುಗೇ—ಗುರ್‍ರ್ ಅಂತಾ ಇದೆಯಲ್ಲಾ ಅಂ ?

ಹೇಮಂತ ಅವರ ಮಾತಿಗೆ ಉತ್ತರ ಕೊಡುವ ಮೊದಲು, ಜೇಬಿನಿಂದ ಐಡೆಂಟಿಟೀ ಕಾರ್ಡು ತೆಗೆದು ಆಕೆಯ ಮುಂದೆ ಹಿಡಿದು ಹೇಳಿದ .

"ಇನ್‌ಸ್ಪೆಕ್ಟರ್ ಹೇಮಂತ ..ಸಿ.ಐ.ಡಿ .! ಓದಲು ಬರುತ್ತೆ ತಾನೆ ?"

ಆಕೆ, ಒಂದು ಬಾರಿ ಕಾರ್ಡಿನತ್ತ ದೃಷ್ಟಿ ಹರಿಸಿದಳು. ಅಷ್ಟೇ ! ಅವಳ ಬಾಯಿಯಿಂದ ಉತ್ತರ ಬರಲಿಲ್ಲ. ಆದರೆ, ಅವಳ ಓರ್ವ ಗೆಳತಿ ಮಾತ್ರ ಉತ್ತರಿಸಿದಳು.

"ರೀ ಮಿಸ್ಟರ್ ..ಇವರು ಯಾರೂಂತ ತಿಳದಿದೀರಾ ? ಇವರ ಮೇಲೆ ಇರುವ ಹರಕು ಬಟ್ಟೆ ನೋಡಿ, ಬಡವರು ಅಂತಾ ತಿಳಿದು ದಬಾಯಿಸಲು ಬಂದಿದ್ದೀರಾ ? ಇವರು ಶಾಂತಿ—ಬಿ.ಎ. ಓದುತ್ತಿದ್ದಾಳೆ. ಇವಳ ತಂದೆ, ನಾಡಿಗೇ ದೊಡ್ಡ ಶ್ರೀಮಂತರು ಉದ್ಯಮಿಗಳು. ಅವರ ಹೆಸರು ಕೇಳಿದರೆ, ನಿಮ್ಮಂಥಾ ಸಾಹೇಬರೂ ಸಹ, ಎದ್ದುನಿಂತು ಸಲಾಮು ಹೊಡೆಯುತ್ತಾರೆ."

"ಅಂ ?! ...ಹೀಗಾ ?!" ಎಂದ ಸೂರಪ್ಪ—'ಅಂ' ಎಂದು 'ಆ' ಕಾರದಷ್ಟು ಬಾಯಿ ತೆರೆದು—

"ಹೂಂ ..ಈಗ ಅರ್ಥವಾಯ್ತಾ ?!"

"ರೀ....ನನಗೆ—ನಿಮ್ಮ ಗೆಳತಿ ಜನ್ಮ ಕುಂಡಲಿ ಬೇಕಾಗಿಲ್ಲ. ಅವರಪ್ಪ,

ಶ್ರೀಮಂತನೇ ಆಗಿರಲೀ ಭಿಕಾರೀನೇ ಆಗಿರಲೀ—ಅದನ್ನ ತಗೊಂಡು ನನಗೇನ ಆಗಬೇಕಾಗಿದೆ. ನನಗೆ ಯಾರಾದರೂ ಅಷ್ಟೇ—ಸ್ಮಗಲ್ ಮಾಲು ತಪಾಸಣೆ ಮಾಡಬೇಕಾಗಿದೆ. ಮಧ್ಯೆ ತಡೆದರೆ, ನಿಮ್ಮೆಲ್ಲರನ್ನೂ ಲಾಕ್‌ಪ್‌ಗೆ ಕಳಿಸ ಬೇಕಾಗುತ್ತೆ ಹುಷಾರ್ ."

ಎಲ್ಲರಿಗೂ ಸರ್ಪ ಕಚ್ಚಿದಂತಾಯಿತು. ಯಾರೂ ತುಟಿ ಎರಡು ಮಾಡಲಿಲ್ಲ. ತಪಾಸಣೆ ಪ್ರಾರಂಭವಾಯಿತು. ಅಲ್ಲಿ—ಏನೂ ದೊರೆಯಲಿಲ್ಲ ಕೊನೆಗೆ ಉಳಿದದ್ದು ಆ ಯುವತಿ !—ಅಂದರೆ—ಶಾಂತಿಯು ಕೈಲಿದ್ದ ಏರ್ ಬ್ಯಾಗ್ ಒಂದೇ ! ಅವಳೆಡೆ ನೋಡಿ ನುಡಿದ ಹೇಮಂತ

"ಮಿಸ್ ಶಾಂತೀ ! ಆ ಏರ್ ಬ್ಯಾಗ ನಿಮ್ಮದು ತಾನೇ ?"

"ಅಂದರೆ ಏನರ್ಥ ?—ನನ್ನದಲ್ಲವೇ—ನಿಮ್ಮದಾಗಲು ಸಾಧ್ಯವೇ ?"

"ಓ.ಕೆ ಓ.ಕೆ ಬಾಬಾ ! ..ಸ್ವಲ್ಪ, ದಯಮಾಡಿ, ಆ ಬ್ಯಾಗ ಇತ್ತ ಕೊಡ್ತೀರಾ ?"

"ಕೊಡುವದಿಲ್ಲ."

"ಪ್ಲಿಸ್ .ಕೊಡಿ ಶಾಂತೀ ..ನಮ್ಮ ಕೆಲಸದಲ್ಲಿ ತೊಂದರೆ ಕೊಡಬೇಡಿ "

"ನೋಡಿ, Inspector, ಈ ಬ್ಯಾಗ್ ನನ್ನ ಕೈಯಲ್ಲಿದೆಯಾದರೂ, ಇದು ನನ್ನದಲ್ಲ ಇದರ ಒಳಗೆ ಏನಿದೆಯೋ, ನನಗೆ ತಿಳಿಯದು ಇದರ ಯಜಮಾನನ ಹೊರತು, ಇದನ್ನು ಯಾರೂ ಮುಟ್ಟುವಂತಿಲ್ಲ."

"ಯಾರು ಅದರ ಯಜಮಾನ ?"

"ಅವರೂ ನಿಮ್ಮ ಜಾತಿಯವರೇ ?"

"ಅಂದರೇ ?"

"ಅಂದರೇ .?—ಅವರೂ ಪೋಲೀಸರೇ—ಪೋಲೀಸ್ ಇನಸ್ಪೆಕ್ಟರ್ !"

"ಆಂ ?—ಏನಂದಿರಿ ?"

"ಪಾಪ ! .ಕಿವಿ ಚೆನ್ನಾಗಿ ಕೇಳೋದಿಲ್ಲ ಅನ್ನಿಸತ್ತೆ !"

ಘೋಳ್-ಎಂದು ನಕ್ಕರು—ಗೆಳತಿಯರು. ಸೂರಪ್ಪ ಮುಖ ಕಿವುಚಿ "ಇಂದು, ನಮ್ಮ ಸಾಹೇಬರಿಗೆ ಪೊಗದಸ್ತಾಗಿ ಸಿಗ್ತು" ಎಂದು ಗುನುಗಿದ. ಮೊದಲು ಮಾತನಾಡಿದ್ದ ಶಾಂತಿ ಗೆಳತಿ ಹೇಳಿದಳು,

"ನೋಡಿ ಆಫೀಸರ್ ! ಹಿಂದಿನ ನಿಲ್ದಾಣದಲ್ಲಿ ಓರ್ವ ಪೋಲೀಸ್ ಇನಸ್ಪೆಕ್ಟರ್ ಬಂದು, ಈ ಬ್ಯಾಗನ್ನು ಶಾಂತಿಯ ಕೈಗೆ ಕೊಟ್ಟು ಹೇಳಿದರು : ಅಮ್ಮಾ...ಇದರಲ್ಲಿ ಸರಕಾರದ ರಹಸ್ಯಗಳಿವೆ ನನ್ನ ಹಿಂದೆ ಕೇಡಿಗಳು ಬಿದ್ದಿದ್ದಾರೆ. ಕಾರಣ, ಈ ಬ್ಯಾಗ್ ನಿನ್ನ ಬಳಿ ಇರಲಿ, ಮುಂದಿನ ನಿಲ್ದಾಣ

ದಲ್ಲಿ, ನಾನೇ ಬಂದು ಇಸಿದುಕೊಂಡು ಹೋಗುತ್ತೇನೆ. ನೀನು ಮಾತ್ರ ಇದನ್ನು ಯಾರ ಕೈಗೂ ಕೊಡಬೇಡ. ಈಗ ನೀವೇ ಹೇಳೀ, ಶಾಂತಿ ಇದನ್ನು ನಿಮ್ಮ ಕೈಗೆ ಹೇಗೆ ಕೊಟ್ಟಾಳು ?"

"ಅವರು ಪೋಲೀಸ್ ಇನಸ್ಪೆಕ್ಟರ್ ಅಂತಾ ನಿಮಗೆ ಹೇಗೆ ಗೊತ್ತಾಯ್ತು ?"

"ಏಕೆ ನಮಗೆ ಕಣ್ಣಿಲ್ವೇ ? ಪೋಲೀಸ್ ಡ್ರೆಸ್ ಇಲ್ಲದ ನೀವೇ ಬಂದು, ನಾನು ಇನ್‌ಸ್ಪೆಕ್ಟರ್ ಹೇಮಂತ ಅಂತ ಹೇಳಿದಾಗ ನಾವೆಲ್ಲ ನಂಬಿದ್ದೇವೆ. ಹಾಗಿರುವಾಗ, ಮೈಮೇಲೆ ಫುಲ್ ಡ್ರೆಸ್ ಹಾಕಿಕೊಂಡು ಬಂದವರನ್ನು ನಂಬೋಕೂ—ಸಂಶಯವೇ ?"

ಖೊಸಕ್ ಎಂದರು ಗೆಳತಿಯರು. ಸಮಯ ಮೀರುತ್ತ ಬಂದಿತು. ರೈಲು ಹೊರಡುವ ಮೊದಲ ಗಂಟೆ ಬಾರಿಸಿತು ಹೇಮಂತ ಅವಸರ ಮಾಡಿದ.

"ನಿಮಗೆ ಕೊಟ್ಟವರು ನಿಜವಾಗಿಯೂ ಪೋಲೀಸ್ ಇನ್‌ಸ್ಪೆಕ್ಟರೇ ಆಗಿದ್ದರೇ ಅವರಿಗೆ ನಾನು ತಿಳಿಸಿ ಹೇಳುತ್ತೇನೆ—ಬ್ಯಾಗ್ ಕೊಡೀ."

"ಆಗೋದಿಲ್ಲ."

"ಮಿಸ್ ಶಾಂತೀ—ಬ್ಯಾಗ್ ಕೊಡೀ."

"ಕೊಡೋದಿಲ್ಲ."

"ಭರತ್" ಎಂದು ಅವಳ ಕೈಯಲ್ಲಿದ್ದ ಬ್ಯಾಗ್ ಕಸಿದುಕೊಂಡ—ಹೇಮಂತ. ಶಾಂತಿ, ಹುಲಿಯಂತೆ ಹರಿಹಾಯ್ದಳು.

"ನಾನು, ನಿನ್ನನ್ನು ನೋಡಿಕೊಳ್ತೇನೆ ನನ್ನ ಮೇಲೆ ನೀನು ಕೈಮಾಡಿದೆಯಾ ? ನಮ್ಮ ತಂದೆಗೆ ಹೇಳಿ ನಿನ್ನನ್ನು ಡಿಸ್‌ಮಿಸ್ ಮಾಡಿಸ್ತೇನೆ . ನೋಡ್ತಾ ಇರು .."

"ನನ್ನನ್ನ ಡಿಸ್ ಮಿಸ್ ಮಾಡ್ಸೋ ಗಂಡ್ಸು, ಇನ್ನೂ ಹುಟ್ಟೇ ಬಂದಿಲ್ಲ—ಶಾಂತಿ! ನೀವು ಸ್ವಲ್ಪ ಬಾಯಿ ಮುಚ್ಕೊಂಡು ಸುಮ್ನೆ ಇರಿ. ಏನಾದ್ರೂ ಬೊಗುಳಿದರೋ ಲಾಕಪ್‌ಗೆ ಹಾಕಿ ವಿಚಾರಿಸಿಕೊಳ್ಳಬೇಕಾಗುತ್ತೆ !"

ಮುಂದೆ, ಶಾಂತಿ, ಶಾಂತಿಯ ಗೆಳತಿಯರು, ಉಸಿರು ಎತ್ತಲಿಲ್ಲ. ಮಿಸುಕಲಿಲ್ಲ ಕೂಡ. ಅವರೆಲ್ಲರ ಕಣ್ಣುಗಳೂ ಹೇಮಂತನ ಮೇಲೆ ನೆಟ್ಟಿದ್ದವು. "ಯಾರಪ್ಪ ಈ ಗಂಡ್ಸು ?" ಅಂತ ಅನ್ವೇಷಣೆ ನಡೆಸಿದ್ದವು.

ಬ್ಯಾಗಿನ ಜಿಪ್ ಎಳೆದ ಹೇಮಂತ 'ಸರಕ್' ಎಂದು ನಂತರ ಬ್ಯಾಗು ಬುಡ ಮೇಲು ಮಾಡಿ, ಅದರೊಳಗಿದ್ದ ಎಲ್ಲ ಸಾಮಾನುಗಳನ್ನೂ ಕೆಳಗಡೆ ಸುರುವಿದ

ಹತ್ತು—ಹದಿನೆಂಟು ಕ್ರಿಕೆಟ್ ಚೆಂಡುಗಳು—ಒಂದು ಜೊತೆ ಬಟ್ಟೆ,

ಟಾವೆಲ್ ಸೋಪ್ ಬಾಕ್ಸ್, ಬಾಲ್‌ಪೆನ್ ಅಷ್ಟೇ ಸಾಮಾನುಗಳು.

ಚರಸ್, ಗಾಂಜಾದ ವಾಸನೆ ಸಹ ಆ ಬ್ಯಾಗಿನಲ್ಲಿ ಇರಲಿಲ್ಲ, ಒಂದು ಕ್ಷಣ ಕೈ ಕಟ್ಟಿ ಯೋಚಿಸಿದ ನಂತರ ಒಂದು ಬಾಲ್ ಎತ್ತಿ ಸೂಕ್ಷ್ಮವಾಗಿ ಪರಿಶೀಲಿಸತೊಡಗಿದ. ಮರುಕ್ಷಣವೇ ಅವನ ತುಟಿಗಳು ಗೋಲವಾದವು. ಮೆಲ್ಲನೆ ಸಿಳ್ಳು ಒಂದಿತು ಆ ಶಿಳ್ಳಿನ ಅರ್ಥ ಕೇವಲ ಸೂರಪ್ಪನಿಗೊಬ್ಬನಿಗೇ ಗೊತ್ತು. ಸಾಹೇಬರಿಗೆ ಏನೋ ರಹಸ್ಯ ತಿಳಿಯಿತು ಅಂತ, ಅವನೂ ಮೆಲ್ಲಗೆ ಬಾಗಿ, ಚೆಂಡಿನತ್ತ ದೃಷ್ಟಿ ಹರಿಸಿದ

ನೋಡಲು ಎಲ್ಲ ಚೆಂಡುಗಳಂತೆ, ಸಾಮಾನ್ಯವಾಗಿದ್ದರೂ, ಅವೆಲ್ಲ ಚೆಂಡುಗಳಿಗೆ ಮಧ್ಯಭಾಗದಲ್ಲಿ ತಿರುಪುಗಳಿದ್ದವು. ಹೇಮಂತ ಬೇಗ—ಬೇಗನೇ, . ತಿರುಪು ತಿರುಗಿಸಿದ ಚೆಂಡು ಎರಡು ಹೋಳಾಯಿತು ಮಧ್ಯಭಾಗದಲ್ಲಿ ತುಂಬಿಕೊಂಡಿತ್ತು, ಚರಸ್.

ಹೇಮಂತ, ಶಾಂತಿಯತ್ತ ಕ್ರೂರವಾಗಿ ನೋಡಿ, ಕೇಳಿದ "ಏನದು ? ಚೆಂಡುಗಳ ಮಧ್ಯ ಚರಸ್ ?"

ಶಾಂತಿ ಮತ್ತು ಆಕೆಯ ಗೆಳತಿಯರು, ಭೂಮಿಗಿಳಿದು ಹೋದರು

"ನನಗೆ ಗೊತ್ತಿಲ್ಲ ಆಫೀಸರ್ ?"

"ದಯವಿಟ್ಟು ಕ್ಷಮಿಸಿ ನಿಮ್ಮನ್ನ ಮಾದಕ ಪದಾರ್ಥಗಳ ಕಳ್ಳಸಾಗಾಣಿಕೆ ಆರೋಪದ ಮೇಲೆ ಆರೆಸ್ಟ್ ಮಾಡಲಾಗಿದೆ."

"ಆಫೀಸರ್ ನನ್ನಮಾತು ಕೇಳೀ .ನಂಗೇನೂ ಗೊತ್ತಿಲ್ಲ" ಶಾಂತಿ ಗೋಗರೆದಳು. "ಅರೆಸ್ಟ್" ಎಂಬ ಶಬ್ದ ಕಿವಿಗೆ ಬೀಳುತ್ತಲೇ, ತಣ್ಣಗಾಗಿದ್ದ ಆಕೆಯ ಗೆಳತಿಯರು ಸಹ, ಈಗ ಮೆತ್ತಗಾದರು. ಅವರೂ ಸಹ, ಶಾಂತಿಯೊಡನೆ, ದನಿಗೂಡಿಸಿದರು. ಪ್ರಯೋಜನವಾಗಲಿಲ್ಲ.

"ಸರೀ ! .ನಾನು—ನನ್ನ ಡ್ಯೂಟಿ ಮಾಡಬೇಕಾಗಿದೆ. ನೀವು—ಒಳ್ಳೇ ಮಾತಿನಿಂದ ಬರದಿದ್ದರೆ, ಕೈಗೆ ಕೋಳ ತೊಡಿಸಿ , ಎಳೆದೊಯ್ಯಬೇಕಾಗುತ್ತದೆ . ..ಹುಂ ಪ್ಲೀಜ್ "

ಎಲ್ಲರೂ ಕೆಳಗಿಳಿದರು. ಹೊರಗೆ ಬಂದು, ಹೇಮಂತ ರೈಲ್ವೆ ಪೋಲೀಸರ ಸಮಕ್ಷಮ, ಕಳ್ಳ ಮಾಲಿನ ಪಂಚನಾಮೆ ಮಾಡಿ, ಕಾಗದ ಪತ್ರ ಸರಿಪಡಿಸಿ, ರುಜು ಹಾಕಿಸಿಕೊಂಡ.

ಜೀಪ್ ಹತ್ತುವ ಮೊದಲು ಶಾಂತಿ ಹೇಳಿದಳು,

"ಇನ್‌ಸ್ಪೆಕ್ಟರ್, ನಾನು—ನನ್ನ ತಂದೆಯವರಿಗೆ ಫೋನ್ ಮಾಡಬೇಕು."

"ಅವೆಲ್ಲ ಆಮೇಲೆ, ಸ್ಟೇಷನ್‌ಗೆ ಹೋದ ನಂತರ. ಅಲ್ಲಿ ಕೇವಲ ಫೋನ್

ಅಷ್ಟೆ ಅಲ್ಲ; ವಕೀಲರು, ಜಾಮೀನುದಾರರೂ, ಎಲ್ಲರನ್ನೂ ಕರೆಯಿರಿ. ಇಲ್ಲದಿದ್ದರೆ, ರಾತ್ರಿ ಅಲ್ಲಿಯೇ ಕಳೆಯಬೇಕಾಗುತ್ತದೆ."

ಹಲ್ಲು ತೆಗೆದ ಹಾವಿನಂತಿದ್ದ ಶಾಂತಿ, ಮುಖ ಕೆಳಗೆ ಹಾಕಿದಳು.

## ಎರಡು

ಸಾಹುಕಾರ ನಂಜುಂಡಪ್ಪನವರು, ಕೋಪದಿಂದ ತಕ-ತಕ ಕುದಿಯುತ್ತಲೇ, ಕಾರಿನಿಂದ ಇಳಿದರು. ತಮ್ಮ ಮಗಳನ್ನು ಯಕಶ್ಚಿತ ಓರ್ವ ಇನ್‌ಸ್ಪೆಕ್ಟರ್ ಬಂಧಿಸಿ, ಲಾಕಪ್‌ಗೆ ತಳ್ಳಿದ್ದಾನೆಂದರೆ, .ಎಂತಹ ಅಪಮಾನ?

ರಾಜಧಾನಿಯನ್ನೇ ತಮ್ಮ ಅಂಗೈಯಲ್ಲಿಟ್ಟು ಕೊಂಡು, ನಡೆದಿದ್ದ ಅವರಿಗೆ, ಇದೊಂದು ಭಾರೀ ಪೆಟ್ಟು! ..ಮಗಳ ಫೋನು ಬರುತ್ತಲು, ಒಂದು ಕ್ಷಣ ಅವರಿಗೆ, ದಿಕ್ಕೇ ತೋಚದಂತಾಯಿತು ಏನು ಮಾಡಬೇಕೆಂಬುದು ತೋಚಲಿಲ್ಲ. ಅವಳಿಗೆ, ಧೈರ್ಯವಾಗಿರಲು ಸೂಚಿಸಿ, ಹೇಮಂತನೊಂದಿಗೆ, ತಾವೇ ಮಾತನಾಡಿದರು ಹೇಮಂತ ಅವರ ಮಾತಿಗೆ ಜಗ್ಗಲಿಲ್ಲ ಅವರ ವಿನಂತಿ ಮೇರೆಗೆ, ಶಾಂತಿಯನ್ನು ಬಿಡುಗಡೆ ಮಾಡಲು, ಆತ ಒಪ್ಪಿಕೊಳ್ಳಲಿಲ್ಲ—"ಶಾಂತಿ ಹೇಳುವದು, ನಿಜವಿರಬಹುದು. ಆದರೆ, ಸಧ್ಯದ ಪರಿಸ್ಥಿತಿಯಲ್ಲಿ ಅದೂ ನೂರಾರು ಜನರ ಸಮಕ್ಷಮ (ಅವೈಧ) ರೀತಿಯಿಂದ ಸಾಗಿಸುತ್ತಿರುವ ಮಾದಕ ಪದಾರ್ಥಗಳ ಜೊತೆ ಬಂಧಿಸಿರುವಾಗ, ಹಾಗೆ ಬಿಡಲು ಸಾಧ್ಯವಿಲ್ಲ. ಕಾಯಿದೆ ಪ್ರಕಾರ ಜಾಮೀನು ತೆಗೆದುಕೊಂಡು ವಕೀಲರನ್ನು ಕರೆದುಕೊಂಡು ಬನ್ನಿ" ಎಂದು ಹೇಳಿದಾಗ, ಅಲ್ಲಿಯವರೆಗೂ ಶಾಂತರಾಗಿದ್ದ ಅವರು, "ಭುಗಿಲ್" ಎಂದು ಮೇಲೆದ್ದರು. ತಮ್ಮ ಮುಖದ ಮೇಲೆ ರಾಚಿ ಹೊಡೆದಂತೆ ಮಾತನಾಡಿ, ತಮಗೇ ಛಾಲೆಂಜ್ ಮಾಡುತ್ತಿರುವ ಈ ಪಿಳ್ಳೆಗೆ ತಕ್ಕ ಶಾಸ್ತಿ ಮಾಡಿಸಬೇಕೆಂದು ನಿಶ್ಚಯಿಸಿ, ಕಮೀಶನರರಿಗೆ, ಫೋನು ಮಾಡಿ, ಹೇಮಂತನ ಬಗ್ಗೆ ದೂರು ನೀಡಿದರು ಅವರು ಹೇಳುವುದನ್ನು ಶಾಂತರೀತಿಯಿಂದ ಕೇಳಿಕೊಂಡ ಅವರು, ವಿಚಾರಿಸವದಾಗಿ ಹೇಳಿದರು. ಅಲ್ಲಿಂದ ಮುಂದೆ, ಎಸ್ ಪಿ. ಅವರ ಸರದಿ. ಅವರೂ ಸಹ ವಿಚಾರಿಸುವುದಾಗಿ ಹೇಳಿದರು. ಅವರಿಬ್ಬರಿಗೂ ಚೆನ್ನಾಗಿ ಗೊತ್ತು ಹೇಮಂತ ಯಾರು ? ಹೇಗೆ ?—ಅಂತ.

ಮುಂದೆ, ಒಂದು ಕ್ಷಣವನ್ನೂ ವ್ಯರ್ಥವಾಗಿ ಕಳೆಯದೇ, ನಂಜುಂಡಪ್ಪ

ನವರು, ತಮ್ಮ ವಕೀಲರನ್ನು ಕರೆಯಿಸಿ, ಆಪ್ತಾಲೋಚನೆ ಮಾಡಿದರು. ಇಬ್ಬರು ಎಂ.ಎಲ್.ಎ., ಸಹ ಅವರ ಕರೆಯ ಮೇಲೆ ಬಂದರು. ಸಧ್ಯದಸ್ಥಿತಿ ಚಿಂತಾಜನಕವಾಗಿದೆ. ಮಾಲುಸಹಿತ ಬಂಧಿಸಿದ್ದರಿಂದ ,ಏನೂ ಮಾಡುವಂತಿಲ್ಲ. ಜಾಮೀನು ಕೊಟ್ಟು ಹೊರಗೆ ತರುವದೇ, ಸೂಕ್ತಮಾರ್ಗ ಎಂಬ ನಿರ್ಧಾರಕ್ಕೆ ಅವರು ಬಂದಿದ್ದರು.

ಭರ್ ಭರ್ ಎಂದು, ಎರಡು—ಮೂರು ಕಾರು ಬಂದು ಪೋಲೀಸ್ ಸ್ಟೇಷನ್ ಎದುರು ನಿಂತಿತು. ಸೂರಪ್ಪ ಒಳಗೆ ಬಂದು ಹೇಳಿದ

"ಸರ್ ! ಕಾಳಿಂಗ ಸರ್ಪ ಭುಸುಗುಡುತ್ತಾ ಬರ್‍ತಾ ಇದೆ "

"ಬರಲಿ ಬಿಡು ನನ್ನ ಬಳಿ ಪುಂಗಿ ಇದೆ" ಎಂದ ಹೇಮಂತ.

ಕೇವಲ ಐದು ನಿಮಿಷಕ್ಕೆ ಮೊದಲು, ಎಸ್.ಪಿ. ಹಾಗೂ, ಕಮೀಶನರ್ ಫೋನು ಮಾಡಿ, ವಿಷಯ ವಿಚಾರಿಸಿದ್ದರು. ಅವರಿಗೆ ಹೇಮಂತ, ನಡೆದ ಸಮಾಚಾರ ತಿಳಿಸಿದ್ದ ಅವನ್ನೆಲ್ಲ ಕೇಳಿದ ಅವರು, ತಮ್ಮ ಸಮಾಧಾನ ವ್ಯಕ್ತ ಪಡಿಸಿದ್ದರಲ್ಲದೇ, ಅವನು ತೆಗೆದು ಕೊಂಡ ದಿಟ್ಟ ಹೆಜ್ಜೆಗೆ, ಪ್ರಶಂಸೆ ಸಹ ನೀಡಿದ್ದರು.

ದುರ್ವಾಸ ಮುನಿಗಳಂತೆ ಬಂದ, ನಂಜುಂಡಪ್ಪನವರನ್ನೂ, ವಕೀಲರನ್ನೂ ಇಬ್ಬರು ಎಂ.ಎಲ್ ಎ. ಅವರನ್ನೂ, ಹೇಮಂತ, ಹಾಗೂ ಪಿ.ಎಸ್.ಐ. ಧನಂಜಯ ಸ್ವಾಗತಿಸಿದರು. ಶಾಂತಿ, ಓಡಿಬಂದು, ತಂದೆಯನ್ನು ತಬ್ಬಿ ಕೊಂಡು ಬಿಕ್ಕಿ ಬಿಕ್ಕಿ ಅತ್ತಳು. ನಂಜುಂಡಪ್ಪ ಅವಳನ್ನು ಸಮಾಧಾನ ಪಡಿಸಿದರು

ವಕೀಲರು, ಜಾಮೀನು ಪತ್ರ ಹೇಮಂತನ ಮುಂದೆ ಇರಿಸಿದರು ಹೇಮಂತ ನಿರೂಪಿಸಿದ. ಸರಿಯಾಗಿದೆಯಾ ಎಂದು ಧನಂಜಯನ ಕಡೆ ನೋಡಿದ. ಅವರೂ ಸಹ ತಲೆಯಾಡಿಸಿದರು. ಹೇಮಂತ ನಂಜುಂಡಪ್ಪ ನವರಿಗೆ ಹೇಳಿದ· "ಸಾಹುಕಾರರೇ, . ಈಗ, ನೀವು ನಿಮ್ಮ ಮಗಳನ್ನು ಕರೆದುಕೊಂಡು ಹೋಗಬಹುದು "

ಸರ್ಪದಂತೆ ಭುಸುಗುಡುತ್ತಾ, ನಂಜುಂಡಪ್ಪ, ಎದ್ದು ನಿಂತರು. ಅವರ ಹಿಂದೆ ಅವರ ಎಲ್ಲ ಅನುಯಾಯಿಗಳೂ—ಹೇಮಂತ, ಶಾಂತವಾಗಿಯೇ, ಇದ್ದು ವಿನಯದಿಂದ ನುಡಿದ :

"ಸಾಹುಕಾರರೇ, ...ಇದರಲ್ಲಿ ನನ್ನ ತಪ್ಪೇನೂ ಇಲ್ಲ ಎಂದ್ದು ನಿಮಗೂ ತಿಳಿ ದಿದೆ ನಾನು, ನನ್ನ ಡ್ಯೂಟಿ ಮಾಡಿದ್ದೇನೆ—ಅಷ್ಟೇ ! ಒಂದು ವೇಳೆ ನನ್ನ ಜಾಗದಲ್ಲಿ ನೀವಿದ್ದರೆ, ನೀವೂ ಸಹ—ನಾನು ಮಾಡಿದ್ದನ್ನೇ ಮಾಡುತ್ತಿದ್ದಿರಿ."

ಹೇಮಂತನ ಮಾತಿಗೆ ಯಾರೂ ಉತ್ತರಿಸಲಿಲ್ಲ. ಧಢ-ಧಢ ಬಾಗಿಲತ್ತ ಹೆಜ್ಜೆ ಹಾಕಿದರು. "ಮಿಸ್ ಶಾಂತೀ, ಒಂದು ನಿಮಿಷ."—ಹೇಮಂತನ ದನಿ ಕೇಳಿ, ಶಾಂತಿಯ ಕಾಲುಗಳು ಅಲ್ಲೇ ಜಡವಾದವು. ಮತ್ತೇನು ಅಪಾಯ ಬಂದೀತೋ ಎಂದು, ಆಕೆಯ ಎದೆ, ಭಯದಿಂದ ಡವ-ಡವ ಅನ್ನತೊಡಗಿತು.

"ಮಿಸ್ ಶಾಂತೀ, ..ನೀವು ಕಲಿತವರು. ಸುಸಂಸ್ಕೃತರು ಪೋಲೀಸ್ ಇಲಾಖೆ ಎಂತಹುದು ? ಅವರ ಕೆಲಸ ಹೇಗೆ—ಅಂತ ನಿಮಗೆ ಚೆನ್ನಾಗಿ ಗೊತ್ತಿದೆ. ಆದ್ದರಿಂದ, ನೀವು—ನನ್ನನ್ನು ತಪ್ಪು ತಿಳಿಯುವುದಿಲ್ಲ ಅಂತ, ಭಾವಿಸಿದ್ದೇನೆ"

ಶಾಂತಿ ಯಾವ ಮಾತೂ ಆಡಲಿಲ್ಲ. ತಾನೇ ಅವನೊಂದಿಗೆ, ಒರಟಾಗಿ ನಡೆದುಕೊಂಡಿದ್ದೆ. ಡಿಸ್‌ಮಿಸ್ ಮಾಡ್ತೇನೆ ಅಂತ ಹಾರಾಡಿದ್ದೆ. ಅವಮಾನ ಮಾಡಿದ್ದೆ. ಆದರೂ, ಆತ ನನ್ನೊಡನೆ ಎಷ್ಟು ಸಭ್ಯತೆಯಿಂದ ಮಾತ ನಾಡುತ್ತಿದ್ದಾನಲ್ಲ—ಎಂದಾಕೆ ಯೋಚಿಸುತ್ತಿದ್ದಳು ಅವಳ ಬದಲು ಅವಳ ಅಪ್ಪ ಗುಡುಗಿದರು.

"ನಿಮ್ಮ ಈ ತರಹದ ಉಪದೇಶ ನಮಗೆ ಬೇಕಾಗಿಲ್ಲ ಅದೆಲ್ಲ ನಿಮ್ಮ ಬಳಿ ಇರಲಿ ಏಯ್—ಬಾರಮ್ಮಾ—ಹಾಗೇಕೆ ನಿಂತುಬಿಟ್ಟೆ. ಕಾಲೇಜಿನ ಫ್ಯಾನ್ಸಿ ಫೇರ್‌ನಲ್ಲಿ ನಂಬರ್ ಹೊಡೆದು, ನನಗೆ ಸರ್‌ಪ್ರಾಯಿಸ್ ನೀಡಬೇಕೆಂದು, ಈ ಡ್ರೆಸ್‌ನಲ್ಲಿ ಬಂದಿದ್ದಕ್ಕೆ ಆಯಿತಲ್ಲ ಮಂಗಳಾರತಿ....ಹೂಂ....ನಡೀ ... ಮನೇಗೆ ..."

ಶಾಂತಿ ಹೊರಟು ಹೋದಳು. ಅವಳ ಹಿಂದೆ ಎಲ್ಲಾ ಜನ ಜಂಗುಳಿ, ತುಂಬಿ ಗಿಜಿ-ಗಿಜಿ ಅನ್ನುತ್ತಿದ್ದ ಕಚೇರಿ, ಈಗ ಭಣ-ಭಣ ಅನ್ನತೊಡಗಿತು. ಹೇಮಂತನಿಗೆ ಅಲ್ಲಿ ಯಾವ ಕೆಲಸವೂ ಇರಲಿಲ್ಲ. ಆತನೂ ಮೇಲೆದ್ದ. ಧನಂಜಯನಿಗೆ ವಂದನೆ ಸಲ್ಲಿಸಿ ಹೊರಗೆ ಬಂದ. ಸೂರಪ್ಪ ಹಿಂಬಾಲಿಸಿದ. ಮೋಟಾರ್ ಬೈಕ್ ಮೇಲೆ ಅವರು ಚೌಕಕ್ಕೆ ಬಂದಾಗ, ಸಿಗ್ನಲ್ ಇದ್ದಿದ್ದ ರಿಂದ, ನಿಲ್ಲಬೇಕಾಯಿತು. ಸೂರಪ್ಪ ಮೆಲುವಾಗಿ ಅವನ ಬೆನ್ನನ್ನು ತಿವಿಯುತ್ತಾ, ಪಿಸುಗುಟ್ಟಿದ

"ಸರ್ ...ಸರ್ ..ಮುರ್ಗಿ—ನಿಮ್ಮನ್ನೇ ತಿನ್ನೋಥರ ನೋಡ್ತಿದೆ !"

"ಮುರ್ಗೀ ? ಯಾವ ಮುರ್ಗೀನೋ ?!" ಹೇಮಂತ ಗದರಿದ.

"ಅದೇ ಸರ್ !, ಲಾಕ್‌ಪ್‌ಗೆ ಹಾಕಿದ್ರಲ್ಲಾ—ಅದೇ ಮುರ್ಗೀ!.... ನೀವು ಮುರ್ಗೀ ಮುರಿದು ತಿನ್ನೊಬದಲು, ಮುರ್ಗೀನೇ ನಿಮ್ಮನ್ನ ಮುರಿದು ತಿನ್ನೋಥರಾ ನೋಡ್ತಿದೆ."

ಹೇಮಂತ, ಸೂರಪ್ಪ ಹೇಳಿದೆಡೆ ನೋಡಿದ ರಸ್ತೆ ಬದಿ, ಕಾರು ನಿಂತಿತ್ತು. ಕಿಟಕಿಯಿಂದ ಶಾಂತಿ ಅವನತ್ತಲೇ ನೋಡುತ್ತಿದ್ದಳು ಹೇಮಂತನ ದೇಹ ಆ ನೋಟ ಕಂಡು, ಜರ್ರನೆ ಬೆವತಿತು. ಅಷ್ಟರಲ್ಲಿ ಸಿಗ್ನಲ್ ಕೊಟ್ಟಿದ್ದರಿಂದ, ಎಲ್ಲಾ ವಾಹನಗಳೂ ಚಲಿಸಲಾರಂಭಿಸಿದವು ಶಾಂತಿ, ಹೇಮಂತನನ್ನು ಇನ್ನೂ ನೋಡುತ್ತಿರುವಂತೆಯೇ ಅವನ ಮೋಟರ್ ಬೈಕ್-ಕಾರನ್ನು ದಾಟಿ ಕೊಂಡು ಹೋಯಿತು. ನಿಡಿದಾದ ಉಸಿರೊಂದನ್ನು ಶಾಂತಿ ಬಿಟ್ಟರೆ— "ಹಲ್ಕಾ ಬಡ್ಡೀ ಮಗಾ, ನನ್ನ ಜೊತೆ ಛಾಲೆಂಜ್ ಮಾಡ್ತಾ ಇದ್ದಾನೆ. ಒಂದ್ ಸಾರಿ ನೋಡಿಕೋ ಬೇಕು" ಎಂದುಕೊಂಡ ನಂಜುಂಡಪ್ಪ, ತನ್ನ ಮನದಲ್ಲಿ

ಅಂದು ರಾತ್ರಿ ಹೇಮಂತನಿಗೆ ನಿದ್ದೆ ಹತ್ತಿರ ಸುಳಿಯಲಿಲ್ಲ ಆತ ಕಣ್ಣು ಮುಚ್ಚುತ್ತಲೂ ಶಾಂತಿ ಅವನೆದುರು ಬಂದು ನಿಲ್ಲುತ್ತಿದ್ದಳು ಅವಳ ನೋಟ, ರೂಪ, ಒಯ್ಯಾರ, ಅವನನ್ನು ಚುಚ್ಚಿ—ಹೃದಯ ಘಾಸಿಗೊಳಿಸು ತ್ತಿದ್ದವು. ಫಟಕ್ಕನೇ ಎದ್ದು ಕುಳಿತುಕೊಳ್ಳುತ್ತಿದ್ದ. ಅದರೊಂದಿಗೇ ಗೇಟಿನ ಪಕ್ಕದ ಚರಂಡಿಯೊಳಗೆ ಬಿದ್ದುಕೊಂಡಿದ್ದ ನಾಯಿಕುನ್ನಿಯೊಂದು, ಸಾಯು ವಂತೆ ಅರಚುತ್ತಿತ್ತು. ಆದರಿಂದ, ಬೇರೆ—ನಿದ್ದೆ ಬರಲಿಲ್ಲ. ಯಾವಾಗ ಸ್ವಲ್ಪ ಜೋಂಪು ಹತ್ತಿತೋ, ಗೊತ್ತಿಲ್ಲ.

ಒಮ್ಮೆಲೇ ಎಚ್ಚರವಾದಾಗ, ಎಲ್ಲೆಡೆ ಗಂಭೀರ ಮೌನ ನಾಯಿ ಕುನ್ನಿಯ ರೋದನ ಸಹ ನಿಂತು ಒಂದು ಬಗೆಯ ವಿಚಿತ್ರ ಶಾಂತಿ ನೆಲೆಸಿತ್ತು ಹೇಮಂತ ಎದ್ದು ಕುಳಿತ. ಸಮಯ ನೋಡಿದ. ಎರಡೂವರೆ 'ಇನ್ನೂ ಮೂರು ಗಂಟೆ ಬೆಳಗಾಗಲು' ಎಂದುಕೊಂಡು, ಸಿಗರೇಟಿಗೆಂದು ದಿಂಬಿನಡಿ ಕೈತೂರಿದ. ಅದೇ ಕ್ಷಣ, ನಾಯಿಕುನ್ನಿ ವಿಕಾರವಾಗಿ ಕೂಗಿಕೊಂಡಿತು ಪಾಪ! ಒದರೀ! ಒದರೀ! ಆಯಾಸವಾಗಿ ಅದಕ್ಕೂ ನಿದ್ದೆ ಬಂದಿತ್ತೆಂದು ಕಾಣುತ್ತದೆ. ಈಗ ಒಮ್ಮೆಲೇ ಅರಚಿಕೊಂಡಿತು ಹೇಮಂತ, ಎದ್ದು ನಿಂತು, ಕಿಟಕಿ ಬಳಿ ಬಂದ ಎದುರಿಗೆ ಕಾಣುತ್ತಿತ್ತು ಗೇಟು ಇನ್ನೇನು ಲೈಟರ್ ಉರಿಸಿ ಸಿಗರೇಟು ಹೊತ್ತಿಸಬೇಕೆಂದಿದ್ದ—ಅಷ್ಟರಲ್ಲಿ ಕೈ ಅಲ್ಲೇ ಜಡವಾಯಿತು

ಕಾಂಪೌಂಡ್ ಗೋಡೆ ಹತ್ತಿ, ವ್ಯಕ್ತಿಯೊಂದು, ಸಪ್ಪಳವಾಗದಂತೆ, ಮೆಲ್ಲನೆ ಒಳಗೆ ನೆಗೆಯಿತು ಅವರ ಹಿಂದೆ, ಮತ್ತೊಂದು. ಈ ರೀತಿ ನಾಲ್ಕು ಜನ ಒಳಗೆ ಬಂದರು. ಮುಂದೆ ಇದ್ದವನ ಕೈಯಲ್ಲಿಯ ವಸ್ತುವೊಂದು ಬೀದಿ ಕಂಬದ ದೀಪದ ಬೆಳಕಿನಲ್ಲಿ ಫಳ ಫಳ ಮಿನುಗಿತು "ಓಹ್ ಸ್ಟೀಲ್ ಚೂರಿ" ಎಂದು ಉದ್ಗರಿಸಿದ ಹೇಮಂತ ಬಂದವರ ಉದ್ದೇಶ, ಅಷ್ಟು ಸರಿ

ಯಾಗಿಲ್ಲ ಅನಿಸಿತು ಅವನಿಗೆ. ಮೆಲ್ಲಗೆ ಬೆಡ್ ರೂಂ ಬಾಗಿಲು ತೆಗೆದು ವರಾಂಡಕ್ಕೆ ಬಂದ. ಅಲ್ಲಿಯೇ ಬೆಂಚ್ ಮೇಲೆ ಮಲಗಿದ್ದ ಸೂರಪ್ಪನನ್ನು ಎಬ್ಬಿಸಿದ. ಹೊಟ್ಟೆ ಬಿರಿಯುವಂತೆ ಊಟ ಮಾಡಿ, ಮಲಗಿದ್ದ ಸುದ್ದಿ ಸೂರಪ್ಪನಿಗೆ, ಸುಂದರವಾದ ಕನಸೊಂದು ಬಿದ್ದಿತ್ತು. ಸುದ್ದಿ ಸೂರಪ್ಪನಿಗೆ—ಈಗ, ಬಡ್ತಿ ಸಿಕ್ಕಿದೆ. ಅವನು ಎಸ್ ಐ ಆಗಿದ್ದಾನೆ. ಎಸ್ ಐ ಆಗುತ್ತಲೇ ಅವನಿಗೆ ಹೆಣ್ಣು ಕೊಡಲು ನಾಮುಂದು ನೀ ಮುಂದು ಎಂದು, ಕನ್ಯಾ ಪಿತೃಗಳು ಬಂದಿದ್ದಾರೆ. ಅವನ ಮನೆ ಎದುರು, ಕನ್ಯಾಮಣಿಗಳ ಸಾಲು; ಪ್ರತಿಯೊಬ್ಬರ ಕೈಯಲ್ಲೂ ಹೂವಿನ ಮಾಲೆಗಳು. ಚೆನ್ನಾಗಿ ಅಲಂಕರಿಸಿ ಕೊಂಡು, ನವ ವಧುವಿನಂತಾ ಬಂದಿದ್ದಾರೆ. ಟ್ರಿಮ್ ಆಗಿ ಎಸ್ ಐ. ಯೂನಿಫಾರಂ ಧರಿಸಿದ್ದ ಸೂರಪ್ಪ, ಕೈಯಲ್ಲಿ ಬಡಿಗೆ ಹಿಡಿದುಕೊಂಡು, ಹೊರಗೆ ಬರುತ್ತಾನೆ ಕನ್ಯಾಮಣಿಗಳು, ಕನ್ಯಾಪಿತೃಗಳೂ, ಬಗ್ಗಿ ನಮಸ್ಕರಿಸುತ್ತಾರೆ. ಒಬ್ಬೊಬ್ಬರನ್ನೇ ಆತ ನೋಡುತ್ತಾ ನಡೆಯುತ್ತಾನೆ. ಕನ್ಯೆಯ ಪಕ್ಕದಲ್ಲಿ ನಿಂತವರು, ಕನ್ಯೆಯ ಕುಲ-ಗೋತ್ರ ಸಂಪತ್ತು ಹೇಳು ತ್ತಿದ್ದಾರೆ ಅಷ್ಟು ಜನರಲ್ಲಿ ಆತ, ಅತಿ ರೂಪವತಿಯಾದ ಕನ್ಯೆಯನ್ನು ಕಂಡು—ಸೂರಪ್ಪ—ಅವಳಿಗೆ ಮನಸೋಲುತ್ತಾನೆ ಅವಳು, ಅವನ ಕೊರ ಳಿಗೆ ಮಾಲೆ ಹಾಕುತ್ತಾಳೆ ವಿಜೃಂಭಣೆಯಿಂದ ಮದುವೆ ನೆರವೇರುತ್ತದೆ.

ಅಂದೇ ಮೊದಲ ರಾತ್ರಿ—ಪ್ರಥಮ! ಮಿಲನ ಆತ ಕೈಯಲ್ಲಿ ಗುಲಾಬಿ ಹಿಡಿದುಕೊಂಡು, ಪ್ರಾಣಪ್ರಿಯೆಗಾಗಿ ಕಾದು ನಿಂತಿದ್ದಾನೆ. ಅವಳು ಒಳಗೆ ಬರುತ್ತಲೇ, ಬಾಗಿಲು ಹಾಕಿ, ಅವಳಿಗೆ ಗುಲಾಬಿ ಕೊಡುತ್ತಾನೆ. ಆಕೆ, ನಸುನಾಚಿ, ಮುಖ ಕೆಳಗೆ ಹಾಕುತ್ತಾಳೆ. ನಂತರ ಅವನಿಗೆ ಹಾಲು-ಹಣ್ಣು—ತಿನ್ನಲು ಕೂಡ ಹೋಗುತ್ತಾಳೆ. ಆತ—ಬೇಡ ಅನ್ನುತ್ತಾನೆ. "ಹಾಗಾದರೆ ಏನು ಬೇಕು?" ಎಂದು ಕೇಳಿದಾಗ "ನೀನು ಬೇಕು" ಅಂದವನೇ ಅವಳನ್ನು ಅಪ್ಪಿಕೊಳ್ಳುತ್ತಾನೆ. ಅವಳೂ ಸಹ ತನ್ನ ನೀಳವಾದ ಕೋಮಲ ಬಾಹುಗಳಲ್ಲಿ ಅವನನ್ನು ಬಂಧಿಸುತ್ತಾಳೆ. .

"ಅರೇ! ಇದೇನು?" ಆಕ ಎದ್ದು, ಬಿಗಿಯಾಗಿ ತನ್ನನ್ನು ಅಪ್ಪಿಕೊಂಡಿ ದ್ದಾಳಲ್ಲಾ—ಉಸಿರಾಡಿಸಲೇ ಆಗದು. ಉಸಿರು ಸಿಕ್ಕು, ಕಕ್ಕಾಬಿಕ್ಕಿಯಾಗಿ, ಸತ್ತೇಹೋಗುತ್ತೇನೆಂದು, ಒಮ್ಮೆಲೇ ಕಣ್ಣುಬಿಡುತ್ತಾನೆ .ಕನಸೆಲ್ಲ ಮಾಯ

ಮದುವೆ ಇಲ್ಲ
ಹುಡುಗಿ ಇಲ್ಲ .

ಪ್ರಥಮ ರಾತ್ರಿ ಇಲ್ಲ !

ಅವನ ಬಾಯಿ, ಮೂಗು ಭದ್ರವಾಗಿ ಮುಚ್ಚಿದ ಹೇಮಂತ ಪಕ್ಕದಲ್ಲಿ ಕುಳಿತು ಸಂಜ್ಞೆಯಿಂದ, "ಬಾಯಿಮಾಡ ಬೇಡ ! ಏಳು" ಎನ್ನುತ್ತಿದ್ದಾನೆ ಸೂರಪ್ಪ ಬಾಯಿ ಬಿಡದಂತೆ, ಸನ್ನೆಯಿಂದ ತಿಳಿಸಿದಾಗ, ಎರಡು-ಮೂರು ಬಾರಿ ಚೆನ್ನಾಗಿ ಉಸಿರು ತೆಗೆದುಕೊಂಡು ಮೇಲೇಳುತ್ತಾನೆ. ಹೇಮಂತ, ಅವನಿಗೆ ಹಿಂಬಾಲಿಸುವಂತೆ ಹೇಳಿ ತನ್ನ ರೂಮಿಗೆ ಬರುತ್ತಾನೆ.

ನಾಲ್ಕು ವ್ಯಕ್ತಿಗಳೀಗ, ಅವನ ಕೋಣೆಯ ಕಿಟಕಿಯ ಬಳಿ ಬಂದಿದ್ದಾರೆ. ಹೇಮಂತ ಮಂಚದ ಮೇಲೆ ನಿದ್ದೆ ಹತ್ತಿದವನಂತೆ, ಮಲಗಿಕೊಂಡಿದ್ದಾನೆ. ಮಂಚದಡಿ, ಸೂರಪ್ಪ ತೂರಿಕೊಂಡಿದ್ದಾನೆ ಒಂದು ಕ್ಷಣ ಕಿಟಕಿ ಬಳಿ ನಿಂತು, ಚೆನ್ನಾಗಿ ನಿರೀಕ್ಷಿಸಿದ ವ್ಯಕ್ತಿ ಜೇಬಿಗೆ ಕೈ ಹಾಕಿ ಒಂದು ವಸ್ತು ಹೊರಗೆ ತೆಗೆಯುತ್ತಾನೆ ಅದರಿಂದ ಕಿಟಕಿ ಗ್ಲಾಸು ಕೊರೆದು, ಸಪ್ಪಳವಾಗ ದಂತೆ ಗ್ಲಾಸನ್ನು ಕೈಯಿಂದ ಹಿಡಿಯುತ್ತಾನೆ ಒಂದು ಹಸ್ತ ಆ ಕಿಂಡಿಯಿಂದ ಒಳಗೆ ಬಂದು ಬೋಲ್ಟು ಸರಿಯುತ್ತದೆ ಮುಂದಿನ ಕ್ಷಣ ಕಿಟಕಿ ತೆಗೆಯುತ್ತದೆ ನಾಲ್ವರೂ ರೂಮನ್ನು ಕಿಟಕಿ ಮೂಲಕ ಪ್ರವೇಶಿಸುತ್ತಾರೆ ಮೂರು ಜನ ಕಿಟಕಿ ಬಳಿ ನಿಲ್ಲುತ್ತಾರೆ ಒಬ್ಬ ಕೈಯಲ್ಲಿ ಚೂರಿ ಹಿಡಿದುಕೊಂಡು, ಮಂಚದ ಬಳಿ ಬರುತ್ತಾನೆ. ನಿಶ್ಚಿಂತೆಯಿಂದ ಗೊರಕೆ ಹೊಡೆಯುತ್ತಿರುವ, ಹೇಮಂತನನ್ನು ಕಂಡು, ಕುಚೇಷ್ಟೆ ನಗೆ ಬೀರಿದ ಆತ ಚೂರಿಯಿಂದ ಹೊಡೆಯಲು ಮೇಲೆತ್ತಿದ.

ಅದೇ ಕ್ಷಣ, ಹೇಮಂತ ಬಲಗಾಲಿನ ಪ್ರಹಾರ ಅವನ ಹೊಟ್ಟೆಯ ಮೇಲೆ! "ಅಹ್" ಎಂದು ನರಳಿ ಮುಂದೆ ಬಾಗುವುದಕ್ಕೂ, ಮುಖದ ಮೇಲೆ ಮುಷ್ಟಿಯ ಪ್ರಚಂಡ ಹೊಡೆತ—ಚೂರಿ ಒಂದು ಕಡೆ, ಆತ ಒಂದು ಕಡೆ ! ಈ ಪ್ರತ್ಯಕ್ಷ ಘಟನೆಯಿಂದ ಮೊದಲು ತಬ್ಬಿಬಾಗಿ ನಿಂತ—ಮೂರು ಜನ ಸುಧಾರಿಸಿಕೊಂಡು, ಮೂವರೂ ಒಮ್ಮೆಲೆ ಹೇಮಂತನ ಮೇಲೆ ಆಕ್ರಮಣ ಮಾಡಿದರು ಅಷ್ಟರಲ್ಲಿ ಮಂಚದಡಿಯಲ್ಲಿದ್ದ ಸೂರಪ್ಪ, ಅಲ್ಲಿಂದ ಅವರಿಗೆ ಅಡ್ಡಗಾಲು ಹಾಕಿದಾಗ ಅವರು ಮುಗ್ಗರಿಸಿ ಬಿದ್ದರು ಅವರಿಗೆ ಮೇಲೇಳಲು ಆಸ್ಪದ ಕೊಡದೆ, ಹೇಮಂತ ಅವರನ್ನು ಹಣ್ಣುಗಾಯಿ ನೀರು ಗಾಯಿ ಮಾಡಿದ. ಮಧ್ಯೆ-ಮಧ್ಯೆ ಸೂರಪ್ಪನ ಶೂರತನ.

ಐದು ನಿಮಿಷಗಳಲ್ಲಿ ಕೋಣೆಯ ಚಿತ್ರವೇ ಬದಲಾಗಿ ಹೋಯಿತು. ಹೇಮಂತನನ್ನು ಹೊಡೆಯಲು ಬಂದ ಆ ನಾಲ್ವರೂ ಕೈ-ಮೈ-ಬಾಯಿ-ಮೂಗುಗಳಿಂದ ರಕ್ತ ಸುರಿಸುತ್ತಾ ಬಿದ್ದುಕೊಂಡಿದ್ದರು. ಹೇಮಂತ—

ಸಿಗರೇಟು ಉರಿಸಿ—ಸೂರಪ್ಪನಿಗೆ—ನಾಯಿ ಕುನ್ನಿ ಹೇಗೆ ತನಗೆ ಎಚ್ಚರ ನೀಡಿತು ಎಂದು ಹೇಳಿದ. ಅದನ್ನು ಕೇಳುತ್ತಲೇ, ಸೂರಪ್ಪ ಹೊರಗೋಡಿದ. ಆತ ಮತ್ತೆ ಒಳಗೆ ಬಂದಾಗ, ಅವನ ಕೈಯಲ್ಲಿ ನಾಯಿಮರಿ ಅದೊಂದು ಜಾತಿಯ ಕುನ್ನಿ! ಎಲ್ಲಿಂದಲೋ ತಪ್ಪಿಸಿಕೊಂಡು ಬಂದಿತ್ತೆಂದು ಕಾಣುತ್ತದೆ ನೋಡಲು ಅದು ತುಂಬಾ ಮುದ್ದಾಗಿತ್ತು

"ಮರಿ ಎಲ್ಲಾ ಚೆನ್ನಾಗಿದೆ, ನನ್ನ ಜೊತೆ ಇರಲಿ" ಎಂದ ಸೂರಪ್ಪ. ಹೇಮಂತ ಅವನ ಮಾತಿಗೆ ಉತ್ತರ ಕೊಡುವ ಮೊದಲೇ "ಅಯ್ಯೋ! ಅಯ್ಯೊಯ್ಯೋ ." "ಇದು ಹೆಣ್ಣು" ಎಂದು ಅರಚಿದ ಸೂರಪ್ಪ! ಹೇಮಂತನ ತುಟಿಗಳಮೇಲೆ ವಕ್ರರೇಖೆಯೊಂದು ಮೂಡಿ ಮರೆಯಾಯಿತು.

## ಮೂರು

ಎರಡು ದಿನಗಳು ಕಳೆದವು. ಶಾಂತಿ ಕಾಲೇಜಿಗೆ ಹೋಗಿರಲಿಲ್ಲ. ಒಂದು ದಿನ ಮಾತ್ರ ರಜೆಯಿತ್ತು. ಎರಡನೇ ದಿನ, ಏಕೋ ಮನಸ್ಸಿಲ್ಲ ಎಂದು ಹೇಳಿ, ಕಾಲೇಜ್ ಬಿಟ್ಟಿದ್ದಳು. ಅವಳ ವರ್ತನೆ, ನಂಜುಂಡಪ್ಪನವರನ್ನು ಚಿಂತೆಗೆ ಗುರಿ ಮಾಡಿತ್ತು ಅವರಿಗೆ ಅವಳೊಬ್ಬಳೇ ಮಗಳು. ತಾಯಿ ತೀರಿದಾಗ, ಶಾಂತಳಿಗೆ ಹತ್ತು ವರ್ಷಗಳು. ಮನಸ್ಸು ಮಾಡಿದರೆ ಅವರು ಮತ್ತೊಂದು ಮದುವೆ ಮಾಡಿಕೊಳ್ಳಬಹುದಿತ್ತು ಬರುವವಳು, ಶಾಂತಿಗೆ ತಾಯಿಯಾಗಿ ಬರದೇ ಮಾರಿಯಾಗಿ ಬಂದರೆ ಎಂಬ ಯೋಚನೆ, ಮದುವೆಯಾಗುವುದನ್ನೇ ಬಿಟ್ಟು-ಬಿಟ್ಟಿದ್ದರು. ಅದೊಂದು ರೀತಿಯ ತ್ಯಾಗ ಎನ್ನುವದಕ್ಕಿಂತ, ಮಗಳ ವ್ಯಾಮೋಹ ಎಂದರೆ, ಇನ್ನೂ ಚೆನ್ನ! ಶಾಂತಿಯನ್ನು, ತಮ್ಮ ಪ್ರಾಣಕ್ಕಿಂತಲೂ, ಹೆಚ್ಚಾಗಿ ಕಾಣುವ ಅವರಿಗೆ, ಅವಳು ಪೋಲೀಸ್ ಸ್ಟೇಷನ್ನಿಗೆ ಹೋಗಿ ಬಂದಾಗಿನಿಂದ, ಬದಲಾಯಿಸಿರುವುದನ್ನು ಗಮನಿಸಿ, ಮತ್ತಷ್ಟು ವಿವಂಚನೆಗೊಳಗಾಗಿದ್ದರು. ಅವರ ಮನದಲ್ಲಿ ಸಂಶಯವೊಂದು ಮೂಡಿತು.

ಮುಂಜಾನೆ ಏಳುತ್ತಲೇ ಸ್ನಾನಮಾಡಿ, ತಿಂಡಿ ತಿಂದ ಶಾಸ್ತ್ರ ಮಾಡಿದ ಶಾಂತಿ, ಬಂದು ಮನೆಯ ಎದುರಿನ ತೋಟದಲ್ಲಿ ಸ್ವಲ್ಪ ಹೊತ್ತು ಸುತ್ತಿದಳು. ಸಿಮೆಂಟಿನ ಆಸನದಲ್ಲಿ ಕುಳಿತಳು. ತೂಗುಮಂಚ ತೂಗಿದಳು. ಏನು ಮಾಡಿದರೂ, ಮನಸ್ಸಿಗೆ ಸಮಾಧಾನ ಸಿಗದು. ಮೋಟಾರ ಬೈಕ್ ಸಪ್ಪಳ ಕಿವಿಗೆ ಬಿದ್ದರೆ, ಕಣ್ಣುಗಳು ತನ್ನಷ್ಟಕ್ಕೆ ತಾವೇ ಬೀದಿಯತ್ತ ಹರೆಯುತ್ತಿ

ದ್ದಿತು ಮುಂದೆ ಕ್ಷಣಾರ್ಧದಲ್ಲಿ ಮೋಟಾರ ಬೈಕ್ ಹೊರಟುಹೋಗುತ್ತಲೂ ನಿರಾಶೆ ಕಣ್ಣಿಗೆ ಕಾಡುತ್ತಿತ್ತು

ಎರಡು ರಾತ್ರಿ ಆಕೆ, ಕೆಂಡಗಳ ರಾಶಿಯಮೇಲೆ ಕಳೆದಿದ್ದಳು ಮಲಗಿದರೆ ನಿದ್ದೆ ಬಾರದು ಎದ್ದು ಕೂತರೆ, ನಿಂತರೆ, ಕಣ್ಣು ಮುಚ್ಚಿದರೆ, ಅದೇ ಮುಖ ಅದೇ ಧ್ವನಿ !—

"ಮಿಸ್ ಶಾಂತಿ, ನೀವು ಕಲಿತವರು ಸುಸಂಸ್ಕೃತರು, ದಯವಿಟ್ಟು ನನ್ನನ್ನು ತಪ್ಪು ತಿಳಿಯಬೇಡಿ. ಪೋಲೀಸ್ ಅ ದರ, ಏನು ?—ಅವರ ಕೆಲಸ ಹೇಗಿರುತ್ತೆ ?—ಎನ್ನುವುದು, ನಿಮಗೆ ಚೆನ್ನಾಗಿ ಗೊತ್ತಿದೆ ಕಾರಣ, ನೀವು ನನ್ನನ್ನು ತಪ್ಪು ತಿಳಿಯುವುದಿಲ್ಲ ಅಂತ ತಿಳಿದುಕೊಂಡಿದ್ದೇನೆ"—

ರೂಪದಲ್ಲಿ ಮನ್ಮಥ ಮಾತಿನಲ್ಲಿ ಮೋಡಿಹಾಕುವ ವಿನಯ. ಕರ್ತವ್ಯ ನಿಷ್ಠೆ ಇದಕ್ಕಿಂತ ಗುಣವಂತ ಪುರುಷರಾರು ? ಮನದಲ್ಲಿ ಹಗಲಿರುಳು ಚಿಂತಿಸಿ-ಚಿಂತಿಸಿ ಸಣ್ಣಗಾಗಿದ್ದಳು ತಂದೆಯ ಪ್ರೀತಿ ! ಅವರ ಬಳಿ ಇರುವ ಸಂಪತ್ತು ! . ತನ್ನ ಹಣದಲ್ಲಿ ಯಾವಾಗಲೂ ತಿಂದು-ತೇಗಿ ಮಜಾ ಮಾಡುವ ಗೆಳತಿಯರ ಬಣ್ಣದ ಮಾತುಗಳಿಗೆ ಮರುಳಾಗಿ, ನಿಜವಾದ ಜೀವನದ ಕಲ್ಪನೆಯನ್ನೇ ಆಕೆ ಮರೆತಿದ್ದಳು ಇವೇ ಶಾಶ್ವತ ಇವೇ ನನ್ನನ್ನು ಕಾಯುತ್ತಿವೆ ಎಂದು ತಿಳಿದಿದ್ದಳು ಆದರೆ ಅವನ್ನೆಲ್ಲ ಗಾಳಿಗೆ ತೂರಿ ಒಗೆದಿದ್ದ ಓರ್ವ ಸಿ ಐ.ಡಿ ಇನಸ್ಪೆಕ್ಟರ್, ತಂದೆಯ ಮುಂದೆ, ಆತ ಓರ್ವ ಸಾಮಾನ್ಯ ವ್ಯಕ್ತಿ ಆದರೆ—ಅದೇ ಸಾಮಾನ್ಯ ವ್ಯಕ್ತಿಯ ಮುಂದೆ—ತಂದೆ ! ತಂದೆಯ ಅಂತಸ್ತು ! ಅವರ ಸಂಪತ್ತು—ಘನತೆ—ಗೌರವ ಎಲ್ಲಾ ಮಣ್ಣು ಪಾಲಾಗಿದ್ದಿತು. ಕರ್ತವ್ಯ ನಿಷ್ಠ ಅಧಿಕಾರಿಗೆ ಜಯ ದೊರೆತಿತ್ತು. ಅವನ ಕರ್ತವ್ಯವು ಗೆದ್ದಿತ್ತು.

ಮನೆಯ ಮುಂದೆ, ಜೀಪೊಂದು ಬಂದು ನಿಂತಿತು. ಗೂರ್ಖಾ ಗೇಟು ತೆಗೆದರೂ, ಜೀಪು ಒಳಗೆ ಬರಲಿಲ್ಲ. ಜೀಪಿನಿಂದಿಳಿದ ಧನಂಜಯ, ಅವನ ಹಿಂದೆ ಹೇಮಂತ ಹಾಗೂ ಸೂರಪ್ಪನನ್ನು ಕಂಡು, ಆಕೆಯ ಹೃದಯ ಹಾರಿ ಅವಳ ಬಾಯಿಗೆ ಬಂದಷ್ಟು ಸಂತಸವಾಯಿತು. ಮಂಚ (ತೂಗು) ದಿಂದ ಕೆಳಕ್ಕೆ ಹಾರಿ ಬದಿಗಿದ್ದ ಬಾಗಿಲಿನಿಂದ ಹೊರಗೆ ಬರುವುದಕ್ಕೂ, ತಂದೆ ಅವರೊಂದಿಗೆ ಮಾತನಾಡುವುದಕ್ಕೂ ಸರಿಹೋಯಿತು.

"ಓಹೋಹೋ ! ಇನ್‌ಸ್ಪೆಕ್ಟರು, ಅರೆರೇ ! ಹೇಮಂತ ಸಾಹೇಬ್ರು ಬರಬೇಕು ದಯವಿಟ್ಟು ಕುಳಿತುಕೊಳ್ಳಿ .ಮತ್ತೇನು ? ಯಾವ ಸಮಾಚಾರಕ್ಕೆ ಬಂದಿದ್ದೀರಿ ? ಕೋರ್ಟಿಗೆ ಹಾಜರಾಗಲು ನನ್ನ ಮಗಳಿಗಿನ್ನೂ

ಸೆಮನ್ನ ಬಂದಿಲ್ಲ" ..

"ಹೌದು. ಅದು ಗೊತ್ತಿದೆ ಅದು ಬರುವದೂ ಇಲ್ಲ" .ಹೇಮಂತ ಉತ್ತರಿಸಿದ. ನಂಜುಂಡಪ್ಪನವರ ತೆರೆದ ಬಾಯಿ ತೆರೆದಂತೆಯೇ ಇತ್ತು. ಅವರು ಮುಂದೆ ಏನು ಮಾತನಾಡಬೇಕೆಂದಿದ್ದರೋ ಅದು ದೇವರಿಗೇ ಗೊತ್ತು ! ಅಷ್ಟರಲ್ಲಿ ಶಾಂತಿ, ಹಾಲ್ ಪ್ರವೇಶಿಸಿದಳು. ಅವಳನ್ನು ಮೊದಲು ಕಂಡವ ಸೂರಪ್ಪ; ನಂತರ ತನ್ನ ಮೊಣಕೈಯಿಂದ, ಹೇಮಂತನನ್ನು ತಿವಿದು ಕಣ್ಣಿನಿಂದಲೇ ಸೂಚಿಸಿದ. ಹೇಮಂತ, ಅವಳತ್ತ ನೋಡಿ, ಶಿಷ್ಟಾಚಾರಕ್ಕೆ ಎದ್ದುನಿಂತ. ಅವನ ಹಿಂದೆ, ಧನಂಜಯ ಹಾಗೂ ಸೂರಪ್ಪ. ಶಾಂತಿಗೆ ಸಂಕೋಚವೆನಿಸಿತು ಶಾಂತಿ ಬಂದು ನಂಜುಂಡಪ್ಪನವರ ಪಕ್ಕದಲ್ಲಿ ಕುಳಿತುಕೊಳ್ಳುತ್ತಲೇ, ಮೂವರೂ ಕುಳಿತರು. ಹೇಮಂತನೇ ಮಾತು ಮುಂದುವರಿಸಿದ.

"ಮಿಸ್ ಶಾಂತೀ, ನೀವು ನಿರಪರಾಧಿಗಳೆಂತ ಸಿದ್ಧವಾಗಿದೆ. ನಾನು, ನಿನ್ನೆ ಎಲ್ಲಾ ಕಡೆಯಿಂದ ತಪಾಸಣೆ ಮಾಡಿದೆ. ಪೋಲೀಸ್ ಯೂನಿಫಾರ್ಮ್ ಹಾಕಿಕೊಂಡು ನಿಮ್ಮ ಕಡೆ ಬ್ಯಾಗ್ ಕೊಟ್ಟವ ಓರ್ವ ಸ್ಮಗಲರ್. ಅವನ ಹೆಸರು ಶಂಕರ ಎಂದಿದೆ, ನಿಮಗೆ ಬ್ಯಾಗ್ ಕೊಟ್ಟು ಹಳಿ ದಾಟುವ ಮುನ್ನವೇ ಆತ, ಆ ಕಡೆಯಿಂದ ಬರುವ ರೈಲಿನೆಡೆಗೆ ಸಿಕ್ಕು ಸತ್ತು ಹೋದ. ಅದೆಲ್ಲ ನನಗೆ, ನಿನ್ನೆ ಸಾಯಂಕಾಲ ತಿಳಿಯಿತು. ನಿಮ್ಮ ಬೋಗಿಯ ಬಳಿ ಇದ್ದ ಟೀ ಸ್ಟಾಲಿನ ಯಜಮಾನ ಸಹ, ನಿಮಗೆ ಬ್ಯಾಗ್, ಕೊಟ್ಟು, ಆತ ಹೋಗುವದನ್ನು ಕಂಡಿದ್ದಾನೆ. ಇದನ್ನೆಲ್ಲಾ ಗಮನಿಸಿ,—ನಿಮ್ಮ ಸುತ್ತ ಬಲೆ ಹರಡಲಾಗಿತ್ತು ಎಂದು ಸಿದ್ಧವಾಗಿದೆ ನಾನು ಕೇಸು ವಾಪಸು ತೆಗೆದುಕೊಂಡಿದ್ದೇನೆ. ಈ ಮಧ್ಯೆ, ನಿಮಗಾದ ತೊಂದರೆಗೆ ನಾನು ಕ್ಷಮೆ ಕೋರುತ್ತೇನೆ"

ಶಾಂತಿಯ ಬಾಯಿಂದ ಮಾತೇ ಹೊರಡಲಿಲ್ಲ. ಕ್ಷಣ-ಕ್ಷಣಕ್ಕೂ ಆಕೆ, ಭೂಮಿಯ ಆಳದೊಳಗೆ ಇಳಿದು ಹೋಗುತ್ತಿದ್ದಳು—ಅವನ ಮಾತು ಕೇಳುತ್ತಿದ್ದಂತೆ ಒಂದು ಬಗೆಯ ಮತ್ತು ಅವಳನ್ನು ಆವರಿಸುತ್ತಿತ್ತು—ಮೋಡಿ ಮಾಡಿದಂತೆ ಆಕೆ, ತನ್ನತನವನ್ನು ಕಳೆದುಕೊಂಡು ಬಿಡುತ್ತಿದ್ದಳು.

ಈಗಲೂ ಸಹ ಅದೇ ರೀತಿ ಆಯಿತು. ಆವಳಿಗೆ ಅವನ ಮಾತಿಗೆ ಉತ್ತರ ಕೊಡುವ ಚೈತನ್ಯ ಅವಳ ಶರೀರಕ್ಕಿರಲಿಲ್ಲ. ಬೊಂಬೆಯಂತೆ, ಕುಳಿತುಬಿಟ್ಟಳು. ಅದೇ ಕ್ಷಣ, ಅವಳ ತಂದೆ ಆರ್ಭಟಿಸುವುದು ಕೇಳಿ ಬೆಚ್ಚಿಬಿದ್ದಳು,

"ಆಹಾಹಾ ! ...ಕ್ಷಮಿಸಬೇಕಂತೆ ! ..ನನ್ನ ಮಗಳನ್ನು ಅರೆಸ್ಟ್ ಮಾಡೀ

ಸ್ಟೇಷನ್‌ಗೆ ಒಯ್ದು, ಮಾಡಿದ ಅಪಮಾನಕ್ಕೆ, ಕೇವಲ ಒಂದು ಬಾರಿ ಕ್ಷಮಿಸಿ ಅಂದರೆ, ಆಗಿಹೋಯ್ತಾ ?"

"ನಂಜುಂಡಪ್ಪನವರೇ, ನಿಮಗೆ ಗೊತ್ತಿದೆ. ಶಾಂತಿಯನ್ನು ಸಂಶಯದ ಮೇಲೆ ಅಲ್ಲ, ಮಾಲುಸಹಿತ ಹಿಡಿಯಲಾಗಿದೆ ಎಂದು ! ಪರಿಸ್ಥಿತಿ ಹಾಗಿತ್ತು. ನೀವು ಅಂತವರು ನಿಮಗೆ ಹೆಚ್ಚಿಗೆ ಹೇಳಬೇಕಾಗಿಲ್ಲ .. ಇನ್ನೂ ಒಂದು ವಿಷಯ ಮನಸ್ಸು ಮಾಡಿದ್ದರೆ, ನಾನು—ಕೇಸು ಮುಂದುವರಿಸಬಹುದಾಗಿತ್ತು ಕೋರ್ಟಿಗೆ ಕರೆಯಬಹುದಾಗಿತ್ತು. ಅವರು ಕೋರ್ಟಿಗೆ ಬಂದರೆ, ಮನೆತನದ ಘನತೆ, ಗೌರವಕ್ಕೆ ಕುಂದು ಬರುತ್ತದೆ ಎಂದು ಈ ನಿರ್ಣಯ ಕೆಗೆದುಕೊಳ್ಳಲಾಗಿದೆ "

"ಸಾಕು .ಸಾಕು .ನಾಟಕ ಸಾಕು ! ಈಗೆಲ್ಲಿ ಉಳಿದಿದೆ-ನಮ್ಮ ಮನೆತನದ ಘನತೆ–ಗೌರವ ? ! ಮಿಸ್ಟರ್ ಹೇಮಂತಾ, ನೀವು ಚೆನ್ನಾಗಿ ನೆನಪಿನಲ್ಲಿಟ್ಟುಕೊಳ್ಳಿ—ನಿಮ್ಮ ಮೇಲೆ ಮಾನಹಾನಿ ದಾವೆ ಮಾಡೀ, ನೌಕರಿಯಿಂದ ಸಸ್ಪೆಂಡ್ ಮಾಡಿಸುತ್ತೇನೆ "

" ..ಸೇಡಿನ ಮನೋಭಾವನೆ ಸಲ್ಲದು. ಇದೊಂದು ಆಕಸ್ಮಿಕ ಎಂದು ತಿಳಿದು, ಮರೆತುಬಿಡಿ"—ಮಧ್ಯೆ ಬಾಯಿ ಹಾಕಿ, ಧನಂಜಯ ನುಡಿದರು. ಸಾಹುಕಾರ್ ನಂಜುಂಡಪ್ಪ, ಸಿಡಿಮದ್ದಿನಂತೆ, ಹರಿಹಾಯ್ದು—

"ಅದು ಹೇಗೆ ಆಗುತ್ತೆ ? ಅಂದೇ, ಇದೊಂದು ಆಕಸ್ಮಿಕ ಘಟನೆ ಎಂದು ತಿಳಿದು, ನೀವು—ನನ್ನ ಮಗಳನ್ನು ಬಿಟ್ಟಿದ್ದರೆ ಸರಿಹೋಗುತ್ತಿತ್ತು ನಾನು ಕೇಳುವುದಿಲ್ಲ, ನಾನು ಖಂಡಿತವಾಗಿ ಕೇಳುವದಿಲ್ಲ ."

"ಇದು ನಿಮ್ಮ ಕೊನೆಯ ನಿರ್ಧಾರವೇ ?"

"ಹೌದು."

"ಸರೀ—ಹಾಗಾದರೆ, ನನ್ನ ನಿರ್ಧಾರವನ್ನೂ ಸ್ವಲ್ಪ ಕೇಳಿ ಇಲ್ಲಿಯವರೆಗೂ ಹೇಮಂತನ ಮಾತು ಕೇಳಿ ಸುಮ್ಮನಿದ್ದೆ. ಇನ್ನು ನನ್ನಿಂದ ಸುಮ್ಮನಿರಲಾಗುವುದಿಲ್ಲ."

"ಏನ್ರಿ ?—ಏನು ಮಾಡ್ತೀರಾ ?—ನನಗೆ ಧಮಕಿ ಕೊಡ್ತೀರಾ ?"

"ಧಮಕಿ ಕೊಡುವುದು—ರೌಡಿಗಳನ್ನು ಬಿಟ್ಟು ಕೊಲೆಮಾಡಲು ಪ್ರಯತ್ನಿಸುವುದು—ಇವೆಲ್ಲ ನಿಮ್ಮಂಥ ಶ್ರೀಮಂತರ ಲಕ್ಷಣಗಳು, ಪೋಲೀಸ್ ಇಲಾಖೆಯದಲ್ಲ .."

"ಅಂದರೆ ? ಅಂದರೇ ನಿಮ್ಮ ಮಾತಿನ ಅರ್ಥವೇನು ?"

"ಎಲ್ಲಾ ಸ್ಪಷ್ಟವಾಗಿದೆ ಸಾಹುಕಾರರೇ !—ಮೊನ್ನೆ, ನನ್ನೆದುರು ನಿಮ್ಮ

ವಕೀಲರೂ, ಹಾಗೂ ಇಬ್ಬರು, ಎಂ ಎಲ್.ಎ. ಎದುರು ಎಲ್ಲಕ್ಕಿಂತ ಹೆಚ್ಚಾಗಿ, ನಿಮ್ಮ ಮಗಳ ಎದುರು—ನೀವು ಹೇಮಂತಗೆ ಧಮಕಿ ಕೊಟ್ಟಿರಿ 'ನಿನ್ನ ಒಂದ್ ಕೈ ನೋಡ್ತೀನಿ' ಅಂತ—"

"ಹಾಂ! .ಅಂದಿರಬಹುದು! .ಸಿಟ್ಟಿನ ಆವೇಶದಲ್ಲಿ ಅಂ! ..ಹಾಗೆ ಅಂದರೆ ಏನಾಯ್ತು ?—ಏನಾಯ್ತು ಈಗ ?—ಅಂ ?. ಅಂ ?"

"ಧನಂಜಯ, ಸ್ವಲ್ಪ ನೀವು ಸುಮ್ನೆ—ಇರ್ತೀರಾ" ಹೇಮಂತ ಮಧ್ಯೆ ಬಾಯಿ ಹಾಕಿ, ಮಾತು ಮುರಿಯಲೆತ್ನಿಸಿದ. ಆದರೆ, ಧನಂಜಯ ಕೇಳಲಿಲ್ಲ.

ಹೇಮಂತ ..ಸುಮ್ನೆ ಇರೋಕೆ ಆಗೊಲ್ಲ .ಇದೋ—ನಿಮ್ಮದುರೇ ಇದೇ ನೋಡೀ—ತಮ್ಮ ತಪ್ಪು! ಇಟ್ಕೊಂಡು ನಮ್ಮ ಮೇಲೆ ರೇಗಾಡ್ತಾರೆ! ಎಷ್ಟು ಕೊಬ್ಬು ಇವರಿಗೆ ?"

"ಏನಂದೆ ? ಕೊಬ್ಬೇ ? ...ನಮಗಾ?—ಅಯ್ಯೋ ಶಿವಶಿವಾ! ...ಇನ್ನು ನಾನು ಸುಮ್ನೆ ಇರಲ್ಲ. ನಿಮ್ಮಿಬ್ಬರ ಮೇಲೂ ಕೇಸುಮಾಡಿ, ಲಾಕಪ್‌ಗೆ ಹಾಕಿಸ್ತೀನಿ "

ಅಲ್ಲಿಯವರೆಗೂ ಸುಮ್ಮನಿದ್ದ ಸುದ್ದಿ .ಸೂರಪ್ಪ, ಮಧ್ಯೆ ಬಾಯಿಹಾಕಿ, ಸಂಗೀತದ ಸೂರಿನಲ್ಲಿ ಆಲಾಪ ಮಾಡುತ್ತ ಹೇಳಿದ

"ರಾಯರೆ .ಅಲ್ಲಿಯವರೆಗೂ ನೀವು ಇಲ್ಲಿರೋಲ್ಲ—ಅಂ "

"ಇಲ್ಲಿರೊಲ್ಲಾ ಅಂದರೇನು ? ನನಗಿನ್ನೂ ಸಾಯೋ ವಯಸ್ಸು ಆಗಿಲ್ಲ .. ಎಂಬತ್ತು ವರ್ಷ ಆಯಸ್ಸೂಂತ ರಾಮಭಟ್ರು ಜೋತಿಷ್ಯ ಹೇಳಿದ್ದಾರೆ "

"ನಾನು ಹೇಳಿದ್ದು ಅದಲ್ಲ ರಾಯರೇ "

"ಮತ್ತೆ ನೀನು ಹೇಳಿದ್ದೇನು ?"

"ಹೇಳಲಾ ಸಾಹೇಬರೆ "

ಸೂರಪ್ಪ ಹೇಮಂತನತ್ತ ಕೊರಳಿ ಕೇಳಿದ. ಹೇಮಂತ ಮುಗುಳುನಗೆ ನಕ್ಕ.—ಅಷ್ಟೇ! ಧನಂಜಯನೇ ಹೇಳಿದ

"ಹೂಂ ಹೇಳು ನಿನ್ನಿಂದಲೇ ಆಗಲಿ ."

"ಹೂಂ ಹೂಂ. ಹೇಳಿ ಹೇಳಿ ನನಗೆ ಯಾರಾದರೇನು ?"

ಸಾಹುಕಾರರು ಗುಡುಗಿದರು. ಸೂರಪ್ಪ ನುಡಿದ ರಾಗದಲ್ಲಿ—

"ರಾಯರೇ, ನೀವಿಲ್ಲಿರೋಲ್ಲ ಅಂದೆ. ಅಂ..."

"ಮತ್ತೆ ನಾ ಎಲ್ಲಿ ಹೋಗ್ತೇನೆ ?"

ಅದೇ ಧಾಟಿಯಲ್ಲಿ ನಂಜುಂಡಪ್ಪ ಕೇಳಿದರು—ರಾಗವಾಗಿ

ನೀವು ಅಷ್ಟರಲ್ಲಿ ಶ್ರೀಕೃಷ್ಣನ ಜನ್ಮಸ್ಥಾನವಾದ, ಸೆರೆಮನೆ ಸೇರಿರು

ತ್ತೀರಾsss

"ಆಂ ? ಏನಂದೆ ? ತುರಂಗಕ್ಕಾ ? ಆ ?"

"ಹಾಂ ಹೌದೂsss, ಹಾಂ ಹೌದೂssss"

"ಏಕೆ ?"

"ಏಕೆಂಬುದಕ್ಕೆ ನಾನಲ್ಲ, ಇವರು ಉತ್ತರಿಸುತ್ತಾರೆ " ಸೂರಪ್ಪ ಧನಂಜಯನ ಕಡೆ ತೋರಿಸಿ ನುಡಿದ ಹೇಮಂತನಿಗೆ ತಡೆಯಲಾರದಷ್ಟು ನಗೆ ಶಾಂತಿಗೆ, ಇದೊಳ್ಳೆ ತಮಾಷೆಯಾಗಿ ಕಂಡರೂ, ಅಪ್ಪ—ತುರಂಗ ಸೇರುತ್ತಾರೆ ಎಂಬ ಸುದ್ದಿ ಕೇಳಿ, ಹೌಹಾರಿ ಕೇಳಿದಳು .

"ಮಿಸ್ಟರ್ ಹೇಮಂತ ಏನಿದು ನಾನು ಕೇಳ್ತಾ ಇರೋದು. ನನ್ನ ಮೇಲಿನ ಸೇಡಿಗೋಸ್ಕರ ಆವರನ್ನ "

"ಸ್ವಲ್ಪ ಕೇಳಿ ಶಾಂತಿ ಇಲ್ಲಿ ಸೇಡಿನ ಪ್ರಶ್ನೆಯೇ ಬರುವದಿಲ್ಲ. ನಾನಂತೂ ಅಂಥ ಮನುಷ್ಯನೇ ಅಲ್ಲ. ಸೇಡು ಇಟ್ಕೊಂಡೋರು ನಿಮ್ಮ ತಂದೆ ಅದಕ್ಕೆ ಅಂತ ಅವರು ನನ್ನನ್ನೇ ಮುಗಿಸಲು ಯೋಚಿಸಿದ್ದರು "

"ಇದನ್ನು ನಾನು ನಂಬೋಲ್ಲ ? "

"ನೀವು ನಂಬದಿದ್ದರೆ ನಮಗೇನೂ ನಷ್ಟವಿಲ್ಲ ಎದುರಿಗೇ ಕುಳಿತಿದ್ದಾರೆ. ಬೇಕಾದರ ನೀವೇ ಕೇಳೀ."

"ಏನು ಡ್ಯಾಡೀ ಹೇಮಂತ ಹೇಳ್ತಾ ಇರೋದು ಸತ್ಯವಾ ? ನೀವು ಆವರನ್ನು ಮುಗಿಸಿಬಿಡಲು ಯೋಚನೆ ಮಾಡಿದ್ದೀರಾ ? "

"ಇಲ್ಲಮ್ಮ . ಖಂಡಿತ ಇಲ್ಲ ಇದು ಅಪ್ಪಟ ಸುಳ್ಳು "

ಹೇಮಂತ ಸೂರಪ್ಪನ ಕಡೆ ನೋಡಿದ. "ಎಲ್ಲಾ ಅರ್ಥವಾಯಿತು ! ಒಂದೇ ನಿಮಿಷ" ಎನ್ನುತ್ತ ಸೂರಪ್ಪ ಎದ್ದು, ಹೊರಗಡೆ ಹೋದ ಎರಡು ನಿಮಿಷ ಯಾರೂ ಮಾತನಾಡಲಿಲ್ಲ ಹೇಮಂತ ನಿಶ್ಚಿಂತೆಯಿಂದ, ಸಿಗರೇಟು ಸೇದುತ್ತಿದ್ದರ, ಧನಂಜಯ ಹೆಮ್ಮೆಯಿಂದ ಬೀಗುತ್ತಿದ್ದ. ನಂಜುಂಡಪ್ಪ ಹಲ್ಲುಗಳಿಂದ ತುಟಿ ಕಡಿಯುತ್ತಿದ್ದರು. ಹೆಚ್ಚು ಉದ್ವಿಗ್ನರಾದವರಂತೆ ಕಂಡವಳು ಕೇವಲ ಶಾಂತಿ ಮಾತ್ರ ಹೇಮಂತ ಹಾಗೂ ತಂದೆಯ ಮಧ್ಯೆ ಬಿರುಕು ಉಂಟಾಗ ಬಾರದೆಂಬುದು ಆಕೆಯ ಬಯಕೆ. ಸಧ್ಯದ ಪರಿಸ್ಥಿತಿ ಅದಕ್ಕೆ ವಿಪರೀತವಾಗಿತ್ತು. ತಾನು ನಿರ್ದೋಷಿ ಎಂದು, ತನ್ನ ಮೇಲಿನ ಕೇಸು ವಾಪಸು ತೆಗೆದುಕೊಂಡಿರುವ ಹೇಮಂತನ ಕೊಲೆಗೆ ತಂದೆ ಒಳಸಂಚು ನಡೆಸಿದ್ದಾರೆ ಎಂದರೆ ?. ..ಓಹ್ ! ದೇವರೇ ! . ಮುಂದೇನು ಗತಿ !! ಆಕೆ, ಇಬ್ಬಗೆಯಲ್ಲಿ ಸಿಲುಕಿ ಒಂದು ರೀತಿಯ ವಿಚಿತ್ರ ಸಂಕಟ ಅನುಭವಿಸುತ್ತಿದ್ದಳು.

ಸೂರಪ್ಪ ಒಬ್ಬನೇ ಹೋಗಿದ್ದ. ಬರುವಾಗ ನಾಲ್ವರನ್ನು ಕರೆತಂದ. ಅವರೇ ಕಳೆದರಾತ್ರಿ ಹೇಮಂತನ ಮೇಲೆ ಆಕ್ರಮಣ ಮಾಡಿದವರು. ಅವರ ಕೈಗೆ ಈಗ ಕೋಳಗ ತೊಡಿಸಲಾಗಿತ್ತು. ಮೈ-ಕೈಗೆ, ಮುಖದ ಮೇಲೆ ಬ್ಯಾಂಡೇಜ್ ಕಟ್ಟಲಾಗಿತ್ತು.

ಧನಂಜಯ, ಆ ನಾಲ್ವರನ್ನೂ ತೋರಿಸಿ, ಶಾಂತಿಗೆ ಹೇಳಿದ

"ಇವರೇ ಆ ನಾಲ್ವರು ಕೇಡಿಗಳು. ಬಾಡಿಗೆಯ ಕೊಲೆಗಾರರು. ನಿಮ್ಮ ತಂದೆ, ಇವರಿಗೆ-ಎರಡು ಸಾವಿರ ರೂಪಾಯಿಕೊಟ್ಟು, ಹೇಮಂತನನ್ನು ಮುಗಿಸಿಬಿಡಲು ಹೇಳಿದ್ದರಂತೆ...ಆದರೆ ಪಾಪ!...ಹೇಮಂತನೇ ಇವರನ್ನು ಹಣ್ಣು-ಹಣ್ಣು ಮಾಡಿದ."

"ಅವರೊಬ್ಬರೇ ಅಲ್ಲ ಸಾರ್. ನಾನೂ ಅವರೊಂದಿಗಿದ್ದೆ" ಮಧ್ಯೆ ಸೇರಿಸಿದ ಸೂರಪ್ಪ ತನ್ನದೊಂದು ಮಾತನ್ನು

ನಾಲ್ವರೂ ಮುಖ ಕೆಳಗೆ ಹಾಕಿಕೊಂಡು ನಿಂತಿದ್ದರು. ನಂಜುಡಪ್ಪ, ಯಾವ ಮಾತೂ ಆಡದೆ ಮೌನವಾಗಿದ್ದರು. ಅಲ್ಲಿಯವರೆಗೂ ಹುಲಿಯಂತೆ ಹಾರಾಡಿದ ಅವರು ಈಗ ಇಲಿಯಂತೆ ಮುದುಡಿಕೊಂಡು ಕುಳಿತಿದ್ದರು. ಶಾಂತಿ ಮೇಲೆದ್ದು, ಆ ರೌಡಿಗಳ ಹತ್ತಿರ ಬಂದು ಕೇಳಿದಳು

"ನಿಜ ಹೇಳಿ! ಯಾರಿಗೂ ಹೆದರ ಬೇಡೀ! ನನ್ನ ತಂದೆ ಹಾಗೆ ಹೇಳಿದ್ದರಾ ?"

"ಹೌದಮ್ಮಾ! ಹಣ ಸಹಿತ ಕೊಟ್ಟಿದ್ದರು." ಸೋಫಾದ ಮೇಲೆ ಕುಸಿದು ಕುಳಿತ ಶಾಂತಿ, ಅಸಮಾಧಾನದಿಂದ,

"ಡ್ಯಾಡೀ! ನೀವು ಈ ರೀತಿಮಾಡ್ತೀರಿ ಅಂತ, ನಾನು ಅಂದ್ಕೊಂಡಿರಲಿಲ್ಲ" —ಎಂದಳು, ನಂಜುಂಡಪ್ಪ ಯಾವ ಪ್ರತಿಕ್ರಿಯೆಯನ್ನು ತೋರಿಸಲಿಲ್ಲ. ಧನಂಜಯ ನುಡಿದ :

"ಮಿಸ್ ಶಾಂತೀ, ಈ ನಾಲ್ವರು ಕೇಡಿಗಳ ಹೇಳಿಕೆ ಮೇಲಿಂದ, ನಾನು —ಈಗಿಂದೀಗಲೇ ನಿಮ್ಮ ತಂದೆಯವರನ್ನು ಬಂಧಿಸಬಲ್ಲೆ. ಅವರನ್ನು ಯಾವ ಶಕ್ತಿಯೂ ಉಳಿಸಿಕೊಳ್ಳಲಾರದು. ಆದರೇ, ಹೇಮಂತ ಅದಕ್ಕೆ ಒಪ್ತಾ ಇಲ್ಲ ..ಹೀಗಾಗಿ, ನಾನು ಆ ರೀತಿ ಮಾಡ್ತಾ ಇಲ್ಲ ."

ತಲೆ ಎತ್ತಿ ನಂಜುಡಪ್ಪ ಹೇಮಂತನತ್ತ ನೋಡಿದರು ಅವರಿಗೆ ನಂಬಿಕೆ ಯಾಗದು. ಶಾಂತಿಗಂತೂ, ಎಷ್ಟು ಸಂತೋಷವಾಗಿತ್ತೆಂದರೆ, ಕೂತಲ್ಲಿಂದ ಒಂದೇ ಹಾರಿಕೆಗೆ, ಹೇಮಂತನಿದ್ದಲ್ಲಿ ಬಂದು, ಅವನ ಕೈಯನ್ನು ತಾನಾಗಿ ತನ್ನ ಕೈಲಿ ತೆಗೆದುಕೊಂಡು :

"Thank you! Thank you! Thank you very much Hemanth! ನಿಮ್ಮ ಈ ಉಪಕಾರ ನಾನೆಂದೂ ಮರೆಯೋಲ್ಲ."

"ಮರೆಯೋ ಮಾತು ಆಮೇಲೆ ಅಮ್ಮಣ್ಣೀ ಮೊದಲು, ಹೇಮಂತ ಸಾಹೇಬರ ಕೈ ಮುರಿಯದಂತೆ ನೋಡ್ಕೊಳ್ಳಿ ಸಾಕು"

ಶಾಂತಿ, ಹೇಮಂತನ ಕೈಯನ್ನು ಭಾವಾವೇಶದಲ್ಲಿ ಇನ್ನೂ ಕುಲುಕುತ್ತಲೇ ಇದ್ದಳು. ಸೂರಪ್ಪನ ಮಾತಿಗೆ, ಅಲ್ಲಿ ನಗೆ ಬಾಂಬೊಂದು ಸಿಡಿದಂತಾಯಿತು ಮನದಲ್ಲಿಯ ಕಹಿ ಮರೆತು ಎಲ್ಲರೂ ನಕ್ಕರು. ಗಂಭೀರವಾದ ವಾತಾವರಣ ಒಮ್ಮೆಲೇ ತಿಳಿಯಾಯಿತು.

ನಂಜುಡಪ್ಪ ಎದ್ದು ಹೇಮಂತನಿದ್ದಲ್ಲಿ ಬಂದರು

"ಹೇಮಂತ .ನೀನು ಚಿಕ್ಕವ ಆದರೂ, ನಾನು ಮಾಡಿದ ತಪ್ಪನ್ನು ಕ್ಷಮಿಸಿದ್ದೀಯಾ? .ಇದು ನಿನ್ನ ದೊಡ್ಡ ಗುಣ ನಾನೂ ಒಂದು ಸಾರಿ ಕೇಳುತ್ತೇನೆ—ದಯವಿಟ್ಟು ನನ್ನ ಕ್ಷಮಿಸು."

"ಸಾಹುಕಾರರೇ, ನೀವು ದೊಡ್ಡವರು. ಈ ರೀತಿ, ಮಾತನಾಡಬೇಡಿ. ನಾನೂ ಸಹ, ನಿಮ್ಮೊಡನೆ ಸ್ವಲ್ಪ ಬಿರುಸಾಗಿ ನಡೆದುಕೊಂಡೆ ಕ್ಷಮಿಸಿ"

"ಇಬ್ಬರೂ, ಒಬ್ಬರನ್ನೊಬ್ಬರು, ಕ್ಷಮಿಸಿ ಆದಮೇಲೆ ಇನ್ನು ನಮ್ಮದೇನಿದೆ!!" ಎಂದು ಸೂರಪ್ಪ ನುಡಿದಾಗ, ಮತ್ತೊಮ್ಮೆ ನಗೆ ಬಾಂಬು ಸಿಡಿಯಿತು

## ನಾಲ್ಕು

ಅಂದಿನಿಂದ ಹೇಮಂತ ಮತ್ತು ಶಾಂತಿ, ತೀರ ಹತ್ತಿರ ಬಂದರು. ಒಬ್ಬರನ್ನೊಬ್ಬರು ಆರಾಧಿಸ ಹತ್ತಿದರು. ಶಾಂತಿಯ ಗೆಳತಿಯರೆಲ್ಲ ಅವರಿಗೆ ಕೀಟಲೆ, ಕೊಡಲಾರಂಭಿಸಿದರು. "ಏನೇ? ನಿನ್ನ ಕೈಗೆ ಕೋಳಗ ತೊಡೆಸಿದವನನ್ನೇ ನೀನು ಸೆರೆ ಹಿಡಿದು ಬಿಟ್ಟೆಯಲ್ಲ!" ಎಂದು ಗೆಳತಿಯರ ತಮಾಷೆ, ಕೀಟಲೆ, ಎಲ್ಲಾ-ಶಾಂತಿಗೆ ಒಂದು ಬಗೆಯ ಖುಷಿ ಕೊಡುತ್ತಾ ಇತ್ತು.

ಒಂದು ದಿನ ಸಂಜೆ, ಹೇಮಂತ ಹೊರಗಡೆ ಹೊರಡಲು ಸಿದ್ಧನಾಗಿದ್ದ. ಅದೇ ವೇಳೆಗೆ ಫೋನು ಬಾರಿಸಿತು. ಸೂರಪ್ಪ ಅಲ್ಲಿ ಇರಲಿಲ್ಲ ಯಾವುದೋ ಕೇಸಿನ ವಿಷಯವಾಗಿ ಹೋದವನಿನ್ನೂ ಬಂದಿರಲಿಲ್ಲ. ಹೇಮಂತ ಫೋನು ಎತ್ತಿಕೊಂಡ.

"ಹೇಮಂತಾ ..ಹೇಮಂತ ನಾನು ಶಾಂತಿ !"

"ಏಕೆ ಶಾಂತೀ ? ಏನಾಯ್ತು ? ಯಾಕೆ ತುಂಬಾ ಭಯಪಡ್ತಾ ಇದ್ದೀಯಾ ? .ಏನಾಯ್ತು ?"

"ಹೇಮಂತ ಹೇಮಂತಾ ನಾಲ್ಕಾರು ಜನ ಕಪ್ಪುಬಟ್ಟೆ ಹಾಕಿಕೊಂಡವರು, ನನ್ನನ್ನು ಅಟ್ಟಿಸಿಕೊಂಡು ಬರ್ತಾ ಇದಾರೆ "

" . .ಏಕೆ ?"

"ನನಗೆ ಗೊತ್ತಿಲ್ಲ ಹೇಮಂತ ! .ನಾನು, ಅವರಿಂದ ತಪ್ಪಿಸಿಕೊಂಡು ಬಂದಿದ್ದೇನೆ .."

"ಭಯ ಪಡಬೇಡ ಶಾಂತೀ ! ನಾಸೀಗಲೇ ಬಂದೆ ನಾನು ಬರುವವರೆಗೂ ಧೈರ್ಯವಾಗಿರು. ಅಂದಹಾಗೆ, ನೀನು ಎಲ್ಲಿಂದ ಮಾತಾಡ್ತಾ ಇದ್ದೀಯಾ ?"

"ನಮ್ಮ ಕಾಲೇಜು ಹತ್ತಿರದ ಪಬ್ಲಿಕ್ ಬೂತ್‌ನಿಂದ ನಾನು, ಕಾಲೇಜು ಹಿಂದುಗಡೆ ಮರಗಳ ತೋಪಿದೆಯಲ್ಲ—ಅಲ್ಲಿ ಅವಿತುಕೊಂಡಿರುತ್ತೇನೆ ಬೇಗ ಬಾ ಅಯ್ಯೋ! ಅವರು ಇತ್ತ ಕಡೆಯೇ ಬರತಾ ಇದಾರೆ. ಓಹ್! ದೇವರೇ ! ನಾನು ಏನು ಮಾಡಲಿ ?"

ಒಮ್ಮೆಲೇ ಸಂಬಂಧ ಕಡಿದು ಹೋಯಿತು. "ಶಾಂತಿ ಶಾಂತೀ" ಎಂದು ಹೇಮಂತ ಜೋರಾಗಿ ಕೂಗಿದ. ಆ ಕಡೆಯಿಂದ ಯಾವ ಉತ್ತರವೂ ಬರಲಿಲ್ಲ ಒಂದೇ ಹಾರಿಕೆಗೆ, ಮೋಟಾರ್‌ಬೈಕ್ ಇದ್ದೆಡೆ ಬಂದ .ಮರುನಿಮಿಷವೇ ಬುಲೆಟ್ ವೇಗದಲ್ಲಿ ಬೈಕ್ ಓಡತೊಡಗಿತು—ಕಾಲೇಜಿನ ಮರಗಳ ತೋಪಿನತ್ತ .

ಹೇಮಂತನ ಬೈಕ್ ಮರಗಳ ತೋಪಿನ ಹತ್ತಿರ ಬಂದಾಗ ಆಗಲೇ, ಮೆಲ್ಲನೇ ಕತ್ತಲು ತನ್ನ ಬಲೆ ಹರಡುತ್ತಾ ಇತ್ತು. ಬೆಳಕು ಕಾಲು ತೆಗೆಯುತ್ತಾ ಇತ್ತು ಬೈಕ್ ನಿಲ್ಲಿಸಿ ಬಂದು, ಒಂದು ಬಾರಿ ಸುತ್ತಲೂ ನೋಡಿದ ಹೇಮಂತ. ಒಂದು ನರಪಿಳ್ಳೆ ಸಹ ಕಣ್ಣಿಗೆ ಬೀಳಲಿಲ್ಲ. ರೌಡಿಗಳ ಪಾಲಿಗೆ ಕಾಲಯಮನಂತಿದ್ದ ಅದೇ ಹೇಮಂತ, ಈಗ ಅಧೀರನಾಗಿದ್ದ ಶಾಂತಿ, ಯಾವುದೋ ದುರ್ಭರ ಪ್ರಸಂಗದಲ್ಲಿ ಸಿಲುಕಿಕೊಂಡಿದ್ದಾಳೆ. ಆಕೆ ಎಲ್ಲಿದ್ದಾಳೋ? ಯಾವ ಪರಿಸ್ಥಿತಿಯಲ್ಲಿದ್ದಾಳೋ?—ಎಂಬುದೇ ಅವನಿಗಿರುವ ಚಿಂತೆ ಎರಡು ನಿಮಿಷ ಅತ್ತಿತ್ತ ನೋಡೀ—"ಶಾಂತೀ !....ಶಾಂತೀ ! ... ಎಲ್ಲಿರುವೆ ?" ಎಂದು ಜೋರಾಗಿ ಕೂಗತೊಡಗಿದ ಹುಚ್ಚನಂತೆ !. ..ಒಮ್ಮೆ ಅತ್ತ ಒಮ್ಮೆ ಇತ್ತ ಓಡಿ, ಓಡಿ ದಣಿದ ಅಷ್ಟರಲ್ಲಿ ಯಾರೋ ಮೆಲುವಾಗಿ

ನರಳಿದ ಸದ್ದು ಎಲ್ಲೆಲ್ಲಿಯೂ ಸಪ್ಪಳ ಆ ಸಪ್ಪಳದ ಜಾಡು ಹಿಡಿದೆ ನಡೆದ. ಮರಗಳ ತೋಪಿನಿಂದ ಸುಮಾರು ಅಂತರದಲ್ಲೊಂದು ಹಳ್ಳ ಆ ಹಳ್ಳದಲ್ಲಿ ಯಾರೋ, ಗುದ್ದಾಡುತ್ತಿರುವ ಸದ್ದು ಆ ಕಡೆ ಓಡಿದ ಕಪ್ಪು ಬಟ್ಟೆ ಧರಿಸಿದ, ನಾಲ್ಕಾರು ಜನರ ಮಧ್ಯೆ ಸಿಲುಕಿ ಅವರ ಹಿಡಿತದಿಂದ ಪಾರಾಗಲು 'ಶಾಂತಿ ಹೆಣಗಾಡುತ್ತಿದ್ದಳು!, ಪಾಪ! ಅವಳಿಂದ ಆಗ್ತಾ ಇಲ್ಲ. ಹೇಮಂತನ ವೈರಕ್ತ, ತಕ-ತಕನೆ ಕುದಿಯಿತು ಶಾಂತಿ—ಬದುಕಿ, ತನ್ನೆದುರು ಸುರಕ್ಷಿತವಾಗಿದ್ದುದು—ಅವನ ದೇಹದಲ್ಲಿ ದೈತ್ಯಶಕ್ತಿಯನ್ನು ತುಂಬಿದಂತಾಯಿತು ಅವರ ಮೇಲೆ, ಯಮನಂತೆ ಬಿದ್ದ ಇಬ್ಬರ ಜೆಂಡು ಹಿಡಿದು, ಈಚೆ ಎಳೆ ದೊಗೆದ—ಒಬ್ಬನ ಪೃಷ್ಠ ಭಾಗದ ಮೇಲೆ ಒದ್ದರೇ ಮತ್ತೊಬ್ಬನ ಹೊಟ್ಟೆಗೆ ಒದ್ದ. ನಾಲ್ಕಾರು ಬಾರೀ ಕಂಠಗಳು ಒಮ್ಮೆಲೇ ಚೀರಿಕೊಂಡವು—ಅಯ್ಯೋ ಸತ್ತೇ!

ಅಯ್ಯೋ ನನ್ನ ತಲೆ!

ಅಯ್ಯೋ ನನ್ನ ಹೊಟ್ಟೆ!

ಅಯ್ಯೋ ನನ್ನ ಸೊಂಟ!

ಅಯ್ಯೋ ನನ್ನ ಪೃಷ್ಠ !

ತನ್ನ ಕಾಲಿಗೆ ಮೆದು—ಮೆದುವಾಗಿ ತಗುಲಿದ ದೇಹ, ನಾರೀ ಕಂಠ, ಇವೆಲ್ಲವುಗಳಿಂದ ತಬ್ಬಿಬ್ಬಾದ. ಜಡವಾಗಿ ನಿಂತುಬಿಟ್ಟ

ಶಾಂತಿ ಮಾತ್ರ—ಎದ್ದು ನಿಂತು,ಅಟ್ಟಹಾಸ ಮಾಡಿ ಹೋ- ಹೋ- ಎಂದಳು ಅರಚುತ್ತಾ, ಚಪ್ಪಾಳೆ ತಟ್ಟಿ, ನಗಲಾರಂಭಿಸಿದಳು ಆಗ, ಹೇಮಂತನಿಗೆ ಅರ್ಥವಾದದ್ದು ಕಪ್ಪು ಬಟ್ಟೆ ಧರಿಸಿ' ಪುರುಷ ವೇಷದಲ್ಲಿದ್ದವರೆಲ್ಲಾ ಆಕೆಯ ಗೆಳತಿಯರು ಅಂತ ಅವಳು ಹೇಮಂತನ ಕಡೆ ನೋಡಿ

"ಹೇಮಂತಾ, ನೀನು, ನನ್ನೆಷ್ಟು ಪ್ರೀತಿಸ್ತೀಯಂತ, ಪರೀಕ್ಷೆ ಮಾಡೋಕೆ, ನಾನೀರೀತಿ ನಾಟಕ ಮಾಡಿದೆ"

"ಶಾಂತೀ" ಹೇಮಂತ ಓಡಿ ಬಂದು; ಆಕೆಯನ್ನು ತಬ್ಬಿಕೊಂಡು ಆಕೆಯ ಕೆನ್ನೆ, ಹಣೆ, ಮೂಗು, ತುಟಿಗಳ ಮೇಲೆಲ್ಲಾ, ಮುತ್ತಿನ ಮಳೆ ಕರೆದ. ಸುತ್ತಲಿನ ಭೂಮಿಯೆಲ್ಲ, ಗರ-ಗರನೆ ಸುತ್ತುತ್ತಿರುವಂತೆ, ಭಾಸವಾಯಿತು—ಶಾಂತಿಗೆ

"ಓಹ್! ಅದೆಷ್ಟು ಸುಖ?! .ಅದೆಷ್ಟು ಆನಂದ?! ..ಅವಳ ಗೆಳತಿಯರಲ್ಲ, ತಮಗಾದ ನೋವು ಮರೆತು, ಮುಸಿ–ಮುಸಿ ನಗಲಾರಂಭಿಸಿದರು. ಒಬ್ಬಾಕೆ ಒಂದು ದೊಡ್ಡದಾದ ಹೂವಿನಹಾರ ತಂದು, ಇಬ್ಬರನ್ನು ಸುತ್ತು

ಹಾಕಿ ಬಂಧಿಸಿದಳು. ಆ ಮೇಲೆ ಹಾಸ್ಯ ಮಾಡುತ್ತಾ

"ಇನ್ನು ನೀವಿಬ್ಬರೂ, ಆದಷ್ಟು ಬೇಗ ವಿವಾಹ ಬಂಧನದಲ್ಲಿ ಬಂಧಿತರಾಗಿ ನಮಗೆಲ್ಲ ಸಿಹಿ ನೀಡಿ. ಇಲ್ಲದಿದ್ದರೇ ಮದುವೆಗೆ ಮೊದಲೇ ನೀವು ಅಪ್ಪ, ಅಮ್ಮ ಆಗಬಹುದು!"

ಗೆಳತಿಯರೆಲ್ಲ ಹೋ—ಎಂದು ಅರಚಿದರೆ, ಶಾಂತಿ ಹೇಮಂತನ ಹರವಾದ ಎದೆಯಲ್ಲಿ ಮುಖ ಹುದುಗಿಸಿಳು—ಪೊದೆಯಂತೆ, ಹಬ್ಬಿದ ಕಪ್ಪು ರೋಮಗಳು ಅವಳ ಮುಖಕ್ಕೆ ಕಚಗುಳಿ ಇಟ್ಟು, ಅವಳನ್ನು ರೋಮಾಂಚಿತಳನ್ನಾಗಿ ಮಾಡಿದವು

ಮುಂದಿನ ದಿನವೆಲ್ಲ ಹೇಮಂತ ಶಾಂತಿಯರ ಪ್ರಣಯದ ದಿನಗಳಾದವು. ಅವರು ಜೋಡು ಹಕ್ಕಿಗಳಾಗಿ ವಿಹರಿಸಿದರು. ಸಮುದ್ರತೀರ, ಬೆಟ್ಟ, ಕಾಡು, ತೋಟ—ಯಾವಸ್ಥಳಗಳೂ ಉಳಿಯಲ್ಲಿಲ್ಲ. ಎಲ್ಲೆಲ್ಲೂ ಅವರಿಬ್ಬರ ಹೆಜ್ಜೆಗಳು ಮೂಡಿದವು.

ಇನ್ನು ತಮಗೆ ಒಬ್ಬರನೊಬ್ಬರು ಬಿಟ್ಟಿರಲಾಗದು ಎಂದು ಅವರಿಗನಿಸಿದಾಗ, ಒಂದು ದಿನ, ಲಜ್ಜೆಯನ್ನು ಬದಿಗಿಟ್ಟು, ಶಾಂತಿಯೇ ಕೇಳಿದಳು!

"ಎಷ್ಟು ದಿನ ಅಂತ ನಾವು ಇದೇ ರೀತಿ ಇರುವುದು—ಹೇಮಂತಾ?"

"ಶಾಂತಿ, ನಾನೂ ಅದನ್ನೇ ವಿಚಾರಿಸ್ತಾ ಇದೀನಿ. ನನ್ನ ತಾಯಿಯನ್ನು ಒಪ್ಪಿಸುವುದು ಅಷ್ಟು ಕಠಿಣವಲ್ಲ. ಅವಳು ನಾನು ಮದುವೆಗೆ 'ಹುಂ' ಅನ್ನುವುದನ್ನೇ ಕಾಯ್ತಾ ಇದಾಳೆ. ಆದರೇ ..ಆದರೇ, ನನಗೆ, ನಿನ್ನ ತಂದೆಯವರ ಬಗ್ಗೆಯೇ ಚಿಂತೆ! ."

ಒಂದು ಕ್ಷಣ ಮೌನವಾಗಿದ್ದ ಶಾಂತಿ ಹೇಳಿದಳು·

"ಹಾಗಾದರೆ ಹೀಗೆ ಮಾಡುವ—ಇಂದು ಸಾಯಂಕಾಲ ನೀನು ನಮ್ಮ ಮನೆಗೆ ಬಂದುಬಿಡು ತಂದೆಯೊಂದಿಗೆ ಸ್ಪಷ್ಟವಾಗಿ ಮಾತನಾಡೋಣ. ಆದರೆ, ಒಂದುಮಾತುಮಾತ್ರ ನಿಜ ..ಹೇಮಂತ್, ನಾನು, ನಿನ್ನನ್ನು ಬಿಟ್ಟು ಬದುಕಿ ಇರಲಾರೆ" ಹೇಮಂತ ಬರಸೆಳೆದು, ಅವಳನ್ನಪ್ಪಿಕೊಂಡು, ಮುದ್ದಿಸುತ್ತಾ

"ಹುಚ್ಚೀ!, ನನ್ನ ಪಾಡು ಸಹಾ, ನಿನ್ನ ಹಾಗೆಯೇ ಇದೆ—ಎಂಬುದನ್ನು ಮರೆತೆಯಾ? ಎಂದ."

ಅಂದು ಸಂಜೆ, ನಿರ್ಧರಿಸಿದಂತೆ, ಶಾಂತಿ ಹಾಗೂ ಹೇಮಂತ, ನಂಜುಂಡಪ್ಪನವರ ಮುಂದೆ ನಿಂತರು. ಅವರಿಗೆ ಎಲ್ಲ ವಿಷಯ ವಿವರವಾಗಿ ತಿಳಿಸಿದರು. ಈ ವಿಷಯ, ನಂಜುಂಡಪ್ಪನವರಿಗೆ ಮೊದಲೇ ಗೊತ್ತಿತ್ತು. ಗೊತ್ತಿದ್ದೂ, ಅವರು ಈ ವಿಷಯದಲ್ಲಿ ಕೈ ಹಾಕಿರಲಿಲ್ಲ. ಎರಡು ನಿಮಿಷ ಮೌನವಾಗಿದ್ದು

ಅವರು ನುಡಿದರು.

"ಹೇಮಂತಾ, ನಿನ್ನಂಥವನು ಶಾಂತಿಯ ಕೈಹಿಡಿಯಬೇಕೆಂದರೆ, ಅವಳ ಜೊತೆಗೆ ನಾನೂ ಸಹ ಅದೃಷ್ಟವಂತ. ಆದರೆ, ಒಂದು ಮಾತು ಆಕೆ ಶ್ರೀಮಂತಿಕೆಯಲ್ಲಿ ಹುಟ್ಟಿ, ಬೆಳೆದು ಬಂದವಳು ನಿನ್ನ ಒಂದು ತಿಂಗಳ ಸಂಬಳ ಅವಳ ಬಟ್ಟೆಗೆ ಸಾಲಲಿಕ್ಕಿಲ್ಲ. ನನಗೆ, ಅವಳೊಬ್ಬಳೇ ಮಗಳು. ಆಸ್ತಿ-ಪಾಸ್ತಿ ಎಲ್ಲಾ, ಅವಳಿಗೇ ಸೇರಿದ್ದು. ಆದರೆ, ನೀನು ತುಂಬಾ ಸ್ವಾಭಿಮಾನಿ, ಇವನ್ನು ಬೆರಳಿನಿಂದ ಸಹ ಮುಟ್ಟಲಾರೆ, ಇಂಥ ಪರಿಸ್ಥಿತಿಯಲ್ಲಿ ಅವಳನ್ನು ಸುಖವಾಗಿ ನೋಡಿಕೊಳ್ಳುವುದು ತುಂಬಾ ಕಠಿಣವಾದದ್ದು"

"ಡ್ಯಾಡೀ ನಾನು ಗಂಜಿ ಕುಡಿದಾದರೂ, ಹೇಮಂತನ ಜೊತೆ—ಇರುತ್ತೇನೆ, ಒಪ್ಪಿಗೆ ಕೊಡಿ."

ಹೇಮಂತ, ಶಾಂತಿಯಡೆ, ಕೃತಜ್ಞತೆಯಿಂದ ನೋಡಿ ಅವರಿಗೆ ನಮಸ್ಕರಿಸುತ್ತಾ,

"ನಿಮ್ಮ ಮಗಳನ್ನು ನನ್ನ ಪ್ರಾಣಕ್ಕಿಂತ ಹೆಚ್ಚು ಚೆನ್ನಾಗಿ ನೋಡಿಕೊಳ್ಳುತ್ತೇನೆ" .ಎಂದಾಗ ನಂಜುಂಡಪ್ಪ ಭಾರವಾದ ಹೃದಯದಿಂದ, ಆಶೀರ್ವದಿಸಿದರು "ದೇವರು ನಿಮ್ಮನ್ನು ಚೆನ್ನಾಗಿಟ್ಟಿರಲಿ!" .

## ಐದು

ಗೋಪಾಲರಾಯರು, ನಿವೃತ್ತ ಶಾಲಾ ಶಿಕ್ಷಕರು ಅವರಿಗೆ ಎರಡು ಮಕ್ಕಳು. ಮೊದಲನೆಯದು ಗಂಡು. ಅವನೇ ರಾಮು ಎರಡನಯದು ಹೆಣ್ಣು. ಅವಳೇ ಸುಮಾ. ಗೋಪಾಲರಾಯರ ಪತ್ನಿ ರಾಧಾಬಾಯಿ. ಗಂಡನಿಗೆ ಹೇಳಿ ಮಾಡಿಸಿದಂಥ ಸತಿ. ತನ್ನ ಪತಿ ಓರ್ವ ಉಪಾಧ್ಯಾಯ, ಅದೂ ಪ್ರಾಮಾಣಿಕ ಉಪಾಧ್ಯಾಯ. ಅವರಿಗೆ ಬರುವ ಚಿಕ್ಕ ಸಂಬಳದಲ್ಲಿ ಜೀವನ ರಥ ಸಾಗಿಸಬೇಕೆಂದು ಬಲ್ಲವಳು. ಒಂದು ದಿನವೂ ಪತಿಯ ಮನ ನೋಯುವಂತೆ ನಡೆಯಲಿಲ್ಲ.

ಹೀಗಿರುವಾಗಲೇ, ಗೋಪಾಲರಾಯರ ಮೇಲೆ ಮತ್ತೊಂದು ಮಹತ್ತರವಾದ ಜವಾಬ್ದಾರಿ ಬಂದು ಬಿದ್ದಿತು. ಅದೇ ಅವಳ ತಂಗಿ ಶಾರದಾ ಹಾಗೂ ಆಕೆಯ ಮಗ ಹೇಮಂತನ ಪೋಷಣೆ ಮಾಡುವ ಬಗ್ಗೆ. ಶಾರದಾಳ ಪತಿ, ಸರಕಾರಿ ಆಫೀಸಿನಲ್ಲಿ ಅಕೌಂಟೆಂಟ್ ಆಗಿದ್ದರು. ಹೇಮಂತನಿಗೆ ಕೇವಲ ಒಂದು

ವರ್ಷವಿರುವಾಗಲೇ, ಶಾರದಾಳ ಪತಿ ಶ್ಯಾಮಸುಂದರ ಅಪಘಾತದಲ್ಲಿ ತೀರಿಕೊಂಡ. ಒಂದೆರಡು ವರ್ಷ ಹೇಮಂತನೊಂದಿಗೆ ಸಮಾಜ ಎದುರಿಸಿ, ಜೀವನ ಸಾಗಿಸಲು ಶಾರದಾ ಪ್ರಯತ್ನಿಸಿದಳು. ಆದರೆ, ಸಮಾಜ ಅದಕ್ಕೆ ಎಡೆಮಾಡಿಕೊಡಲಿಲ್ಲ. ಶಾರದಾ ಮೊದಲೇ ಸುಂದರಿ. ಅದರ ಮೇಲೆ ತುಂಬು ಜವ್ವನೆ. ಒಂದು ಹೆಣ್ಣಿನ ಮೇಲೆ, ಸಮಾಜದ ಕಾಮುಕರ ಸಾವಿರ ಕಣ್ಣುಗಳು. ಅವರ ದೃಷ್ಟಿಯನ್ನೆದುರಿಸಿ, ಆಕೆ ಜೀವನ ನಡೆಸಿದ್ದಳು.

ಒಂದು ದಿನ ಹೇಮಂತನಿಗೆ ತುಂಬಾ ಜ್ವರ. ವೈದ್ಯರನ್ನು ಕರೆತರಲು ಹೊರಟಳು. ಹೊರಗೆ ಭಾರೀ ಮಳೆ. ಭಯಂಕರ ಬಿರುಗಾಳಿ. ರಾತ್ರಿ ವೇಳೆ . ಹೋಗಬೇಕೋ ಬೇಡವೋ ಎಂದು ಒಂದು ಕ್ಷಣ ಯೋಚಿಸಿದಳು. ಹೇಮಂತನ ವೇದನೆ ನೋಡಿ, ಆಕೆಗೆ ತಡೆದುಕೊಳ್ಳಲಾಗಲಿಲ್ಲ ಅದದ್ದಾಗಲೀ, ದೇವರಿದ್ದಾನೆ ಎಂದು ಹೊರಬಿದ್ದಳು ಒಂದೇ ಕ್ಷಣದಲ್ಲಿ ಆಕೆ ತೆಪ್ಪನೆ ತೋಯ್ದುಹೋದಳು ಹಾಗೇ ಮಳೆಯಲ್ಲಿ ನೆನೆಯುತ್ತ ವೈದ್ಯರ ಮನೆಗೆ ಬಂದಳು ವೈದ್ಯರಿನ್ನೂ ಬಂದಿರಲಿಲ್ಲ ಬರುತ್ತಲೇ ದಯವಿಟ್ಟು ತನ್ನ ಮನೆಗೆ ಕಳಿಸಿಕೊಡಬೇಕೆಂದು ಹೇಳಿದ ಅವಳು ಹಾಗೆಯೇ ಮನೆಯ ಕಡೆ ನಡೆದಳು

ಮಳೆ ನೀರಿನಿಂದ, ರಸ್ತೆಯಲ್ಲ ಮುಚ್ಚಿಹೋಗಿತ್ತು ದಾರಿ ಸರಿಯಾಗಿ ಕಾಣಿಸದು ಬೀದಿ ದೀಪಗಳಿದ್ದರೂ, ಧಾರಾಕಾರವಾಗಿ ಸುರಿಯುವ ಮಳೆಯಿಂದಾಗಿ ಅವು ನಿರ್ಜೀವವಾಗಿದ್ದವು. ಒಂದು ತಿರುವಿನಲ್ಲಿ ಗುಂಡಿಯೊಂದರಲ್ಲಿ ಕಾಲಿಟ್ಟು, ಶಾರದಾ ಮುಗ್ಗರಿಸಿ ಬಿದ್ದುಬಿಟ್ಟಳು. ಏಳಬೇಕೆನ್ನುವಷ್ಟರಲ್ಲಿ ಆದಾವ ಮಾಯದಿಂದಲೋ ಅವಳಿಗೆ ಗೊತ್ತಾಗದಂತೆ ಅವಳ ಹಿಂದೆಯೇ ಬಂದ ಕುಡುಕನೊಬ್ಬ, ಅವಳ ಮೇಲೆ ಹದ್ದಿನಂತೆ ಎರಗಿದ. ರಸ್ತೆಯ ಮೇಲೆ ಒಂದು ನರಪಿಳ್ಳೆ ಸಹ ಇಲ್ಲ ಶಾಂತಿ ಕೂಗಿದಳು ಅರಚಿದಳು. 'ನನ್ನನ್ನು ಕಾಪಾಡಿ'—ಎಂದು ಬೇಡಿಕೊಂಡಳು. ಒಂದು ಮನೆಯ ಬಾಗಿಲು ಕಿಟಕಿ ಸಹ ತೆರೆಯಲಿಲ್ಲ. ಯಾರೂ ಅವಳ ಸಹಾಯಕ್ಕೆ ಬರಲಿಲ್ಲ. ಕುಡುಕ ಅಟ್ಟಹಾಸ ಮಾಡಿ ನಗುತ್ತಾ, ಜೇಬಿನಿಂದ ಮತ್ತೊಂದು ಸೀಸೆ ತೆಗೆದು ಒಂದೇ ಬಾರಿಗೆ ಅದನ್ನು ಬರಿದು ಮಾಡಿ, ಸೀಸೆಯನ್ನು ಕೆಳಗೆಸೆದ. ನೀರಿನಲ್ಲಿ ಬಿದ್ದು, ಅದು ಬುಡು-ಬುಡು ಸಪ್ಪಳದೊಂದಿಗೆ ರಸ್ತೆಯ ತಳ ಕಂಡಿತು.

ಪ್ರಾರಂಭವಾಯಿತು—ಇಲಿ ಬೆಕ್ಕಿನ ಆಟ ಶಾರದ ಅವನ ಕೈಗೆ ಸಿಕ್ಕಳು. ಅವನ ಮನಸ್ಸಿನಂತೆ ನಡೆದುಕೊಳ್ಳಲಿಲ್ಲ, ಮನೆಯಲ್ಲಿ ತನ್ನ ಮಗು ಒಂಟಿಯಾಗಿದೆ. ಜ್ವರದಿಂದ ಒಳಳುತ್ತಿದೆ. ತಾನು ಹೋಗಬೇಕು ಎಂಬ ಯೋಚನೆ ಬರುತ್ತಲೇ, ಅವಳ ದೇಹಕ್ಕೆ ಬಲ ಬಂದಿತು. ಆ ಕುಡಕ

ನೊಂದಿಗೆ ಹೋರಾಡಲಾರಂಭಿಸಿದಳು. ಅದೇ ಕ್ಷಣಾ, ನೆಲಕ್ಕೆ ಬಿದ್ದ ಆಕೆಯ ಮೇಲೆ ಕುಡುಕ ಎರಗಿದ ಶಾರದಾಳ ಉಸಿರು ಸಿಕ್ಕಂತಾಯಿತು. ಕೂಗಿ ಕೊಳ್ಳಬೇಕೆಂದರೆ, ಬಾಯಿ, ಮೂಗುಗಳಲ್ಲಿ ನೀರು ಹೋಗಲಾರಂಭಿಸಿತು. ವಿಚಿತ್ರ ಸಂಕಟದಲ್ಲಿ ವಿಲಿ ವಿಲಿ ಒದ್ದಾಡುವಾಗ, ಬಲಗೈಗೆ ಒಂದು ವಸ್ತು ತಗಲಿತು. ಅದೇ ಶರಾಬಿನ ಸೀಸೆ ಸರೀ—ಮುಂದೇನು? ಅದನ್ನು ಎತ್ತಿ ಕೊಂಡವಳೇ ಜೋರಾಗಿ ಆ ಕುಡುಕನ ತಲೆಗೆ ಬಾರಿಸಿದಳು. ವಿಕಾರವಾಗಿ ಕಿರುಚಿದ ಆತ, ಹಾಗೆಯೇ ಹಿಂದೆ ವಾಲಿದ. ಹರಿವ ನೀರಿನೊಂದಿಗೆ, ಅವನ ತಲೆಯಿಂದ ಬಸಿದ ರಕ್ತ ಬೆರೆತು, ಅಲ್ಲೊಂದು ರಕ್ತದ ಮಡುವು ನಿರ್ಮಾಣ ವಾಯಿತು. ಒಂದು ಬಾರಿ ಅತ್ತ ದೃಷ್ಟಿಬೀರಿ, ಅಂಥ ಚಳಿಮಳೆಯಲ್ಲಿಯೇ ಭಯದಿಂದ ಬೆವತ ಶಾರದಾ ಮನೆಯ ಕಡೆ ಓಡಿದಳು ಹೇಮಂತ ಅಲ್ಲಿ ಒಂಟಿಯಾಗಿದ್ದ.

ಬಿರುಗಾಳಿಯಂತೆ ಬಂದು ಮನೆ ಸೇರಿದ ಶಾರದ ಮೊದಲು ಬಾಗಿಲು ಭದ್ರಪಡಿಸಿ, ಅಗಳಿ ಹಾಕಿದಳು ಕಣ್ಣುಮುಚ್ಚಿ ಒಂದೆರಡು ನಿಮಿಷ ಹಾಗೆಯೇ ನಿಂತುಕೊಂಡಳು. ಓಡಿ ಬಂದುದರಿಂದ ಅವಳು ಏದುಸಿರು ಬಿಡು ತ್ತಿದ್ದಳು ಕುಡುಕನೊಂದಿಗೆ ನಡೆದ ಸೆಣಸಾಟದಲ್ಲಿ ಅವಳ ಸೀರೆ ಸಹ ಅಲ್ಲಲ್ಲಿ —ಹರಿದು, ಕಳಚಿ ಹೋಗಿತ್ತು. ಕೆಂಪು ಕುಪ್ಪಸ ಪಡಕಾರದ ಮೇಲೆ ಇದ್ದುದ ರಿಂದ, ಅವಳ ತುಂಬಿದೆದೆ, ಮಳೆಯಲ್ಲಿ ತಪ್ಪನೆ ತೊಯ್ದು ಹೋಗಿದ್ದು, ಅವಳ ಉಸಿರಿಗೆ ತಕ್ಕಂತೆ ಅದೂ ಏರಿಳಿಯುತ್ತಿತ್ತು.

ಕಣ್ಣು ಮುಚ್ಚಿ ನಿಂತ ಶಾಂತಿಗೆ, ಕಣ್ಣು ತೆರೆಯಲು ಸಹ ಗಾಬರಿ. ಕಣ್ಣು ತೆರೆದರೆ, ಎದುರಿಗೆಲ್ಲಿ ಆ ಕುಡುಕ ಬಂದು ನಿಂತಿರುತ್ತಾನೋ ಅಂತ. ಮುಂದಿನ ಕ್ಷಣವೇ ಒಮ್ಮೆಲೇ ಅವಳಿಗೆ ಮಿಂಚು ಹೊಡೆದಂತಾಯಿತು. "ಅರೇ, ಮಗುವೆಲ್ಲಿ ?—ಜ್ವರದಿಂದ ಬಳಲುತ್ತಿದ್ದ ಅದರ ನರಳಾಟ ಏಕೆ ಕೇಳ್ತಾ ಇಲ್ಲ ?"—ಅದಕ್ಕಂತಾದರೂ, ಒಮ್ಮೆಲೆ ಕಣ್ಣು ಬಿಟ್ಟಳು. ಅವಳ ಉಸಿರು ಸಿಕ್ಕಂತಾಯಿತು. ಕಣ್ಣು ಗುಡ್ಡೆಗಳು ಗರಗರ ತಿರುಗಲಾರಂಭಿಸಿದವು.

ಹೇಮಂತನನ್ನು ಎತ್ತಿಕೊಂಡು, ಕೈಯ್ಯಲ್ಲಿಯೇ, ಅದನ್ನು ತೊಟ್ಟಿಲಿ ನಂತೆ ಜೀಕುತ್ತಿರುವ ಧಾಂಡಿಗನೊಬ್ಬನಿದ್ದಾನೆ ಅವನ ದೃಷ್ಟಿ ತನ್ನ ಎದೆಯ ಮೇಲಿವೆ. ಅವಳ ಹರಕು ಗಾದಿಯ ಮೇಲೆ, ಆರಾಮವಾಗಿ ಮಲಗಿ, ಸಿಗರೇಟು ಸೇದುತ್ತಿದ್ದ ಇನ್ನೊಬ್ಬ, ತನ್ನನ್ನೇ ಹರಿದು ತಿನ್ನುವಂತೆ ನೋಡು ತ್ತಿದ್ದಾನೆ .

ಅವರಿಬ್ಬರೂ ಯಾರೆಂದು ಚೆನ್ನಾಗಿ ಗೊತ್ತಿತ್ತು. ಆ ಭಾಗದ ರುಸ್ತುಂ

ಜೋಡಿ ಎಂದು ಪ್ರಸಿದ್ಧರಾದ ಶಂಕರ–ಸುಂದರ ರೌಡಿಗಳವರು. ಹತ್ತಾರು ಬಾರಿ ಆಕೆಯನ್ನು ಕೆಣಕಿದ್ದರು. ತಮ್ಮ ಮನದಾಸೆ ತಿಳಿಸಿದ್ದರು. ಮಹಾರಾಣಿಯಂತೆ ಅವಳನ್ನು ಸಾಕುವದಾಗಿ ಆಮಿಷ ತೋರಿಸಿದ್ದರು. ಆದರೆ ಶಾರದಾ, ಅವರಿಗೆ ಸೊಪ್ಪು ಸಹ ಹಾಕಿರಲಿಲ್ಲ. ಇಂದವರು ಆಕೆಗಾಗಿ ಹೊಂಚು ಹಾಕಿ ಕೂತಿದ್ದರು.

"ಬಾ—ಶಾರದಾ—ನಿನಗಾಗಿ ನಾನು ಕಾದಿರುವೆ ಪಾಪ! . ಮಗುವನ್ನು ಬಿಟ್ಟು ಹೋಗಿದ್ದೀ—ಅದು ಅಳ್ತಾ ಇತ್ತು. ನಾವದನ್ನು ಸಮಾಧಾನ ಮಾಡಿದೇವೆ ..ಚು ..ಚು ..ಚು . ಮಗುವಿಗೆ ಜ್ವರ ಅಂತ ಕಾಣುತ್ತೆ! ನೀ ಏನೂ ಬೆಧರ ಬೇಡ ...ನಾವು ಹೇಳಿದಂತೆ ಕೇಳು ಸಾಕು ಮುಂದಿನ ಎಲ್ಲಾ ಜವಾಬ್ದಾರಿ, ನಮ್ಮ ಮೇಲಿರಲಿ. ಬಾ .ನಿನಗಾಗಿ ನಾನು ಏಳೇಳು ಜನ್ಮದಿಂದ ಕಾಯ್ದು ಕುಳಿತಿರುವೆ."

ಅಷ್ಟರಲ್ಲಿ ಶಾರದಾ ಸುಧಾರಿಸಿಕೊಂಡಿದ್ದಳು.

"ನೀವಿಬ್ಬರೂ ಇಲ್ಲಿಂದ ಹೊರಟುಹೋಗಿ. ಇಲ್ಲದಿದ್ದರೆ, ನಾನು ಕೂಗಿಕೊಳ್ಳುತ್ತೇನೆ."

"ಕೂಗಿಕೋ! ಬೇಡವೆಂದವರಾರು? ಅದು ಯಾರಿಗೂ ಕೇಳೋಲ್ಲ. ಹೊರಗಡೆ ಗುಡುಗು, ಸಿಡಿಲು, ಮಳೆ, ಗಾಳಿ, ಅಲ್ಲದೆ ಅಲ್ಲದೇ, ನೀನೇ ತಾನೇ ಬಾಗಿಲು ಹಾಕಿ, ಅಗಳೆ ಬೇರೆ "

"ಥೂ—ನಾಯಿಗಳೇ, ಒಂಟಿ ಹೆಣ್ಣನ್ನು ಈ ರೀತಿ, ಸತಾಯಿಸಲು ನಿಮಗೆ ನಾಚಿಕೆಯಾಗುವುದಿಲ್ಲವೆ?

ನಿಮಗೆ, ನನ್ನಂಥ—ಅಕ್ಕ, ತಂಗಿ, ಯಾರೂ ಇಲ್ಲವೆ?"

ಹಾಸಿಗೆಯ ಮೇಲೆ ಮಲಗಿದ್ದ ಶಂಕರ, ಜೋರಾಗಿ ನಕ್ಕ.

"ಫೂಟ್‌ಪಾತ್ ಮೇಲೆ ಹುಟ್ಟಿ, ಅಲ್ಲಿಯೇ ಬೆಳೆದು, ದೊಡ್ಡವರಾದ ನಮಗೆ, ನಮ್ಮ ತಂದೆ–ತಾಯಿ ಯಾರು? ಅನ್ನೋದೇ ಗೊತ್ತಿಲ್ಲ, ಅಕ್ಕ, ತಂಗಿ ಅಂತೂ ದೂರವಾಯಿತು "

ಶಂಕರ ಎದ್ದು ನಿಂತ. ಶಾರದಳ ಕಡೆ ಹೆಜ್ಜೆ ಹಾಕಿದ. ಅಲ್ಲೇ ನಿಲ್ಲೀ.... ನಾನು ಕೂಗಿಕೊಳ್ತೇನೆ ..ಬಾಗಿಲು ತೆರೆದು ಹೊರಗೆ ಓಡ್ತೇನೆ .."

"ಕೂಗಿಕೋ, ಬೇಡವೆಂದವರಾರು?—ಓಡಿಹೋಗು ಬೇಡವೆಂದವರಾರು? ..ಆದರೆ, ಒಂದು ಮಾತು ಮಾತ್ರ ನೆನಪಿರಲಿ. ನಿನ್ನ ಮಗು ಸುಂದರನ ಕೈಯಲ್ಲಿದೆ. ಅದರ ಮಿದುವಾದ, ಎಳೆಯ ಗೋಣು ಅವನ ಉಕ್ಕಿನಂತಹ ಕೈಯಲ್ಲಿದೆ ನೀನು ಕೂಗಿಕೊಂಡೆ ಎಂದರೆ–'ಲಟಕ್'ಅಂತಅದರಗೋಣು...."

"ಅಯ್ಯೋ ...ಬೇಡ ಬೇಡ ...ಆ ರೀತಿ ಮಾಡಬೇಡ. ಕೈ ಮುಗಿದು ಕೇಳಿಕೊಳ್ಳುತ್ತೇನೆ."

'ಅಯ್ಯಯ್ಯೋ ! ಅಯ್ಯೋ ..ನನ್ನ ಮುದ್ದಿನ ಅರಗಿಣೀ ! ...ನೀನಷ್ಟು ಗೋಗರೆಯುವುದು ಬೇಡ ..ಕೈ ಮುಗಿಯುವುದೂ ಬೇಡ. ನಾವು ಹೇಳಿದಂತೆ ಕೇಳಿದರೆ ಸಾಕು ...ಮೊದಲು ನಾನು, ಅನಂತರ ಸುಂದರ, ..ಯಾರಿಗೂ ಗೊತ್ತಾಗೋದಿಲ್ಲ ದಿನ ನಿತ್ಯ ಒಂದು ಬಾರಿ ..ಆಮೇಲೆ ನೋಡು, ಹೊನ್ನಿನ ಹಾಸಿಗೆಯ ಮೇಲೆ ನಿನ್ನನ್ನು ಕೂಡಿಸುತ್ತೇನೆ ..ಅಂ ..ನೀನೇ ಬರ್ತಿಯಾ ? ಇಲ್ಲಾ ನಾನೇ ಬರಲಾ ? .'

"ಯಾವದೂ ಬೇಡ. ನೀವಿಲ್ಲಿಂದ ಹೊರಟುಹೋಗಿ ನನ್ನನ್ನು ನೆಮ್ಮದಿಯಾಗಿರಲು ಬಿಡಿ ನಾನೇನು ನಿಮಗೆ ಕೆಡಕು ಮಾಡಿದ್ದೇನೆ ? ನೀವೇಕೆ ನನ್ನನ್ನು ಸತಾಯಿಸ್ತಾಯಿದೀರಾ ?"

"ನನ್ನ ಮುದ್ದಿನ ಗಿಣೀ, ನಿನ್ನಿಂದ ನಮಗೆಷ್ಟು ಕೆಡಕು ಆಗಿವೆ ಗೊತ್ತಿದೆಯಾ? ನಿನ್ನಿಂದ, ನಮ್ಮ ನಿದ್ದೆ ಹಾರಿಹೋಗಿದೆ. ಊಟ, ನೀರು ಯಾವುದೂ ಬೇಡವಾಗಿದೆ ನೀನು ದೊರೆಯದಿದ್ದರೆ, ನಾವು ಸತ್ತೇಹೋಗುತ್ತೇವೆ. ನಿನ್ನ ರೂಪ, ಸೌಂದರ್ಯ, ನಮ್ಮೆದೆಯಲ್ಲಿ ಕಿಚ್ಚುಹೊದಿಸಿ,— ಈಗ 'ನಾನೇನು' ಕೆಡಕು ಮಾಡಿದ್ದೇನೆ—ಎಂದು ಕೇಳುತ್ತೀಯಾ ? ಇನ್ನು ನಮ್ಮಿಂದ ತಡೆಯಬಾಗದು ರಾಣೀ, ...ಇದೋ—ನಾನು ಬಂದೆ ..ಒಂದು ವೇಳೆ ನೀನು ಕೂಗಿಕೊಂಡರೆ—ನೆನಪಿರಲಿ—ನಿನ್ನ ಮಗುವಿನ ಗೋಣು ..."

"ಅಯ್ಯೋ ! ಪರಮಾತ್ಮಾ .." ಶಾರದಾ ಚೀರಿಕೊಂಡಳು.

ಶಂಕರ, ಒಂದೊಂದೇ ಹೆಜ್ಜೆ ಇಡುತ್ತಾ, ಅವಳೆದುರು ಬಂದು ನಿಂತ. ಒಂದು ಬಾರಿ ಅವಳನ್ನು ಕಣ್ತುಂಬ ನೋಡಿ, ಅವಳ ಮೇಲೆ ಎರಗಿದ. ಸುಂದರ ಒಣಗಿದ ತುಟಿಗಳ ಮೇಲೆ ನಾಲಿಗೆಯಾಡಿಸಿದ.

ಶಾರದಾ ಧರ್ಮಸಂಕಟದಲ್ಲಿ ಸಿಲುಕಿಕೊಂಡಳು. ಕೂಗಿಕೊಂಡರೆ, ಮಗುವಿನ ಪ್ರಾಣಕ್ಕೆ 'ಅಪಾಯ' ಸುಮ್ಮನಿದ್ದರೆ ?—ಶೀಲಕ್ಕೆ ಅಪಾಯ ! ... ಏನು ಮಾಡುವದು ? . .ಮೌನವಾಗಿಯೇ ಅವನನ್ನು ಎದುರಿಸಲು ಸಿದ್ಧಳಾದಳು.

ಮುದ್ದಿಸಲು ಮುಂದೆ ಬಾಗಿದ ಮುಖ್ಯ ಕಣ್ಣಿಗೆ ಬಿದ್ದದ್ದು, ಅವನ ಚೂಪಾದ ಮೂಗು 'ಕಚಕ್' ಎಂದು ಮೂಗನ್ನು ಕಡಿದಳು ಚಿಲ್ ಎಂದು ರಕ್ತ ಸಿಡಿದು, ಅವನ ಬಾಯಿ ತೋಯಿಸಿ, ಕೆಳಗೆ ಹರಿಯಿತು ಅವಳ ಬಾಯಿ ಸಹ ರಕ್ತದ ಮಡುವಾಯಿತು. ಎರಡೂ ಕೈಗೆ ಸಿಕ್ಕಿದ್ದ, ಅವನ ಎರಡೂ

ಕಿವಿಗಳು ಜೋರಾಗಿ ಬಲಹಾಕಿ, ಕೈಯಿಂದ, ಈಚೆಗೆ ಎಳೆದಳು. ಶಂಕರ 'ಹೋ' ಎಂದು ಅರಚಿದ. ಹರಿದ ಎರಡು ಕಿವಿಗಳ ತುಂಡು, ಅವಳ ಕೈಯಲ್ಲಿ ಬಂದವು. ಬಲಗಾಲು ಎತ್ತಿ, ಮೊಣಕಾಲಿನಿಂದ ಆವನ ಮರ್ಮಾಂಗದ ಮೇಲೆ ಪ್ರಹಾರ ಮಾಡಿದಳು ಅಲ್ಲಿಗೆ ಮುಗಿಯಿತು. ಶಂಕರನ ಅವತಾರ!

ಶಾರದಾ, ಈಗ—ಚಂಡಿ, ಚಾಮುಂಡಿಯಾಗಿದ್ದಳು. ಜ್ವರದಿಂದ ಬಳಲುತ್ತಿರುವ ಮಗುವಿನ ಪ್ರಾಣವನ್ನು ಅಡವಾಗಿಟ್ಟುಕೊಂಡು, ತನ್ನ ಸ್ತ್ರೀತ್ವದ ಬೆಲೆ ಕೇಳುವ ಈ ಕಾಮ ಪಶುಗಳ ಪಾಲಿಗೆ, ಆಕೆ—ಮಹಿಷಾಸುರ ಮರ್ದಿನಿಯಾದಳು. ಅವಳ ಗುಂಡಿಗೆಗೆ ಅದೆಂತಹ ಶಕ್ತಿ ಬಂತೋ ಅರಿಯದು! ಹೆಣ್ಣು ಸಿಂಹದಂತೆ ಕೆರಳಿ—ಆಕೆ ಶಂಕರನನ್ನು ಧಾರಾಶಾಹಿ ಮಾಡಿ, ಸುಂದರನತ್ತ ಬಿರು ನೋಟ ಬೀರಿದಳು.

ಅವಳ ಬಿರುನೋಟಕ್ಕೆ ಸುಂದರ ನಡುಗಿ ಹೋದ ಶಿವನ ಮೂರನೇ ಕಣ್ಣಿಗೆ ಮನ್ಮಥ ಸುಟ್ಟು ಬೂದಿಯಾಗುವಂತೆ, ಶಾರದೆಯ ಆ ನೋಟಕ್ಕೆ ಆತ, 'ಭಸ್ಮವಾಗಿಹೋದೇನು' ಎಂದು ಹೆದರಿದನೋ ಎಂಬಂತೆ, ಗಡಗಡ ತರಗಲೆಯಂತೆ, ನಲುಗಿದ ಕಂಪಿಸಿದ. ಶಂಕರನಿಗಾದ ಗತಿ ತನಗೂ ತಪ್ಪಿದ್ದಲ್ಲ ಎಂಬ ಕಲ್ಪನೆ, ಆವನಿಗೆ ಬಂದಾಗ ಅಲ್ಲಿಂದ ಜೀವಸಹಿತ ಪಲಾಯನ ಮಾಡಿದರೆ ಸಾಕೆಂಬ ನಿರ್ಣಯಕ್ಕೆ ಬಂದ

ಆರ್ಭಟಿಸುತ್ತಾ, ಕಣ್ಣುಗಳಿಂದ ಕಿಡಿ ಕಾರುತ್ತಾ ರಕ್ತಸಿಕ್ತವಾದ, ತನ್ನೆರಡು ಕೈಗಳನ್ನೂ ಮುಂದೆ ಚಾಚಿದ ಅವಳ ಕರಾಳ ರೂಪ?! ಹಿಂದೆ, ರಾಕ್ಷಸರ ರಕ್ತ ಹೀರಿದ ದುರ್ಗೆಯ ನೆನಪು ತಂದಿತು ಶಂಕರನಿಗೆ! . .ಅವಳ ಬಾಯಿಂದಲೂ ಸಹ ಇನ್ನೂ ರಕ್ತ ಒಸರುತ್ತಲೇ ಇತ್ತು.

ಸುಂದರನೆಡೆ ನೋಡುತ್ತಾ ಆಕೆ, ಮಾದರಕ ದನಿಯಲ್ಲಿ "ಬಾ ಪ್ರಿಯಾ, ಬಾ .ನಿನಗೆ ನನ್ನ ದೇಹದ ಬಿಸಿ ಬೇಕಲ್ಲವೇ .ನಿನಗೆ ನಾನು ಸುಖ ನೀಡಬೇಕಲ್ಲವೇ ? ಬಾ ರಾಜಾ, ಬಾ ..ನಿನಗೇನು ಬೇಕೋ ಅದನ್ನೆಲ್ಲಾ ನಾ ಕೊಡುವೆ .ಬಾ .ನನ್ನನ್ನು ಚಿನ್ನದ ಮಂಚದ ಮೇಲಿಟ್ಟು ತೂಗುವೆ ತಾನೇ! . ಹೊನ್ನ ರಾಶಿಯ ಮೇಲೆ, ಮಲಗಿಸುವಿ ತಾನೇ ? ..ಮುತ್ತು ರತ್ನ ಎಲ್ಲಾ ನನ್ನ ಪಾದದ ಕೆಳಗೆ ಹಾಕಿ, ನನ್ನನ್ನು ರಾಣಿಯ ತರಹ ನೋಡುವೆ ತಾನೇ ?! .ಹಾಗಾದರೆ ಬಾ....ನನ್ನನ್ನು ಅಪ್ಪಿಕೋ ..ನನ್ನನ್ನು ಚುಂಬಿಸು.... ನನ್ನಿಂದ ಸುಖ ಪಡೆ. .ಬಾ . ಬಾ ,ರಾಜಾ ...!"

ಕ್ಷಣಕ್ಕೊಂದು ರೀತಿಯಿಂದ ಬದಲಾಗುತ್ತಿರುವ ಅವಳ ರೂಪಕ್ಕೆ, ಶಂಕರನ ಗಂಟಲು ಒಣಗಿಹೋಯಿತು ಸಾವು, ಸಾವಿರ ಕೈಗಳಿಂದ ತನ್ನನ್ನು ಬಾಚಿ

ತಪ್ಪಿಸಿಕೊಳ್ಳಲು ಬರುತ್ತಿರುವಂತೆ, ಚಿಟ್ಟನೆ ಚೀರಿಕೊಂಡ .."ಬೇಡ ... ನೀನು, ಮುಂದೆ ಬರಬೇಡ .ಅಲ್ಲಿಯೇ ನಿಲ್ಲು "

"ಏಕೆ ? ನಿನಗೆ ನನ್ನ ದೇಹದ ಸವಿ ಬೇಡವೇ ? ನಾನು ನಿನಗೆ ಬೇಡವೇ ? ನನ್ನ ರೂಪ ಸೌಂದರ್ಯದಿಂದ, ನೀನು ಹುಚ್ಚನಂತಾಗಿದ್ದೀಯಲ್ಲಾ ... ನೀರು ಸೇರದಾಗಿದೆ ಎಂದಿದ್ದೆಯಲ್ಲಾ ! .ಈಗ ನಾನು ನಿನಗೆ ಬೇಡವೇ ?"

ಬೇಡ ಬೇಡ ಜಗದಂಬೆ ಆಣೆಯಾಗಿಯೂ, ನನಗೇನೂ ಬೇಡ ನನ್ನನ್ನು ಬಿಟ್ಟುಬಿಡು. ಜೀವಿಸಿರುವವರೆಗೂ ನಾನು ನಿನ್ನ ಕಡೆ ಕಣ್ಣೆತ್ತಿ ಸಹ ನೋಡ ಲಾರೆ.

"ಚು ಚು ಚು .ಅದೆಂತು ಸಾಧ್ಯ ? ..ನನ್ನನ್ನು ಮುಟ್ಟದೆ ನೀನು ಹೇಗೆ ಹೋಗುವಿ ? .ರಾಜಾ, ನಿನಗೆ ಈಗ ನಾನು ಬೇಡವಾಗಿರಬಹುದು ಆದರೆ, ಆದರೇ ನನಗೆ ನೀನು ಬೇಕು. ನೀನು ಬೇಕು."

"ಬೇಡ ; ಬಿಟ್ಟುಬಿಡು ಕೈಮುಗಿಯುತ್ತೇನೆ. ಬೇಕೆಂದರೆ ಕಾಲು ಮುಗಿಯುತ್ತೇನೆ "

"ಒಂದುಕ್ಷಣದ ಹಿಂದೆ ನಾನು ಸಹ ಇದೇರೀತಿ ಹೇಳಿದ್ದೆ. ನನ್ನ ಮಗುವನ್ನು ಕೊಡಿ . ನನ್ನನ್ನು ಬಿಡಿ ನಾನು ನಿಮ್ಮ ಅಕ್ಕ ತಂಗಿಯರ ಸಮಾನ ಎಂದು ಕೇಳಿಕೊಂಡೆ. ಬೇಡಿಕೊಂಡೆ ನೀವು ಕೇಳಿದಿರಾ ?"

"ಇಲ್ಲ."

"ಹಾಗಾದರೆ ನಾನೇಕೆ ಕೇಳಲಿ ? ನಾನಿನ್ನ ಬಿಡಲಾರೆ ರಾಜಾ ! ಬಾ ನನ್ನನ್ನು ಚುಂಬಿಸು."

ಸುಂದರ ಆಚೆ-ಈಚೆ ನೋಡಿದ. ಓಡಿ ಪಾರಾಗಲು, ಅಲ್ಲಿ ಯಾವ ದಾರಿಯೂ ಕಾಣಲಿಲ್ಲ ಇರುವುದೊಂದೇ ದಾರಿ ಆ ದಾರಿಗೆ ಅಡ್ಡವಾಗಿ ನಿಂತಿದ್ದಾಳೆ ಶಾರದಾ ! ಪಾರಾಗುವದೆಂತು ? ಆತ, ಸೋತು ನೆಲಕ್ಕೆ ಮೊಣಕಾಲು ಮಂಡಿಯೂರಿ ಕುಳಿತು, ಕೈಮುಗಿದು, ದೀನನಾಗಿ ಬೇಡಿಕೊಳ್ಳಲಾರಂಭಿಸಿದ

"ನನ್ನಿಂದ ತಪ್ಪಾಯಿತು. ನಾವು ಹೀಗೆ ಮಾತಾಡಬಾರದಾಗಿತ್ತು.... ದಯವಿಟ್ಟು ನನ್ನನ್ನು ಕ್ಷಮಿಸು."

ಶಾರದೆ, ಒಂದೊಂದೇ ಹೆಜ್ಜೆ ಇಡುತ್ತಾ, ಆತ ಕುಳಿತಲ್ಲಿ ಬಂದು, ಅವನೆದುರು ನಿಂತಳು. ಆತ ಗಟ್ಟಿಯಾಗಿ ಅವಳ ಕಾಲು ಹಿಡಿದುಕೊಂಡ . ಅವಳ ಕಣ್ಣುಗಳಿಂದ ಬೆಂಕಿಯ ಕಿಡಿಗಳು ಹಾರಿದವು.

"ಥೂ ಪಾಪಿ ! ಸಾವಿಗೆ ಹೆದರಿ ಈಗ ನನ್ನ ಕಾಲು ಹಿಡಿದುಕೊಳ್ಳುತ್ತಾ

ಇದ್ದೀಯಾ ?. ..ನೀನು ಗಂಡಲ್ಲ ಷಂಡ !.. .ನಿಮ್ಮಂಥವರಿಗಿಂತ, ನಾಸೇ ವಾಸಿ" ...ಝಾಡಿಸಿ ಒಂದು ಬಾರಿ ಎದೆಗೆ ಒದ್ದಳು. "ಧಡಾರ್" ಎಂದು ಆತ ಹಿಂದಿಕ್ಕುರುಳಿದ ಜಿಗಿದು ಅವನೆದೆಯ ಮೇಲೆ ಕುಳಿತು ಶಾರದಾ ಆರ್ಭಟಿಸಿದಳು .

"ನನ್ನ ರೂಪವನ್ನು, ನಿನ್ನ ಕೆಟ್ಟ ಕಣ್ಣುಗಳು ನೋಡಿದವು? ಈ ಕಣ್ಣುಗಳು ನನ್ನಂಥ ಯಾವದೇ ರೂಪವತಿಯನ್ನೂ, ಮಾನವತಿಯನ್ನೂ ನೋಡಕೂಡದು—ತಿಳಿಯಿತೇ ?"

"ಹಾಂ .ಹಾಂ ..ತಿಳಿಯಿತು."

"ಹಾಗಾದರೆ ಕೋಡು ಅವನ್ನು."

"ಏನನ್ನು ?"

"ಅವೇ—ನಿನ್ನ ದುಷ್ಟ ಕಣ್ಣುಗಳನ್ನು !"

"ಬೇಡ—ಬೇಡ !"

"ನಿನ್ನ ದುಷ್ಟ ಕಣ್ಣುಗಳು—ನನಗೆ ಬೇಕು—ಕೊಡು—"

"ಬೇಡಾ !—ನಾನು ಕುರುಡನಾಗಿ ಬಾಳಲಾರೆ."

'ನನಗೆ ನಿನ್ನ ಕಣ್ಣುಗಳು ಬೇಕು—ಕೊಡು.'

ಶಾರದಾ ಹುಚ್ಚಿಯಂತಾಗಿದ್ದಳು. ಅರಚುತ್ತಾ, ಅಟ್ಟಹಾಸ ಮಾಡಿ ನಗುತ್ತಾ, ತನ್ನ ನೀಳವಾದ, ಚೂಪಾದ ಬೆರಳುಗಳನ್ನು—ಅವನೆರಡೂ ಕಣ್ಣುಗಳಲ್ಲಿ ತೂರಿದಳು—ಭೂಮಿ ನಡಗುವಂತೆ ! ಆತ, ವಿಕಾರ ಕಂಠದಿಂದ ಕೂಗಿಕೊಂಡ.

ಹೊರಗಡೆ ಬಾಗಿಲು ಬಡಿಯುವ ಸದ್ದು ಶಾರದೆಗೆ ಯಾವುದೂ ಕೇಳಿಸ ಲಿಲ್ಲ. ಸುಂದರನ ಕೈಯಿಂದ ಜಾರಿ ಕೆಳಗೆ ಬಿದ್ದು ಅಳುತ್ತಿರುವ ಮಗುವಿನ ಆಕ್ರಂದನ ಸಹ ಅವಳಿಗೆ ಕೇಳಿಸಲಿಲ್ಲ. ಅವನ ಕಣ್ಣುಗಳ ಮೇಲೆ ಪ್ರಹಾರ ಮಾಡುತ್ತಲೇ ಇದ್ದಳು. ಅವನ ಕಣ್ಣುಗುಡ್ಡೆಗಳು ಕಿತ್ತು ಹೊರಗೆ ಬಂದರೂ, ಆಕೆ ಶಾಂತಳಾಗಲಿಲ್ಲ. ಸುಂದರ, ಒಂದೇ ರೀತಿ ಅರಚುತ್ತಲೇ ಇದ್ದ.

'ಧಡಾರ್' ಎಂಬ ಸಪ್ಪಳದೊಂದಿಗೆ ಬಾಗಿಲು ಮುರಿದು ಬಿತ್ತು—ವೈದ್ಯರು, ಅವರೊಂದಿಗೆ ಎಡ ಬಲದ ಹತ್ತಾರು ಜನರು ಒಳಗೆ ನುಗ್ಗಿದರು. ಶಾರದಾ ವೈದ್ಯರ ವಶವಾದಳು.

ಶಾರದೆಗೆ ಮತಿಭ್ರಮೆಯುಂಟಾಗಿತ್ತು. ಕೂಡಲೇ ಆಸ್ಪತ್ರೆಗೆ ಸೇರಿಸ ಲಾಯಿತು. ಗೋಪಾಲರಾಯರಿಗೆ ಕರೆ ಹೋಯಿತು. ಅವರು ಧಾವಿಸಿ ಬಂದರು ತಂಗಿಯ ಪರಿಸ್ಥಿತಿ ಕಂಡು, ಮಮ್ಮಲ ಮರುಗಿದರು. ಎಳೆಕಂದ

ಹೇಮಂತನನ್ನು ತಮ್ಮೊಡನೆ ಕರೆದುಕೊಂಡು ಹೋದರು. ಹೇಮಂತನ ಲಾಲನೆ-ಪಾಲನೆಯೆಲ್ಲಾ, ಗೋಪಾಲರಾಯರ ಮೇಲೆ ಬಿದ್ದಿತು ರಾಧಾ ಬಾಯಿ ತನ್ನ ಮಗುವಿನ ಜೊತೆ, ಇದೂ ಒಂದೆಂದು ತಿಳಿದು, ಮಮತೆ ಯಿಂದ ಜೋಪಾನ ಮಾಡಿದರು. ಎರಡು ವರುಷಗಳ ನಂತರ ಅವರಿಗೆ ಸುಷಮಾ ಹುಟ್ಟಿದ್ದು. ರಾಮು, ಹೇಮಂತುವಿಗಿಂತ ಎರಡು ವರ್ಷ ದೊಡ್ಡವ ನಾದರೆ, ಸುಷಮಾ ಎರಡು ವರ್ಷಕ್ಕೆ ಚಿಕ್ಕವಳು.

ಸಮಯ ಕಳೆಯತೊಡಗಿತು ಗೋಪಾಲರಾಯರಿಗೆ ಸಂಸಾರದ ಭಾರ— ಅದರೊಂದಿಗೆ ತಂಗಿಯ ವೈದ್ಯಕೀಯ ಖರ್ಚು ಏನೇನೋ ಮಾಡಿದರು. ಹತ್ತೆಂಟು ಕಡೆ ಸುತ್ತಿದರು. ಸಂಸಾರದ ರಥ ಎಳೆದರು—

ಬಾಲ್ಯದಿಂದಲೇ, ಹೇಮಂತ ಹಾಗೂ ಸುಷಮಾ ಕೂಡಿ ಓಡಾಡಿದರು. ಕಲೆತರು, ತಿರುಗಿದರು. ಅವಳನ್ನು ತನ್ನ ಹೆಗಲ ಮೇಲೆ ಕೂಡಿಸಿಕೊಂಡು ಹೇಮಂತ ಊರೆಲ್ಲ ಸುತ್ತುತ್ತಿದ್ದ. ಸೀಬೆ ಮರ ಹತ್ತಿ, ಸೀಬೆ ಹಣ್ಣು ಕಿತ್ತು ಕೊಡುತ್ತಿದ್ದ. ಆಕೆ, ಲಂಗದಲ್ಲಿ ಸೀಬೆ ಹಣ್ಣು ಸುತ್ತಿಕಟ್ಟಿ, ಎರಡು ಹೋಳು ಮಾಡುತ್ತಿದ್ದಳು. ಇಬ್ಬರೂ ತಿನ್ನುತ್ತಿದ್ದರು. ತಿನ್ನುವ ವಸ್ತು ಯಾವುದೇ ಆಗಲೀ, ಒಬ್ಬರೊಬ್ಬರನ್ನು ಬಿಟ್ಟು ತಿನ್ನುತ್ತಿರಲಿಲ್ಲ. ಅವರ ಪ್ರೀತಿ ಕಂಡು, ಹಿರಿಯರೆಲ್ಲ ಮುಗ್ಧರಾಗುತ್ತಿದ್ದರು.

ರಾಮು ಸ್ವಲ್ಪ ಗಂಭೀರ ಸ್ವಭಾವದವ. ಅದರಲ್ಲೂ ಮನೆಗೆ ಹಿರಿಯ. ಸಂಸಾರದ ಭಾರ ಅವನಿಗೆ ಗೊತ್ತು. ಅವಕ್ಕೆ ಓದು ನಿಲ್ಲಿಸಿ, ಫ್ಯಾಕ್ಟರೀ ಸೇರಿದ ಹೇಮಂತನನ್ನು ಓದಿಸತೊಡಗಿದ ಸುಷಮಾ ಹೈಸ್ಕೂಲು ಪಾಸಾಗಿ ಶಾಲೆ ಬಿಟ್ಟಳು.

ಈಗ, ಸುಷಮಾ ಮೊದಲಿನ ಹಸುಗೂಸಲ್ಲ, ಅವಳು ರೂಪವಂತೆ, ಪ್ರಬುದ್ಧೆ. ಹೇಮಂತನನ್ನು ಮನೋಮಂದಿರದಲ್ಲಿ 'ತನ್ನ ಪತಿ' ಎಂದು ಪ್ರತಿಷ್ಠಾಪಿಸಿ, ಪೂಜಿಸತೊಡಗಿದಳು.

ಗೋಪಾಲರಾಯರು, ನಿವೃತ್ತರಾಗಿದ್ದರು. ಬರುವ ಪಿಂಚಣಿ ಹಾಗೂ ರಾಮನ ಚಿಕ್ಕ ಸಂಬಳದಲ್ಲಿ ರಾಧಾಬಾಯಿ ಬಹಳ ಕಷ್ಟದಿಂದ ದಿನ ನೂಕು ತ್ತಿದ್ದಳು.

ಅಂದು ಅವರೆಲ್ಲರಿಗೆ ಸುದಿನ. ಅಷ್ಟು ದಿನದ ದುಃಖದ ಕಾರ್ಮೋಡಗಳು ಅಂದು ಚದುರಿದವು. ಒಮ್ಮೆಲೇ, ಒಮ್ಮೆಲೇ, ಮೂರು ಆನಂದದ ವಾರ್ತೆ ಗಳು ಗೋಪಾಲರಾಯರ ಕಿವಿಗೆ ಬಿದ್ದವು. ಅದನ್ನು ಕೇಳಿ ರಾಧಾಬಾಯಿ, ಓಡಿಹೋಗಿ ದೇವರ ಮುಂದೆ ದೀಪ ಬೆಳಗಿ—"ಪರಮಾತ್ಮಾ, ನೀನು

ನಮ್ಮನ್ನು ಕಾಪಾಡಿದೆ. ನಂಬಿದವರನ್ನು ಕೈಬಿಡುವುದಿಲ್ಲ—ಎಂದು, ನಿನ್ನ ಭಕ್ತರಿಗೆ ನೀಡಿದ ವಚನ, ನೀನುಪರಿಪಾಲಿಸಿದೆ. ನಮ್ಮ ಮೇಲೆ ನಿನ್ನ ಕೃಪಾದೃಷ್ಟಿ ಇದೇ ರೀತಿ ಇರಲಿ'—ದೇವರಿಗೆ ಸಕ್ಕರೆ ನೈವೇದ್ಯ ಮಾಡಿ ತಂದು—ಎಲ್ಲರ ಬಾಯಿಗೂ ಹಾಕಿ, ಸಿಹಿಮಾಡಿದಳು.

ರಾಮು ಯಾವ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದನೋ, ಅದೇ ಫ್ಯಾಕ್ಟರಿಯ ಮಾಲಿಕರು, ಅವನ ಕಾರ್ಯದಕ್ಷತೆ ಕಂಡು, ಅವನನ್ನು ತಮ್ಮ ಅಳಿಯನನ್ನಾಗಿ ಮಾಡಿಕೊಳ್ಳಲು ನಿರ್ಧರಿಸಿದರು. ಹೇಮಂತ ರ್‍ಯಾಂಕ್ ಪಡೆದು, ಪದವಿ ಪರೀಕ್ಷೆ ಪಾಸಾಗಿದ್ದ. ಶಾರದೆಗೆ ದೀರ್ಘಕಾಲದ ನಂತರ ಗುಣ ವಾಗಿತ್ತು. ಅವಳನ್ನು ಮನೆಗೆ ಕರೆದೊಯ್ಯಲು ವೈದ್ಯರು ಪತ್ರ ಬರೆದಿದ್ದರು.

ಮರುದಿನ ಮುಂಜಾನೆ ಗೋಪಾಲರಾಯರು, ಶಾರದಾಳನ್ನು ಕರೆತರಲು ಹೊರಟುನಿಂತರು ಹೇಮಂತ ಅವರ ಜೊತೆ, ತಾನೂ ಹೊರಟ ಅಣ್ಣನನ್ನು ನೋಡಿ, ಶಾರದಾ ಓಡಿಬಂದು, ಅಪ್ಪಿಕೊಂಡು ಅಳಲಾರಂಭಿಸಿದಳು. ಹೇಮಂತ ದೂರ ನಿಂತು, ತಾಯಿಯನ್ನೇ ನೋಡುತ್ತಿದ್ದ ಅಕಸ್ಮಾತ್ ಆಗಿ ಶಾರದಾಳ ದೃಷ್ಟಿ ಸಹಿತ ಅವನ ಮೇಲೆ ಬಿದ್ದು, ಮಮತೆಯ ಕಡಲು ಉಕ್ಕಿ ಬಂದಿತು. ಹೃದಯದಲ್ಲಿ ಆನಂದದ ತೆರೆಗಳೆದ್ದವು. ಅಣ್ಣನ ಅಪ್ಪುಗೆ ಯಿಂದ ಬಿಡಿಸಿಕೊಂಡು, ಕೇಳಿದಳು.

"ಅಣ್ಣಾ ! .ಅಣ್ಣಾ ! ...ಅವನು ಯಾರು ?"

"ಯಾಕಮ್ಮಾ ?—ಅವನು ನಮ್ಮ ಹೇಮಂತ ಅಲ್ವಾ ?!—"

"ಹೇಮಂತ—ತನ್ನ ಮಗು—ತನ್ನ ರಕ್ತಮಾಂಸವನ್ನು ಹಂಚಿಕೊಂಡು ಹುಟ್ಟಿದ ಕರುಳಿನ ಕುಡಿ ತನ್ನ ಪತಿಯ ಕೊನೆಯ ಗುರುತು—ಹೇಮಂತ ! ಅದೆಷ್ಟು ಬೆಳೆದು ಬಿಟ್ಟಿದ್ದಾನೆ ಆಕಾಶದೆತ್ತರಕ್ಕೆ !... ರೂಪವೆಂತಹುದು ?! ಮನ್ಮಥನಂತಹುದು ! ತಾನು ಅವನನ್ನು ಕೊನೆಯದಾಗಿ ನೋಡಿದ್ದು ಅಂದೇ ! ಅಂದೇ ..ಅದೇ ಕರಾಳ ರಾತ್ರಿಯ ದಿನದಂದು ! ಅಂದಿನಿಂದ ಇಂದಿನವರೆಗೆ, ಇಪ್ಪತ್ತು ಇಪ್ಪತ್ತೆರಡು ವರ್ಷಗಳು ಗತಿಸಿದವು. ಅಬ್ಬಾ ! . ತನ್ನ ಕಂದನನ್ನು ಕಾಣದೆ, ಇಷ್ಟು ದಿನಗಳು ಕಳೆದವೇ ? ಅಷ್ಟು ದಿನಗಳ ನಂತರ ತಾನು, ಮಗುವನ್ನು ನೋಡುತ್ತಿದ್ದೇನೆಯೇ ?! "

ಹೇಮಂತ ತನ್ನ ತಾಯಿಯೆಡೆ ನೋಡಿದ. ತಲೆಯಲ್ಲಿಯ ಕೂದಲುಗಳು ಅರ್ಧಕ್ಕರ್ಧ ಬಿಳುಪಾಗಿವೆ. ಆಳವಾಗಿ ಗುಳಿಬಿದ್ದ ಕಣ್ಣುಗಳು !.. . ಆದರೂ ಆ ಕಣ್ಣುಗಳಲ್ಲಿ ಅದೆಂತಹ ಕಾಂತಿ !.... ಅದೆಂತಹ ಮಮತೆ ಉಕ್ಕಿಹರಿಯು ತ್ತಿದೆ ..

ಹೇಮಂತ ಶಾರದಾಳೆಡೆ ನೋಡಿದ

ಶಾರದಾ ಹೇಮಂತನನ್ನು ನೋಡಿದಳು.

ಒಣಗಿ ಕಟ್ಟಿಗೆಯಂತಾದ ತನ್ನೆರಡೂ ಕೈಗಳನ್ನು ಅವನತ್ತ ಚಾಚಿ, ಃಕರಣದಿಂದ ಕರೆದಳು :

"ಮಗೂ ಹೇಮಂತಾ ... ! ಬಾರಪ್ಪ !"

ಕರುಳಿನ ಕರೆ, ಹೇಮಂತನ ಹೃದಯದ ಬಾಗಿಲು ತಟ್ಟಿತು "ತಾಯಿ" ಎಂಬ ಶಬ್ದ—ಓದಿ, ಬರೆದು ತಿಳಿದಿದ್ದ ಹೇಮಂತನಿಗೆ, ಜೀವಂತವಾಗಿ ತನ್ನೆದುರು ನಿಂತು, ತನ್ನನ್ನು ಕರೆಯುತ್ತಿರುವುದನ್ನು ಕಂಡು ಎದೆ ತುಂಬಿ ಬಂದಿತು.

"ಅಮ್ಮಾ ..! ಅಮ್ಮಾ !" ಎಂದು ಧಾವಿಸಿದ.

"ಮಗು—ಕಂದಾ!"

ಹಸು, ತನ್ನ ಕರುವಿನತ್ತ ಧಾವಿಸುವಂತೆ, ಶಾರದಮ್ಮ ಮಗನತ್ತ ಧಾವಿಸಿದಳು. ಅವನನ್ನು ಬಿಗಿದಪ್ಪಿ, ದೇಹದ ತುಂಬೆಲ್ಲ ಮುದ್ದಿನ ಮಳೆ ಕರೆದಳು. ಅದೆಂತಹ ಶಕ್ತಿ ಆ ನಿರ್ಜೀವ ನಿಲುವಿನ ಹಂದರದಲ್ಲಿದ್ದು ದೇಹಕ್ಕೆ ಬಂದಿತೋ ಆ ಪರಮಾತ್ಮನಿಗೇ ಗೊತ್ತು !

ತಾಯಿ, ಮಗುವಿನ ಮಿಲನ ಕಂಡು, ಗೋಪಾಲರಾಯರು ಧೋತರದ ಅಂಚಿನಿಂದ, ತನ್ನ ಕಣ್ಣುಗಳನ್ನೊರಸಿಕೊಂಡರು. ನಂತರ, ತಂಗಿ ಹೇಮಂತನೊಂದಿಗೆ ತಮ್ಮ ಮನೆಯತ್ತ ನಡೆದಾಗ ಅವರೆಂದುಕೊಂಡರು "ತನ್ನಂಥ ಸುಖಿ ಯಾರೂ ಇಲ್ಲ" ಎಂದು. ರಾಧಾಬಾಯಿ, ತುಂಬು ಹೃದಯದಿಂದ ಶಾರದನನ್ನು ಸ್ವಾಗತಿಸಿ, ಅಪ್ಪಿಕೊಂಡಳು. ದುಃಖದ ಭಾರ ಕಡಿಮೆಯಾದ ನಂತರ ಹೇಮಂತನನ್ನು ಹತ್ತಿರ ಕರೆದು ಅವನ ಕೈ, ಶಾರದಾಳ ಕೈಯ್ಯಲ್ಲಿಡುತ್ತಾ ಹೇಳಿದರು :

"ನಿನ್ನ ಸೊತ್ತನ್ನು ನಿನಗೆ ಒಪ್ಪಿಸುತ್ತಿರುವೆ ಬಡತನದಲ್ಲಿ ಸಾಕಿ—ಬೆಳೆಸಿದ್ದಕ್ಕೆ ದಯುವಿಟ್ಟು ನನ್ನನ್ನು ಕ್ಷಮಿಸು."

"ಇಲ್ಲ—ರಾಧಾ—ಇದು ನನ್ನ ಸೊತ್ತಲ್ಲ ನಿನ್ನ ಸೊತ್ತು.! ನಾನು ಹೆತ್ತದ್ದಷ್ಟೆ ನಿಜ. ಆದರೆ, ಅವನನ್ನೂ ಇಷ್ಟು ದೊಡ್ಡವನನ್ನಾಗಿ ಮಾಡಿದವಳು—ನೀನು ! .ಅವನು ಋಣದಲ್ಲಿ ಬೆಳೆದವನು. ನ್ನನಗಿಂತ ಹೆಚ್ಚು ಅಧಿಕಾರ ಅವನ ಮೇಲೆ ನಿನ್ನದಿದೆ."

ಮತ್ತೊಮ್ಮೆ ರಾಧಾ ಹಾಗೂ ಶಾರದಾ ಒಬ್ಬರನ್ನೊಬ್ಬರು ಅಪ್ಪಿಕೊಂಡರು.

ಮುಂದೆ, ಎರಡೇ ತಿಂಗಳಿಗೆ ರಾಮನ ಮದುವೆಯಾಯಿತು ಅವನ ಮಾವನ ಸಹಾಯದಿಂದ, ಹೇಮಂತನಿಗೆ ಪೋಲೀಸ್ ಇಲಾಖೆಯಲ್ಲಿ ನೌಕರಿ ಸಿಕ್ಕಿತು

ಇಂದು ಹೇಮಂತ—ಪೋಲೀಸ್ ಇನ್‌ಸ್ಪೆಕ್ಟರ್!

."ಇಷ್ಟು ನಡೆದ ಕಥೆ—ಶಾರದಾ! ಅಂದಹಾಗೆ ಇಷ್ಟು ವರ್ಷಗಳ ನಂತರ ಇಂದೇಕೆ ನೀನು ಇದನ್ನೆಲ್ಲ ಕೇಳಬಯಸಿದೆ? ."

ಗೋಪಾಲರಾಯರು, ಹೇಳಿದ್ದು—ಶಾರದಾಳ ಕಣ್ಣೆದುರು ಚಿತ್ರದಂತೆ ಬಂದು ಹೋಗಿತ್ತು ಒಂದು ಬಗೆಯ ಅವರ್ಣನೀಯ ಆನಂದದ ಕ್ಷಣಗಳನ್ನು ಅವಳು ಅನುಭವಿಸಿದ್ದಳು. ಅಣ್ಣನ ಮಾತಿಗೆ ಅವಳು ನಿಜ ಸ್ಥಿತಿಗೆ ಬಂದು —ಉತ್ತರಿಸಿದಳು

"ಏನಿಲ್ಲಣ್ಣಾ, ನಾನು—ಆಸ್ಪತ್ರೆಗೆ ಸೇರಿದ ಮೇಲೆ ಏನಾಯ್ತು ಅನ್ನೋದು ಗೊತ್ತಿರಲಿಲ್ಲ. ಅದಕ್ಕೆ ಕೇಳಿದೆ"

"ಅತ್ತೆ .ಅತ್ತೆ ...ಫೋನು ಬಂದಿದೆ." ...ಹರಿಣಿಯಂತೆ ಹಾರುತ್ತ ಬಂದ ಸುಷಮಾ ಹೇಳಿದಳು

"ಯಾರದಮ್ಮಾ ಫೋನು?" ...ತಂದೆ ಕೇಳಿದಾಗ ನಸುನಾಚಿ, ಆಕೆ ಮುಖ "ಕೆಳಗೆಹಾಕಿದಳು. ಕೆನ್ನೆಗಳಲ್ಲಿ ಕೆಂದಗುಲಾಬಿ ಅರಳಿದವು. ಶಾರದ ನಗುತ್ತಾ— ಓಹೋ ..ನಿನ್ನ ಗಂಡನದಾ?" ಎಂದು ಕೇಳಿದಾಗ, ಗೋಪಾಲರಾಯ ಹೃದಯತುಂಬಿ ನಕ್ಕರು.

ಹಾಲಿಗೆ ಬಂದು ಶಾರದಾ ಫೋನು ಎತ್ತಿಕೊಂಡಳು.

"ಹೇಮಂತ,. ನಾನು ಕಣೋ ..ಹೇಗಿದೀಯಾ?....ಆರೋಗ್ಯ ಸರಿಯಾಗಿದೆ ತಾನೇ?"

"ಸರಿಯಾಗಿದೆಯಮ್ಮ ನೀನು ಹೇಗಿದೀಯಾ?"

"ನಾನು ಚೆನ್ನಾಗಿದೇನೆ. ..ಏನೋ ಸಮಾಚಾರ? ..."

"ಏನಿಲ್ಲಮ್ಮಾ, ನೀನು ಹಗಲೆಲ್ಲ, ಮದುವೆ ಮಾಡಿಕೋ—ಮದುವೆ ಮಾಡಿಕೋ ಅಂತಾ ಇದ್ದೆಯಲ್ಲ ..ಅದಕ್ಕೆ, ನಾನು—ಈಗ, ಮದುವೆ ಮಾಡ್ಕೊಬೇಕಂತ ಮನಸ್ಸು ಮಾಡಿದೇನೆ"

"ಹೇಮಂತ ನೀನು ಹೇಳೋದು ನಿಜ ಏನೋ?—ನೀನು ಮದುವೆಗೆ ಒಪ್ಪಿಕೊಳ್ಳುತ್ತೀ ಏನೋ?"

"ಎಷ್ಟು ಸಾರಿ ಅಮ್ಮಾ ಹೇಳೋದು?—ನೀನು ಬೇಗ ಬಂದುಬಿಡು. ಮದುವೆ ಬೇಗ ಮುಗಿದು ಹೋಗಲಿ."

"ಅದೇಗೇ ಸಾಧ್ಯ ಕಣೋ! ...ನಿಶ್ಚಯ .ವರಕನ್ಯೆ ನೋಡುವುದು, ಎಲ್ಲಾ ಬೇಡವೇನೋ "

"ಅದೆಲ್ಲ ಏಕಮ್ಮಾ!? ...ಮದುವೆಯೊಂದು ಬೇಗ ಆದರೆ ಸಾಕು— ಅಷ್ಟೇ! "

"ಆಯ್ತಪ್ಪ ಆಯ್ತು ..ನಾನು, ನಾಳೆ ಹೊರಟು ಬರುತ್ತೇನೆ."

"ಆಯ್ತಮ್ಮಾ—ನಾನು ಕರೆಯಲು ಬರುತ್ತೇನೆ."

"ಸರಿ! ..ನಿನ್ನ ಮಾವನ ಜೊತೆ ಮಾತಾಡ್ತೀಯಾ ?"

"ಬೇಡಮ್ಮಾ ನನಗೆ ನಾಚಿಕೆ ಆಗುತ್ತೇ"

"ನಾಚಿಕೆಯಂತ ನಾಚಿಕೆ! ಮಾವ ಅಂದರೆ, ನಾಚಿಕೆ ಬಂದುಬಿಡ್ತು— ದೊಡ್ಡ ಮನುಷ್ಯನಿಗೆ! ..ಸರೀ, ಫೋನು ಇಡಲಾ ?...."

"ಹಾಂ! ಇಡು ...ನಾಳೆ ಹೊರಟು ಬಾ "

ಫೋನು ಕೆಳಗಿಟ್ಟು, ಸುಷಮಾಳನ್ನು, ತಮ್ಮ ತೋಳ ತೆಕ್ಕೆಯಲ್ಲಿ ಬಂಧಿಸಿದರು —ಶಾರದಮ್ಮ! ..ನಂತರ ತನ್ನತ್ತಲೇ ಕಾತುರದಿಂದ ನೋಡುತ್ತಾ ನಿಂತ, ಅಣ್ಣ ಹಾಗೂ ಅತ್ತಿಗೆಯ ಕಡೆ ಹೊರಳಿ, "ಅಣ್ಣಾ! ..ಅಂತೂ ಕೊನೆಗೆ ಹೇಮಂತಾ ಮದುವೆಗೆ ಒಪ್ಪಿಕೊಂಡ. ನಿಶ್ಚಯ–ಗಿಶ್ಚಯ ಯಾವುದೂ ಬೇಡವಂತೆ ಅರ್ಜೆಂಟ್ ಮದುವೇನೇ ಬೇಕಂತೆ!"

ಗೋಪಾಲರಾಯರ ಬಾಯಿಂದ ಬೇಗ ಮಾತೇ ಬರಲಿಲ್ಲ. ಸ್ವಲ್ಪ ಸುಧಾರಿಸಿಕೊಂಡು ನಡುಗುವ ಕಂಠದಲ್ಲಿ ನುಡಿದರು.

"ಶಾರದಾ, ..ನಾನು ತುಂಬಾ ಭಾಗ್ಯಶಾಲಿ ಕಣಮ್ಮಾ! ..ಹೇಮಂತನಂತಹ ಅಪ್ಪಟ ಚಿನ್ನದಂಥ ಅಳಿಯಾ ಸಿಕ್ಕಿಬಿಟ್ಟ."

"ತುಂಬ ದೊಡ್ಡ ಮಾತು ಅಣ್ಣಾ! ...ನಿಜ ಹೇಳಬೇಕೆಂದರೆ, ಎಲ್ಲಾ— ನಿನ್ನ ಹಾಗೂ' ಅತ್ತಿಗೆಯ ಅನ್ನದ ಪ್ರಭಾವ ...ಹೇಮಂತ ಆ ಅನ್ನದ ಋಣ ತೀರಿಸಿದ ...ನನ್ನ ತವರಿನ ಕುಡಿ, ಮತ್ತೆ ಮೊಳಕೆಯೊಡೆಯುತ್ತದೆ. ಹರವಾಗಿ ಬೆಳೆದು, ಹೆಮ್ಮರವಾಗಿ ನಿಲ್ಲುತ್ತದೆ ಅಷ್ಟೇ ಸಾಕು. ಅಂದ ಹಾಗೇ, ನಾಳೆ ನಾನು—ಹೊರಡಬೇಕು. ಜೊತೆಯಲ್ಲಿ ಸುಷಮಾ ಇರಲಿ ... ನೀನು, ಎಲ್ಲಾ ಸಿದ್ಧತೆ ಮಾಡು."

"ಅಕ್ಕಾ, ಒಂದು ಮಾತು! ನೀನು ತಪ್ಪು ತಿಳಿಯುವುದಿಲ್ಲಾ ಅಂದ್ರೇ ...." ರಾಧಾಬಾಯಿ ನಡುವೆ ಬಾಯಿ ಹಾಕಿದರು.

"ಏನು ರಾಧಾ ? ...ಹೇಳು !"

"ಇಂದು ಒಳ್ಳೆಯ ದಿವಸ ಇದೆ. ಸಾಯಂಕಾಲ ನಾಲ್ಕು ಜನ ಮುತ್ತೈ

ದೆಯರನ್ನು ಕರೆದು, ಆರತಿ ಮಾಡೀ, ಸಕ್ಕರೆ ಹಂಚಿದರೆ .ಹೇಗೆ?"

"ಧಾರಾಳವಾಗಿ ಮಾಡೇ ಮಹಾರಾಯ್ತೀ! ಯಾರು ಬೇಡ ಅಂತಾರೆ

ಅಂದೇ ಸಂಜೆ, ಸುಷಮಾಗೆ ಆರತಿ ಮಾಡಿ, ಸೀರೆ ಉಡಿಸಲಾಯಿತು. ಸುಷಮಾ, ಹೇಮಂತರ ಮದುವೆ ನಿಶ್ಚಯವಾದ ಬಗ್ಗೆ—ಸಾರಿ, ಎಲ್ಲರಿಗೂ ಸಿಹಿ ಹಂಚಲಾಯಿತು ತಮ್ಮ ಪಾಲಿಗೆ ಬಂದ ಸುಷಮಾಳನ್ನು ಎಳೆದು ತಮ್ಮ ಮಡಿಲಲ್ಲಿ, ಹುದುಗಿಸಿಕೊಂಡರು ಶಾರದಮ್ಮ.

ಮರುದಿನ ಅವರು ಹೊರಟು ನಿಂತರು ನಿಲ್ದಾಣಕ್ಕೆ ಕಳಿಸಲು ಬಂದ, ಅಣ್ಣನಿಗೆ, ಶಾರದಮ್ಮ ಹೇಳಿದರು.

"ಅಣ್ಣಾ, ನಾನು ಹೋದ ಕೂಡಲೇ, ಮುಹೂರ್ತ ವಿಚಾರಿಸಿ ಕಾಗದ ಬರೆಯುತ್ತೇನೆ ಬೇಗ ಹೊರಟು ಬಾ."

"ಆಗಲಮ್ಮಾ."

ರೈಲು ಹೊರಟಿತು. ಕಿಟಕಿಯಿಂದ ಕೈಬೀಸಿದಳು ಸುಷಮಾ

## ಆರು

"ರಿಮಿ"—ಸೂರಪ್ಪ ನಾಯಿಮರಿಗೆ ಇಟ್ಟಹೆಸರು. ರಿಮಿ, ಈಗ ಮುನ್ನಿ ನಂತಿಲ್ಲ. ಬೆಳೆದು ದೊಡ್ಡದಾಗಿದೆ.

ದೊಡ್ಡ-ದೊಡ್ಡ ಕಣ್ಣುಗಳು. ಎಡ-ಬಲಕ್ಕೆ ಜೋತುಬಿದ್ದ ಬಿಳಿ ಕಿವಿಗಳು. ಹಣೆಯ ಮೇಲೆ ಬಿಳಿ ಚುಕ್ಕೆ.

"ಇನ್ನೊಂದು ತಿಂಗಳು ತಡೆಯಿರಿ ಸಾಹೇಬರೇ, ಅನಂತರ ನೋಡಿ ರಿಮಿಯ ವೈಭವ. ಅವಳ ಹಿಂದೆ-ಮುಂದೆ, ಎಡಕ್ಕೆ-ಬಲಕ್ಕೆ ಪ್ರೇಮಿಗಳ ಹಿಂಡೇ ನೆರೆಯುತ್ತದೆ."

"ಹಾಂ! ಗೊತ್ತಾಯ್ತು ಬಿಡು. ಅಂದರೆ, ನನಗೆ ಹಗಲು-ರಾತ್ರಿ ಎರಡು ಹೊತ್ತೂ ನಿದ್ದೆಯೇ ಇಲ್ಲ. ಬಂದ ಪ್ರೇಮಿಗಳನ್ನು ಓಡಿಸಲು ರಾತ್ರಿಯಲ್ಲ ಕಳೆಯಬೇಕು."

"ಅದೂ ಒಳ್ಳೆಯದೇ ಆಯಿತು ಸಾಹೇಬರೇ, ಅಂದರೆ, ರಾತ್ರಿ ಯಾರೂ—ನಿಮ್ಮ ಮೇಲೆ, ಮೊದಲಿನಂತೆ ಆಕ್ರಮಣ ಮಾಡಲಾರರು ರಿಮಿಯ ಸಲುವಾಗಿ, ನೀವು, ಯಾವಾಗಲೂ ಎದ್ದೇ ಇರುವುದರಿಂದಾಗಿ, ಬಚಾವ್ ಆಗ್ತೀರಿ....ಹೇಗಿದೆ ರಿಮಿ ?!"

ಅವನ ಮಾತು ಅರ್ಧಕ್ಕೇ ನಿಂತುಹೋಯಿತು ಟೇಬಲ್ ಮೇಲಿದ್ದ ಟೆಲಿಫೋನು ತನ್ನ ಅಸ್ತಿತ್ವ ತೋರಿಸಿತು. ಮಾತು ಅಲ್ಲಿಗೆ ನಿಲ್ಲಿಸಿ, ಫೋನು ಎತ್ತಿದ.

"ಹಲೋ ಸೂರಪ್ಪ ಮಾತನಾಡ್ತಾ ಇರೋದು."

"ಸೂರಪ್ಪ ! ಡಬ್ಬಲ್ ಚಿಕನ್ ಬಿರಿಯಾನೀ ."

"ಹಾಂ! ಹಾಂ! ..ಅರ್ಥ ಆಯ್ತು . ಸಾಹೇಬರಿಗೆ ಕೊಡುತ್ತೇನೆ "

ಸೂರಪ್ಪ, ಫೋನು—ಹೇಮಂತನ ಕಡೆ ಸರಿಸುತ್ತಾ "ಡಬ್ಬಲ್ ಚಿಕನ್" ಎಂದ, ಅಷ್ಟೇ. ಹೇಮಂತ ಒಮ್ಮೆಲೇ ಜಾಗೃತನಾಗಿ ರಿಸೀವರ್ ತೆಗೆದು ಕೊಂಡ.

"ಹಲೋ ! ..ಹೇಮಂತ—ದಿಸ್ ಎಂಡ್."

"Good morning Hemantha ! ಇಂದು ಬೆಳಿಗ್ಗೆ 9 ಗಂಟೆಗೆ ಮೇಯರ್‌ಟೌನ್‌ನಲ್ಲಿ ಕಾರ್ಯಕ್ರಮವಿದೆ. ಆ ಕಾರ್ಯಕ್ರಮದಲ್ಲಿ ಸುಮಾರು ಒಂದು ಕೋಟಿ ರೂಪಾಯಿ ಬೆಲೆಯ ವಜ್ರಗಳ ವಿಲೇವಾರಿಯಾಗುವದಿದೆ .. ಯಾವ ರೀತಿ ಅನ್ನೋದು ತಿಳಿಯದು."

"ಸರೀ ಮತ್ತೇನು ?"

"ಮತ್ತೇನೂ ಇಲ್ಲ Good bye ?"

ಫೋನು ಯಥ್‌ಸ್ಥಾನದಲ್ಲಿರಿಸಿ, ಹೇಮಂತ ಸಮಯನೋಡಿದ ಆಗಲೇ ಎಂಟು ಗಂಟೆಗೆ ಸಮೀಪಿಸಿದೆ ಹತ್ತು ಗಂಟೆಗೆ ಅಮ್ಮ ಬರುವವರು. ಕರೆಯಲು ಸ್ಟೇಷನ್ನಿಗೆ ಬರುತ್ತೇನೆ ಅಂತ ಹೇಳಿದ್ದ ಅಲ್ಲಿ ಹೋಗಲು ಆಗಲಾರದು. ಅವಳು ಸಿಟ್ಟಾಗಬಹುದು. ಅವಳನ್ನು ಹೇಗಾದರೂ ಸಮಾಧಾನ ಪಡಿಸ ಬಹುದು ಎಂದು ಕೊಳ್ಳುತ್ತಾ, bath-room ಹೊಕ್ಕ. ಅದೇ ಕ್ಷಣ ಮತ್ತೆ ಫೋನಿನ ಗಂಟೆ ಬಾರಿಸಿತು. ಸೂರಪ್ಪ ಎತ್ತಿಕೊಂಡ ಶಾಂತಿ ಮಾತನಾಡು ತ್ತಿದ್ದಳು

"Good Morning— MAD AM ನಾನು ಸೂರಪ್ಪ."

"ಸೂರಪ್ಪಾ ! .ಇಂಗ್ಲೀಷ್ ಮಾತಾಡ್ತೀಯಾ ? ! ಸ್ವಲ್ಪ ಸರಿಯಾಗಿ ಮಾತಾಡು "

"ನಾನು ಏನಂದೆ ಮ್ಯಾಡ್—ಅಮ್ಮ !"

"ಮ್ಯಾಡಮ್ ಅನ್ನು ಸೂರಪ್ಪ ಮ್ಯಾಡ ಅಮ್ಮ ಅಂದರೆ ಹೇಗೆ ?"

"ಅಂದರೆ ಏನಾಯ್ತು ಮ್ಯಾಡ್ ಅಮ್ಮ !"

"ನಿನಗೆ ಅರ್ಥವಾಗಲಿಲ್ವಾ"

"ಇಷ್ಟು ನನಗೆ ಅರ್ಥ ಆಗ್ತಾ ಇದ್ರೇ ಇಪ್ಪತ್ತು ವರ್ಷದಿಂದ ನಾನು ಪಿ. ಸಿ. ಆಗೇ ಇರತಿರಲಿಲ್ಲ

ಎಸ್. ಪಿ ಆಗ್ತಿದ್ದೆ ಮಾಡ್ ಅಮ್ಮ."

"ವ್ಯಾಡ್—ಅಂದರೆ, ಅದರ ಅರ್ಥ ಗೊತ್ತಾ ?"

"ಮ್ಯಾಡ್ . ಮ್ಯಾಡ್ ? ಅಂದ್ರೇ ?"

"ಹಾಂ ಹಾಂ. M A.D ವ್ಯಾಡ್"

"ಹಾಂ ಹಾಂ ! ಗೊತ್ತಾಯ್ತು ! MAD ವ್ಯಾಡ್—ಯಾನೇ—ಪಾಗಲ್—ಅಂದ್ರೇ.. .ಹುಚ್ಚ ! ಹುಚ್ಚ—ಅಲ್ವಾ ?"

"ಹೌದು .ಆಮೇಲೆ—ಅಮ್ಮ ಅಂದ್ರೇ ?"

"ಅಮ್ಮ—ಅಂದ್ರೇ ಅಮ್ಮ ! ತಾಯಿ."

"ಈಗ ಎರಡೂ ಕೂಡಿಸಿ ಹೇಳು, ವ್ಯಾಡ್, ಅಮ್ಮ"

"ಹುಚ್ಚ ಅಮ್ಮ ಅಂದ್ರೆ—ಹುಚ್ಚಮ್ಮ" ಆ ಕಡೆಯಿಂದ, ಶಾಂತಿ ಕಿಲ-ಕಿಲ ನಗುವುದು ಕೇಳಿಸಿತು. ಅದರಹಿಂದೆಯೇ ಆಕೆ ಮಾತನಾಡಿದಳು.

"ಈಗ ಅರ್ಥ ಆಯ್ತಾ ? ನೀನು, ನನಗೆ ಹುಚ್ಚಮ್ಮಾ—ಅಂತ, ಬೈತಾ ಇದೀಯಾ ?"

"ಇಲ್ಲ ವ್ಯಾಡಮ್ಮಾ. ದೇವರಾಣೆಗೂ ಅದಲ್ಲ ವ್ಯಾಡಮ್ಮಾ."

"ಹಾಗಾದರ, ಇನ್ನು ಮೇಲೆ 'ಮೇಡಮ್' ಅನ್ನು ವ್ಯಾಡಮ್ಮ—ಅಲ್ಲ ಅದೂ ಬೇಡ ಸಿಸ್ಟರ್ ಅಂದ್ರೆ ಸಾಕು."

"ಓಹ್ ಸಿಸ್ಟರ್ ಇದು ಆಗಬಹುದು . .ಸಿಸ್ಟರ್."

"ಹಾಂ ಈಗ ಹೇಳು ಸಾಹೇಬರನ್ನು ಕರೆಯೊಕೆ ಆಗುತ್ತಾ?"

"ನಾನೇನು ಕರೆಯುತ್ತೇನೆ—ಸಿಸ್ಟರ್, ಆದ್ರೆ ಅವರು ಬರೋಲ್ಲ."

"ಯಾಕೆ ?"

"ಏಕಂದ್ರೇ ?—ಬರೋಹಾಗಿಲ್ಲ ಅಂತ."

"ಅದೇ—ಏಕೆ ಬರೋ ಹಾಗಿಲ್ಲ ಅಂತ ಕೇಳ್ತಾ ಇದೀನೀ"

"ವ್ಯಾ.. ಸಾರೀ. ಸಿಸ್ಟರ್! ಅವರು ಬಾತ್‌ರೊಂನಲ್ಲಿದ್ದಾರೆ. ಅವರು. .. ಸ್ನಾನಾ ಮಾಡ್ತಾ ಇದಾರೆ. ಅವರು. ಸಿಸ್ಟರ್—ಒಂದು ಸುದ್ದಿ ಹೇಳಲಾ ?"

"ಹೇಳು ನಿನ್ನ ಹೆಸರೇ ಸುದ್ದಿ ಸೂರಪ್ಪ ಇರೋವಾಗ, ಸುದ್ದಿ—ಏಕೆ ....ಬೇಡ"

"ಮತ್ತೇ—ನೀವು ಯಾರ ಮುಂದೂ ಹೇಳಬಾರದು"

"ಇಲ್ಲ ..ಹೇಳೂಲ್ಲ."

"ಅವರು bath room ನಲ್ಲಿದ್ದಾಗ, ಹೊರಗೆ ಬರೋಲ್ಲ ?"

"ಏಕೆ ?"

"ಅದೇ ಟಾಪ್ ಸೀಕ್ರೆಟ್."

"ಟಾಪ್ ಸೀಕ್ರೆಟ್ ಅ ?"

"ಹಾಂ ! ಏನದು ?

"ನನಗೆ ಹೇಳ್ತೀದಿಲ್ವಾ."

"ಹೇಳ್ತೀನೆ ಸಿಸ್ಟರ್. ಅವರು bath roomನಲ್ಲಿದ್ದಾಗ, ಹೊರಗೆ ಬರೋದಿಲ್ಲ, ಏಕಂದ್ರೇ, ಏಕಂದ್ರೇ ಅವರು 'ಹಾಗೇ' ಇರ್ತಾರೆ ! .ಹಾಗೇ !"

ನೂರಾರು ಬಳೆಗಳು ಒಂದಕ್ಕೊಂದು ತಾಕಾಡಿದಂತಹ ಸಪ್ಪಳ. ಆಹ್ ! ಎಷ್ಟು ಚೆನ್ನಾಗಿ ನಗತಾರೆ !—ಸಿಸ್ಟರ್ ಎಂದು ಕೊಂಡ ಸೂರಪ್ಪ ನಕ್ಕು—ನಕ್ಕು—ಸುಸ್ತಾಗಿ ಶಾಂತಿ ಹೇಳಿದಳು

"ಸರಿ ಸೂರಪ್ಪ ! ನಾನು, ಆಮೇಲೆ ಮತ್ತೆ ಫೋನ್ ಮಾಡ್ತೀನೆ ."

ರಿಸೀವರ್ ಕೆಳಗಿಟ್ಟ ಸದ್ದು.

ರಿಮಿ, ಕುಂಯ್, ಕುಂಯ್ ಮಾಡತೊಡಗಿತು. ಹೋಹೋ—ರೀಸಸ್ ಅಂದ ಸೂರಪ್ಪ ! ಅದನ್ನು ಹೊರಗಡೆ ತೆಗೆದುಕೊಂಡು ಹೋದ. ಅದೇ ಕ್ಷಣ, bath roomನಿಂದ ಹೊರಗೆ ಬಂದ ಹೇಮಂತ, ತನ್ನ dressing room ಪ್ರವೇಶಿಸಿದ.

ಹತ್ತು ನಿಮಿಷಗಳಲ್ಲಿ ಆತ ಸಿದ್ಧನಾಗಿದ್ದ. ಗಂಟೆ, ಒಂಭತ್ತು ಇಪ್ಪತ್ತು. ಇನ್ನು ಹೊರಡಬೇಕು ಅನ್ನೋ ಅಷ್ಟರಲ್ಲಿ ಮತ್ತೆ ಫೋನು ಕರೆಯಿತು. ಸೂರಪ್ಪ ಇರಲಿಲ್ಲ ಹೀಗಾಗಿ, ಹೇಮಂತನೇ ಎತ್ತಿದ. ಆಕಡೆಯಿಂದ ಹೆಣ್ಣಿನ ಕಂಠ ಕೇಳಿಬಂದಿತು.

"ಹೇಮಂತಾ ಇದೀರಾ ?"

"ಯಾವ ಹೇಮಂತ ?"

"ಅದೇ C I D inspector ಹೇಮಂತ !"

"ಸಾರೀ—ರಾಂಗ್ ನಂಬರ್."

"ಅಂದರೆ, ನನಗೆ ಶಾಂತಿ—ಸುಳ್ಳು ಹೇಳಿದಳಾ ?"

"ಯಾವ ಶಾಂತಿ ?"

"ಅದೇ ನಿಮ್ಮ ಲವ್ವರು !"

"ಓಹೋಹೋ ! ಹಾಗಾದರೆ ನಿನ್ನ ಬಳಿ ನನ್ನ ಜಾತಕ ಎಲ್ಲಾ ಇದೆಯೊ ?"

"ಹಾಂ • ನೋಡೀ !, ಶಾಂತಿ ಹೆಸರು ಹೇಳುತ್ಲು, ಕಳ್ಳ ಸಿಕ್ಕಿಬಿಟ್ಟ ! ನೀವೇ ಹೇಮಂತ ತಾನೇ ?"

"ಹಾಂ ! ...ಹೌದು—ಮುಂದೆ ಹೇಳಿ .."

"ನನ್ನ ಹೆಸರು ರೋಜಾಮೇರಿ—ಅಂತ "

"ನನ್ನ ಬಗ್ಗೆ ಶಾಂತಿ, ನಿಮಗೇನೂ ಹೇಳಲಿಲ್ವಾ ?"

"ಇಲ್ಲವಲ್ಲ"

ಹಾ ! . ಮರೆತಿರಬೇಕು ಇದೋ ನೋಡಿ ನನ್ನ ಪಿಂಕಿ ಬರ್ತ್‌ಡೇ ಇಂದು ಇಟ್ಟುಕೊಂಡಿದ್ದೇನೆ, ಹತ್ತು ಗಂಟೆಗೆ ದಯವಿಟ್ಟು ಬನ್ನಿ ನಾನು, ಶಾಂತಿಗೆ ಹೇಳಿದ್ದೆ."

"ರೋಜಾಮೇರೀ, ನಾನು ಬರ್‍ತಾ ಇದ್ದೆ ...ಆದ್ರೇ, ಅರ್ಜೆಂಟ್ ಕೆಲಸ ಇದೆ, ಬರೋಕೆ ಆಗತಿಲ್ಲ."

"ಸರೀ ಹಾಗಾದ್ರೇ—ಸಮಯ ಸಿಕ್ಕರೆ ಹತ್ತು ಗಂಟೆಗೆ ಮೇಯರ್ ಟೌನ್‌ಗೆ ಬರತೀರಾ ?"

ಮೇಯರ್ ಟೌನ್ ಹೆಸರು ಕೇಳುತ್ತಲೂ, ಆತ ಬೆಚ್ಚಿ ಬಿದ್ದು —"ಏನು? ಮೇಯರ್ ಟೌನಾ ?"

"ಹಾಂ ಅಲ್ಲೆ, ನನ್ನ functionಇರೋದು ? ಬನ್ನೀ"

"ಹಾಂ ...ವಿಚಾರ ಮಾಡ್ತೇನೆ... "

ಬಾಯ್...."

ಫೋನು ಕೆಳಗಿಳಿಸಿದ ಹೇಮಂತ್, ಒಂದು ಕ್ಷಣ ಯೋಚಿಸುತ್ತಾ ಕುಳಿತ ಡಬಲ್ ಚಿಕನ್ ಬಿರಿಯಾನಿ ಹೇಳಿದ್ದೂ ಮೇಯರ್ ಟೌನ್. ! ರೋಜಿಮೇರೀ ಹೇಳುವುದೂ ಮೇಯರ್ ಟೌನ್ ! ಹಾಗಾದರೆ, ಎರಡೂ ಒಂದೇ ! ಸ್ಪಷ್ಟವಾಯಿತು ಅಲ್ಲಿ ಯಾವ ರಹಸ್ಯವಿದೆಯೋ ? ..ಯಾವ ರೂಪದಲ್ಲಿಯೋ ? ಎಂದಾಗ ಯೋಚಿಸುತ್ತಾ ಹೊರಗೆ ಬಂದ.

ನಾಯಿಮರಿಯೊಂದಿಗೆ, ಅಂದರೆ—ರಿಮಿಯೊಂದಿಗೆ ಒಳಗೆ ಬರುತ್ತಿದ್ದ ಸೂರಪ್ಪ ಹೇಳಿದ.

"ನೋಡೀ ಸಾರ್ ! .ನಮ್ಮ ರಿಮಿ, ನಮ್ಮ department ಗೆ ತಕ್ಕದ್ದಾಗಿದೆ. ರೀಸೆಸ್ ಮಾಡಬೇಕಾಗಿತ್ತು. ಮನೆಯಲ್ಲಿ, ಮಾಡಲಿಲ್ಲ. ಕುಯ್ ಕುಂಯ್ ಅಂದಿತು. ಹೋರಗೆ ಕರೆದೊಯ್ದೆ. ಹೊರಗೇ ಮಾಡಿತು. ಮುಂದೆ, ದೊಡ್ಡದಾದ ಮೇಲೆ ನೋಡೀ ಇದರ ಕರಾಮತ್ತು .."

"ಅದರ ಕರಾಮತ್ತು ಆಮೇಲೆ ಇರಲಿ. ಅದನ್ನು ಒಳಗೆ ಬಿಟ್ಟು-ನೀನು ಬಾ. ಈಗ—ನಿನ್ನ ಕರಾಮತ್ತುತೋರಿಸಬೇಕಾಗಿದೆ."

ಎರಡೇ ನಿಮಿಷಗಳಲ್ಲಿ ಸೂರಪ್ಪ ಹೊರಗೆ ಬಂದ. ಜೀಪ್ ಸ್ಟಾರ್ಟ್

ಆಯಿತು. ಅದರ ಸಪ್ಪಳದಲ್ಲಿ, ಒಳಗೆ ಫೋನಿನ ಗಂಟೆ ಬಾರಿಸಿದ್ದು ಇಬ್ಬರಿಗೂ ಕೇಳಲಿಲ್ಲ.

## ಏಳು

ಜೀಪು ಮೇಯರ, ಟೌನಿಗೆ ಬಂದಾಗ ಹತ್ತು ಹೊಡೆದು ಐದು ನಿಮಿಷಗಳಾಗಿದ್ದವು. ಮಧ್ಯ ದಾರಿಯಲ್ಲಿ ಜೀಪು ನಿಲ್ಲಿಸಿ, ಹೇಮಂತ ಒಂದು ಬೇಬಿ ವಾಚ್ ಕೊಂಡುಕೊಂಡ ಗಿಫ್ಟ್ ಕೊಡಲು. ಅದಕ್ಕಾಗಿ ಹದಿನೈದು ನಿಮಿಷಗಳು ಮಾಯವಾಗಿದ್ದವು ಐದು ನಿಮಿಷ ಲೇಟ್ ಆಯಿತು. ಎಲ್ಲಿ ವಜ್ರದ ಡೀಲ್ ಮುಗಿದು ಹೋಗಿದೆಯೋ—ಎಂದು ಕೊಳ್ಳುತ್ತಾ, ಹೇಮಂತ ಮೇಯರ್ ಟೌನ್‌ಹಾಲ್ ಪ್ರವೇಶಿಸಿದ

ಸುಮಾರು ನಾನೂರು, ಐದುನೂರು ಜನರಿಗೆ ಊಟದ ವ್ಯವಸ್ಥೆ ಮಾಡಬಹುದಾದಂಥ ಹಾಲ್, ಬಣ್ಣ ಬಣ್ಣದ ದೀಪಗಳಿಂದ, ಬೆಲೂನುಗಳಿಂದ ಸಿಂಗರಿಸಲ್ಪಟ್ಟಿತ್ತು. ಇನ್ನೂರು–ಮುನ್ನೂರು ಜನ ಅಲ್ಲಿ ನೆರೆದಿದ್ದರು. ಆಚ್ಚರಿಯ ಸಂಗತಿ ಎಂದರೆ, ಅಲ್ಲಿ ನೆರೆದವರೆಲ್ಲ ಮಹಿಳೆಯರೇ ! ಸಂಭಾವಿತ ಶ್ರೀಮಂತ ಕುಟುಂಬಕ್ಕೆ ಸೇರಿದವರು. ಅದರಲ್ಲಿ ಮದುವೆಯಾಗದಿದ್ದವರೇ ಹೆಚ್ಚು ! ..ಇನ್ನೂ ಹೆಚ್ಚು ಅಚ್ಚರಿ ಉಂಟು ಮಾಡಿದ ಸಂಗತಿ ಎಂದರೆ, ಪ್ರತಿಯೊಬ್ಬರ ಕೈಯಲೂ ಒಂದೊಂದು ನಾಯಿಕುನ್ನಿಗಳಿದ್ದವು—ಅನೇಕ ಜಾತಿಯ, ಸುಂದರವಾದ ಕುನ್ನಿಗಳು !. ..

ಹೇಮಂತ ಒಳಗೆ ಕಾಲಿಡುವುದಕ್ಕೂ, ಶಾಂತಿ ಅವನ ಹಿಂದಿನಿಂದ ಬರುವುದಕ್ಕೂ ಸರಿಹೋಯಿತು. ಅವಳು ಹೇಮಂತನನ್ನು ಕರೆದುಕೊಂಡು ವೇದಿಕೆಯ ಬಳಿ ಬಂದಳು. ಶಾಂತಿಗಿಂತ ಐದಾರು ವರ್ಷ ಹಿರಿಯರಿಂದ ಯುವತಿಯರೆಡೆ ಕೈ ತೊರಿಸಿ—"ರೋಜಮೇರಿ" ಎಂದಳು ...ಹೇಮಂತ, ಅವಳೆಡೆ ನೋಡಿ ಕೈ ಮುಗಿದ. ರೋಜಮೇರಿಯೇ ಮುಂದಾಗಿ ಬಂದು ಕೈ ಕುಲುಕಿ, ಶಾಂತಿ ಕಡೆ ಹೊರಳಿ ಹೇಳಿದಳು.

"ಶಾಂತೀ ..ನೀನು ಲಕ್ಕೀ, ತುಂಬ ಸ್ಮಾರ್ಟ್ ಆದ ಜೊತೆಗಾರ ಸಿಕ್ಕಿದ್ದಾನೆ ..."

ಶಾಂತಿ ಮುಖ ಕೆಳಗೆ ಹಾಕಿದಳು. ಹೇಮಂತ ಜೇಬಿನಿಂದ ಪೆಟ್ಟಿಗೆ ತೆಗೆದು ರೋಜಮೇರಿಯ ಕೈಗಿತ್ತ. ಅಚ್ಚರಿಯಿಂದ ಅವನೆಡೆ ನೋಡುತ್ತಾ, ಅವಳು

ಪೆಟ್ಟಿಗೆ ತೆರೆದಳು. ಬೇಬಿವಾಚ್ ! ..."ಇದು ಯಾರಿಗೆ ?" ಎಂದು ಕೇಳಿದಳು. "ನಿಮ್ಮ ಪಿಂಕಿಗೆ ! ಇಂದು ಅವಳ ಹುಟ್ಟಿದ ಹಬ್ಬ ತಾನೆ ?!" ಎಂದಾಗ ಹೇಮಂತ ಶಾಂತಿ ಹಾಗೂ ರೋಜಮೇರಿ ಜೋರಾಗಿ ನಗತೊಡಗಿದರು. ಅವರ ನಗೆಕೇಳಿ ಮತ್ತೆ ನಾಲ್ಕಾರು ಜನ ಅವಳ ಹತ್ತಿರ ಬಂದು "ಏನು? ಏನಾಯ್ತು ? ಎಂದು ಕೇಳಿದರು." ರೋಜಮೇರಿ ಅವರೆಲ್ಲರಿಗೆ ಬೇಬಿವಾಚ್ ತೋರಿಸಿ "ಇದನ್ನು ಪಿಂಕಿಗೆ ಪ್ರಸೆಂಟ್ ತಂದಿದ್ದಾರೆ" ಎಂದಳು. ಅವಳ ಮಾತಿಗೆ ಸುತ್ತಲಿದ್ದ ಜನ 'ಖೊಳ್' ಎಂದು ನಕ್ಕರು. ಹೇಮಂತನಿಗೆ ಏನೊಂದೂ ಅರ್ಥವಾಗಲಿಲ್ಲ ಎರಡು ನಿಮಿಷಗಳ ನಂತರ, ಹ್ಯಾಂಡ್ ಕರ್ಚೀಫಿನಿಂದ ಕಣ್ಣನ್ನು ಒರಸಿಕೊಂಡು, ರೋಜಮೇರಿ, ವೇದಿಕೆಯ ಕಡೆಹೊರಳಿ "ಶಾಲೀನಾ" ಎಂದು ಕೂಗಿದಳು. ಹನ್ನೆರಡು ವರ್ಷದ ಹುಡುಗಿ ಓಡಿಬಂದಳು ಅವಳಿಗೆ 'ಪಿಂಕಿಯನ್ನು ತಾ' ಎಂದು ಹೇಳಿ, ರೋಜಮೇರಿ, ಮತ್ತೆ ಮುಸಿ-ಮುಸಿ ನಕ್ಕಳು.

ಒಂದೇ ನಿಮಿಷದಲ್ಲಿ ಶಾಲೀನ್ ಬಾಗಿಲಲ್ಲಿ ಒಂದು ಮುದ್ದಾದ ಬಿಳಿ ನಾಯಿ ಮರಿ ತೆಗೆದುಕೊಂಡು ಬಂದಾಗ, ಹೇಮಂತನಿಗೆ ಅರ್ಥವಾಯಿತು. 'ಪಿಂಕಿ' ಅಂದರೆ—ನಾಯಿಮರಿ—ಅಂತ ..! ಈಗ ನಗುವ ಸರದಿ ಅವನದು.

ಮುಂದಿನ ಐದು ಹತ್ತು ನಿಮಿಷಗಳಲ್ಲಿ ಕಾರ್ಯಕ್ರಮ ಪ್ರಾರಂಭವಾಯಿತು ಪಿಂಕಿಗೆ ಒಂದು ವರ್ಷ ಒಂದು ಮೇಣಬತ್ತಿ ಉರಿಸಿ ಅದನ್ನು ರೋಜಮೇರಿ ಊದಿ ನಂದಿಸಿದಳು, ನಂತರ ಪಿಂಕಿಯನ್ನು ಕೈಯಲ್ಲಿ ಹಿಡಿದುಕೊಂಡು, ಚಾಕುವಿನಿಂದ ಕೇಕ್ ಕತ್ತರಿಸಿದಳು. ಎಲ್ಲರೂ ಚಪ್ಪಾಳೆ ತಟ್ಟಿ ಶುಭಾಶಯ ಹೇಳಿದರು. ಉಪಾಹಾರಗಳ ಸುರಿಮಳೆ ಪ್ರಾರಂಭವಾಯಿತು. ಹೇಮಂತ ಕೊಟ್ಟ ಬೇಬಿವಾಚಿಗೆ ಒಂದು ದಾರ ಕಟ್ಟಿ ರೋಜಮೇರಿ, ಅದನ್ನು ಪಿಂಕಿಯ ಕೊರಳಿಗೆ ತೂಗು ಹಾಕಿದಾಗ, ಎಲ್ಲರೂ ಹರ್ಷದಿಂದ ಚಪ್ಪಾಳೆ ತಟ್ಟಿದರು. ಶಾಂತಿ, ಹೇಮಂತನೆಡೆ ಹೆಮ್ಮೆಯಿಂದ ನೋಡಿದಳು.

ನಾಯಿಗಳಿಗಾಗಿ ಸ್ಟೀಲಿನ ಬಟ್ಟಲಿನಲ್ಲಿ ಹಾಲು, ಬಿಸ್ಕೀಟು ತರಲಾಯಿತು. ಬಿಳಿಯ ಹಾಸಿಗೆ ಹಾಸಿದ ಡೈನಿಂಗ್ ಟೇಬಲ್ ಮೇಲೆ ಸಾಲಾಗಿ ನಾಯಿ ಮರಿಗಳನ್ನು ಕೂಡಿಸಿ, ಅವರ ಮುಂದೆ ಹಾಲಿನ ಬಟ್ಟಲುಗಳನ್ನಿಡಲಾಯಿತು. ಲೊಚ-ಲೋಚಸಪ್ಪಳಮಾಡುತ್ತಾ, ಎಲ್ಲಾ ತುಂಬಾ ಮೋಜಿನದಾಗಿತ್ತು.

ಕುಲೀನ, ಸುಸಂಸ್ಕೃತ ಜನರ ಆಚಾರ ವಿಚಾರ, ನಡತೆ ಬಗ್ಗೆ ವಿಚಾರಿಸಿ, ಹೇಮಂತ ವಿಷಾದದ ನಗೆನಕ್ಕು ಒಂದು ತುತ್ತು ಅನ್ನವಿಲ್ಲದೆ ಬೀದಿ ಬೀದಿ ಸುತ್ತುವ ಲಕ್ಷಾವಧಿ ಜನ, ನಮ್ಮದೇಶದಲ್ಲಿರುವಾಗ, ಇಲ್ಲಿ ನಾಯಿಗಳಿಗಾಗಿ

ಲಕ್ಷಾವಧಿ ಹಣ ಸೂರೆ ಮಾಡಲಾಗುತ್ತಿದೆ. ಎಂತಹ ವಿಪರ್ಯಾಸ! ..

ಸಿಗರೇಟೊಂದನ್ನು ಉರಿಸಿ, ಹೇಮಂತ ಸುತ್ತಲೂ ದೃಷ್ಟಿ ಬೀರಿದ. ಸಂಶಯಕ್ಕೆ ಆಸ್ಪದವಾಗಲಿಲ್ಲ. ಯಾವ ವ್ಯಕ್ತಿಯೂ, ಅವನ ಕಣ್ಣಿಗೆ ಬಿದ್ದಿರಲಿಲ್ಲ. ಹಾಗಾದರೆ ಏಜೆಂಟ್ ಡಬಲ್ ಚಿಕನ್ ಬಿರಿಯಾನಿ ಕೊಟ್ಟಿರುವ ಸಂದೇಶ ಸುಳ್ಳೆ? . ಅಥವಾ ತಾವು ಬರುವುದಕ್ಕಿಂತ ಮೊದಲೇ ಡೈಮಂಡ್ ಡೀಲ್ ನಡೆದು ಹೋಗಿದೆಯೇ?—ಎಂದು ಹೇಮಂತ ವಿಚಾರಿಸತೊಡಗಿದ. ಅಷ್ಟರಲ್ಲಿ ಓರ್ವ ಮಹಿಳೆ ತನ್ನ ಮುದ್ದುಮರಿಯನ್ನು ಮುದ್ದಿಸುತ್ತಾ, ಸ್ವಲ್ಪ ಜೋರಾಗಿ ಹೇಳಿದಳು.

"ನನ್ನ 'ಮಿನ್ನಿಗೆ' ಸರಿಯಾದ ಗಂಡು ಸಿಕ್ಕಿದರೆ—ನಾನು—ಇಂದೇ ಅದರ ಮದುವೆ ಮಾಡಿ ಬಿಡುತ್ತಿದ್ದೆ."

ಸ್ವಲ್ಪ ಹೊತ್ತು ಮೌನ ವ್ಯಾಪಿಸಿತು, ಓರ್ವ ವೃದ್ಧ ಮುಂದೆ ಬಂದು, ತನ್ನ ನಾಯಿಯ ಮರಿ ಅವಳಿಗೆ ತೋರಿಸಿ ಹೇಳಿದ.

"ನಿಮಗೆ ಒಪ್ಪಿಗೆ ಇದ್ದರೆ ನನ್ನ 'ರಂಗೋ' ಜೊತೆ ನಿಮ್ಮ 'ಮಿನ್ನಿ' ಮದುವೆ ಮಾಡಬಹುದು"

"ಹು ರ್‍ರೇರ್‍ರೇರ್‍ರೇ" ಎಂದು ಸಂಭ್ರಾಂತ ಜನ ಕೇಕೆ ಹಾಕಿ ತಮ್ಮ ಹರ್ಷ ವ್ಯಕ್ತಪಡಿಸಿದರು. ಒಂದು ಕ್ಷಣ ಆ ಮಹಿಳೆ ರಂಗೋನನ್ನು ನೋಡಿ ಸಂತಸ ವ್ಯಕ್ತಪಡಿಸಿದಳು.

"ನನಗೆ ಈ ಸಂಬಂಧ ಒಪ್ಪಿಗೆ ಇದೆ. ಈಗಲೇ ಮದುವೆ ಮಾಡಿ ಬಿಡೋಣ .. .. .ಪಾರ್ಟಿ ಖರ್ಚು ನನ್ನ ಪರವಾಗಿ"

ಮತ್ತೊಮ್ಮೆ ಎಲ್ಲರೂ ಹುರ್‍ರ್‍ರ್‍ರ—ಎಂದರು. ಆ ವೃದ್ಧ ಚಪ್ಪಾಳೆ ತಟ್ಟಿ ಹೇಳಿದ. "ನನಗೂ ಒಪ್ಪಿಗೆ ಇದೆ. ಆದರೆ, ಮದುವೆಯಾಗುತ್ತಲೇ ಗಂಡು-ಹೆಣ್ಣು—ಎರಡೂ ನನ್ನ ಮನೆಗೆ ಬರಬೇಕು ..."

"ಅದು ನನ್ನಿಂದ ಆಗದು ಮಿನ್ನಿ ಬಿಟ್ಟಿರಲು ನನ್ನಿಂದ ಸಾಧ್ಯವಿಲ್ಲ."

"ಹಾಗಾದರೆ ಮದುವೆ ಬೇಡ"

ಎಲ್ಲೆಡೆ ಸ್ಮಶಾನ ಮೌನ . ರೋಜಮೇರಿ ಮುಂದೆ ಬಂದು .

"ಒಂದು ಕೆಲಸ ಮಾಡಿ—ಮೊದಲು ಮದುವೆ ಮಾಡಿ. ನಂತರ ಗಂಡು-ಹೆಣ್ಣು ಅದಲು-ಬದಲು ಮಾಡಿಕೊಳ್ಳಿ. ಒಂದು ವಾರದ ಮಟ್ಟಿಗೆ ನಿಮ್ಮ ಮನೆಯಲ್ಲಿಟ್ಟುಕೊಳ್ಳಿ . ಒಂದು ವಾರದ ಅವಧಿಯೊಳಗೆ ಅವು ನಿಮಗೆ ಹೊಂದಿಕೊಂಡರೆ ಸರಿ ...ಇಲ್ಲದಿದ್ದರೆ, ಮತ್ತೆ ಮೊದಲಿನಂತೆ, ಅವು ನಿಮ್ಮ-ನಿಮ್ಮ ಮನೆ ಸೇರಲಿ" ಎಂದಾಗ ; ಎಲ್ಲರೂ ಅದಕ್ಕೆ ಒಪ್ಪಿಗೆ ಸೂಚಿಸಿದರು

ಮದುವೆಯ ಸಂಭ್ರಮ ಪ್ರಾರಂಭವಾಯಿತು. ವೈಭವದಿಂದ, ಮದುವೆ ನಡೆಯಿತು, ನಂತರ ಕಾಣಿಕೆ ನೀಡಲಾಯಿತು. ಗಂಡು-ಹೆಣ್ಣು, ಅದಲು-ಬದಲು ಮಾಡಿಕೊಂಡ ನಂತರ, ಜನ—ಚಪ್ಪಾಳೆ ತಟ್ಟಿ ಡ್ರಿಂಕ್ಸ್ ಟೇಬಲ್ ಗಳತ್ತ ನುಗ್ಗಿದರು. ಅರ್ಧ ಗಂಟೆ, ದೊಡ್ಡ ಗಲಾಟೆ, ತಿನ್ನುವುದು, ಕುಡಿಯುವುದು .ಸಂಭ್ರಾಂತ, ಸುಸಂಸ್ಕೃತ ಜನ ಇಷ್ಟು ಅನಾಗರಿಕತೆಯಿಂದ, ನಡೆದುಕೊಳ್ಳುತ್ತಾರೆಂದು, ಹೇಮಂತ ಕನಸು, ಮನಸಿನಲ್ಲಿಯೂ, ನೆನಸಿರಲಿಲ್ಲ. ಅವರಿಂದ ದೂರ ನಿಂತು, ಆತ ವಧೂ-ವರರಾದ, ಆ ರಿಂಗೋ ಹಾಗೂ ಮಿನ್ನಾರನ್ನೇ, ದಿಟ್ಟಿಸುತ್ತಿದ್ದ ನಾಲ್ಕು ಇಂಚು ಗಾತ್ರದ ಕೊರಳಪಟ್ಟಿ ಧರಿಸಿದ್ದ ಆ ಪುಟ್ಟ ಮುದ್ದು ಕುನ್ನಿಗಳು ತುಂಬಾ ಮುದ್ದಾಗಿಕಾಣುತ್ತಿದ್ದವು

ಕ್ರಮೇಣ ವಾತಾವರಣ ತಿಳಿಯಾಗತೊಡಗಿತು ಎಷ್ಟೋಜನರು, ತಮ್ಮ ಮನೆಯತ್ತ ನಡೆದರು ಸೂರಪ್ಪ ಅತ್ತಿತ್ತ ಸುಳಿದು, ಬಂದು "ಸರ್ .ಎಲ್ಲಾ ಫೇಲ್" ಎಂದ ರೋಜಲೀನಾ, ಶಾಂತಿ, ಹೇಮಂತ, ಸೂರಪ್ಪ—ಆ ವಧುವರ ದಂಪತಿಗಳ, ಯಜಮಾನರೊಂದಿಗೆ ಹೊರಗೆ ಬಂದರು ಹೇಮಂತ, ಶಾಂತಿಯೊಂದಿಗೆ ಜೀಪಿನಲ್ಲಿ ಕುಳಿತ. ಮರುಕ್ಷಣ ಕೆಳಗಿಳಿದು—ಟ್ಯಾಕ್ಸಿಗಾಗಿ ಕಾಯ್ತಿದ್ದ ಅವರತ್ತ ನಡೆದು ಕೇಳಿದ

"ಸರ್—ತಮ್ಮ ಅಭ್ಯಂತರವಿಲ್ಲದಿದ್ದರೆ, ನಾನು ನಿಮ್ಮ "ಕಪಲ್ಸ" ಫೋಟೋ ತೆಗೆದುಕೊಳ್ಳಲೇ ?"

"ಓಹ್ ಶೂರ್ ! .. ಅದು, ನನಗೆ ಸಂತಸದ ವಿಷಯ!" ಎಂದ ಆ ವೃದ್ಧ.

ಹೇಮಂತ ಅತ್ತಿತ್ತ ನೋಡಿ—"ಇಲ್ಲಿ ಸಮೀಪದಲ್ಲಿ ಯಾವ ಸ್ಟುಡಿಯೋ ಇಲ್ಲ ದಯವಿಟ್ಟು ತಾವು ನನ್ನ ಜೀಪಿನಲ್ಲಿ ಬನ್ನಿ ಪೇಟೆಯಲ್ಲಿ ಸ್ಟುಡಿಯೋ ಇದೆ, ಅಲ್ಲಿ ಫೋಟೋ ತೆಗೆಯಿಸುತ್ತೇನೆ ಆಮೇಲೆ ನೀವು ಹೋಗಬಹುದು. ಈ ಮುದ್ದಾದ ಜೋಡಿ, ದಿನ ನಿತ್ಯ ನನಗೆ ನೋಡಲು ಸಿಗುತ್ತದೆ ಪ್ಲೀಸ್ ..ಒಪ್ಪಿಕೊಳ್ಳಿ"

ಹೇಮಂತ ಗೋಗರೆದಾಗ, ಅವರು ಒಪ್ಪಿಕೊಂಡರು. ಜೀಪು ಪೇಟೆಯತ್ತ ಓಡತೊಡಗಿತು ಹಾಗೆ ಓಡತೊಡಗಿದ ಜೀಪು—ಬಂದು ನಿಂತಿದ್ದು ಸ್ಟುಡಿಯೋ ಮುಂದೆ ಅಲ್ಲ ..ನಗರದ, ಪೋಲೀಸ್ ಸ್ಟೇಷನ್ ಎದುರು. ಕೋಟ್ ಜೇಬಿನಿಂದ ಪಿಸ್ತೂಲ್ ತೆಗೆದು ಹೇಮಂತ, ಗಂಭೀರವಾಗಿ ಎಚ್ಚರಿಕೆ ನೀಡಿದ.

"ತುಟಿ ಎರಡು ಮಾಡದೆ ನಿಮ್ಮ ನಿಮ್ಮ ನಾಯಿಮರಿಗಳೊಂದಿಗೆ ಕೆಳಗಿಳಿದು ಒಳಗೆ ನಡೆಯಿರಿ."

"ಏಕೆ ? ಏನಾಯಿತು ? ನಾವೇನು ಮಾಡಿದ್ದೇವೆ ?" ಎಂದು ಅವರಿಬ್ಬರೂ

ಹಾರಾಡಿದರು ರೋಜಮೇರಿ ಗಾಬರಿಯಾದರೆ, ಶಾಂತಿ ಅಚ್ಚರಿ ವ್ಯಕ್ತಪಡಿಸಿದಳು

"ಒಳಗೆ ನಡೆಯಿರಿ—ಅಂದರೆ, ನಡೆಯಬೇಕು ಇಲ್ಲದಿದ್ದರೆ ತಿಗದಮೇಲೆ ಒದ್ದು, ಒಯ್ಯಬೇಕಾಗುತ್ತದೆ. ಹುಷಾರ್ !" ಎಂದ ಸೂರಪ್ಪ.

ಬಾಯಿ ಮುಚ್ಚಿಕೊಂಡು, ಅವರು ಒಳನಡೆದರು. ಧನಂಜಯ ಅವರನ್ನು ಸ್ವಾಗತಿಸಲು ಕುಳಿತಿದ್ದ 'ರಿಂಗೋ' ಹಾಗೂ 'ಮಿನ್ನಿ' ಕೊರಳಲ್ಲಿಯ ಪಟ್ಟಿಗಳನ್ನು ಬಿಚ್ಚಲು, ಹೇಮಂತ ಹೇಳಿದಾಗ, ಅವರಿಬ್ಬರೂ ತುಂಬಾ ಹಾರಾಡಿದರು ಹೇಮಂತ ಅಷ್ಟೇ ಶಾಂತ ಚಿತ್ತದಿಂದ ಮಾತನಾಡಿದ.

"ಮಿಸ್ಟರ್ ! ನಿಮ್ಮ ಹೆಸರು ."

"ಅನಿಲ ಕುಮಾರ ಚಟರ್ಜಿ !"

"ಶ್ರೀಮತಿಯವರೇ—ನಿಮ್ಮದು .?"

"ಸ್ಮಿತಾ ಚಕ್ರವರ್ತಿ "

"ಗುಡ್ ! ನಿಮ್ಮಿಬ್ಬರ ಮೇಲೂ, ಡೈಮಂಡ್ ಸ್ಮಗ್ಲ್ ಮಾಡಿದ ಆರೋಪವಿದೆ ಸುಮಾರು, ಒಂದು ಕೋಟಿ ರೂಪಾಯಿಯ ಬೆಲೆ ಬಾಳುವಂತಹುದು, ಅದನ್ನು, ನೀವು ಒಪ್ಪಿಕೊಳ್ಳುತ್ತೀರಾ ?"

- ಸ್ಮಿತಾ ನೆಲಕ್ಕಿಳಿದು ಹೋದಳು, ಆದರೆ ಅನಿಲ ಕುಮಾರ

"ಇದು ಅಪ್ಪಟ ಸುಳ್ಳು ಬೇಕೆಂದರೆ ತಪಾಶಿಸಿ" ಎಂದು ಹಾರಾಡಿದ. ಹೇಮಂತ ನಗುತ್ತಾ, ನುಡಿದ.

ಅದಕ್ಕೇ ನಿಮ್ಮನ್ನು ಇಲ್ಲಿಗೆ ತಂದದ್ದು. ಆದರೆ ನಿಮ್ಮನ್ನು ತಪಾಶಿಸಲು ಅಲ್ಲ ನಿಮ್ಮ-ನಿಮ್ಮ ನಾಯಿಗಳನ್ನು ತಪಾಶಿಸಲು "

ತನ್ನೆದುರು ಯಾವ ನಾಟಕ ನಡೆಯುತ್ತಿದೆ ಎಂಬುದೆ ಧನಂಜಯನಿಗೆ ತಿಳಿಯಲೊಲ್ಲದು. ಒಂದು ಕೋಟಿ ರೂಪಾಯಿ ವಜ್ರದ ಕಳ್ಳವ್ಯಾಪಾರ ಅದೂ ನಾಯಿಯ ಮೂಲಕ. ಅವನಿಗೆ ಹುಚ್ಚು ಹಿಡಿಯುವದೊಂದೇ ಬಾಕಿ ಉಳಿದಿತ್ತು.

ಹೇಮಂತ, ಮೊದಲು ಫೋಟೋ ಗ್ರಾಫರನನ್ನು ಕರೆಯಲು ಸೂಚಿಸಿದ ಆತ ಬರುತ್ತಲೂ, ಅವರವರ ನಾಯಿಮರಿಗಳನ್ನು ಅವರವರ ಕೈಲಿ ಕೊಟ್ಟು, ಒಂದು ಫೋಟೋ ತೆಗೆಸಿದರು. ಅನಂತರ. ಪ್ರತ್ಯೇಕವಾಗಿ ಒಂದೊಂದು ನಾಯಿಯದೂ, ಬೇರೆ-ಬೇರೆ—ಅಲ್ಲಿಗೆ ಫೋಟೋ ಗ್ರಾಫರನಿಗೆ ಸ್ವಲ್ಪ ತಾಳಲು ಹೇಳಿ ಕತ್ತರಿ ತರಿಸಿದ. ಕತ್ತರಿಯಿಂದ ನಾಯಿಗಳ ಕೊರಳಲ್ಲಿದ್ದ ಪಟ್ಟಿ ಕತ್ತರಿಸಿ, ಉದ್ದಕ್ಕೂ ಚರ್ಮದ ಪಟ್ಟಿ ಸೀಳಿಸಿದ ..ಒಂದು ಪಟ್ಟಿಯಲ್ಲಿ

ಸುಮಾರು ನೂರಕ್ಕೂ ಮಿಕ್ಕಿ ವಜ್ರಗಳಿದ್ದರೆ, ಇನ್ನೊಂದು ಪೆಟ್ಟಿಯಲ್ಲಿ ಜಗತ್ತಿನ ಬೇರೆ-ಬೇರೆ ಬ್ಯಾಂಕುಗಳಲ್ಲಿ ಹತ್ತು-ಹತ್ತು ಲಕ್ಷದಂತೆ-ಒಟ್ಟು ಕೋಟಿರೂಪಾಯಿ, ಜಮಾ ಮಾಡಿದ ಪಾವತಿಗಳಿದ್ದವು ಚಟರ್ಜಿ ಹಾಗೂ, ಸ್ಮಿತಾಳನ್ನು ಬಂಧಿಸಲಾಯಿತು. ರೋಜರಿನಾ—"ಇದು ನನಗೆ ಗೊತ್ತೇ ಇರಲಿಲ್ಲ. ಸ್ಮಿತಾ ತಾನಾಗಿ ಬಂದು ನನಗೆ ನಾಯಿಗಳನ್ನು ಅದಲು-ಬದಲು ಮಾಡುವಂತೆ, ನೀನೇ ಸೂಚಿಸು—ಎಂದು ಮೊದಲೇ ಹೇಳಿದ್ದಳು. ಅವಳು ಹಾಗೇಕೆ ಹೇಳಿದಳು ಎಂದು, ನನಗೆ ಆಗ ತಿಳಿದಿರಲಿಲ್ಲ" ಎಂದಳು

"Well-done ಹೇಮಂತ ನಿಜವಾಗಿಯೂ ನೀವು great! ನಿಮ್ಮ ಮಿದುಳಿಗೆ ಅದೆಂತಹ ಶಕ್ತಿಯನ್ನು ಆ ಭಗವಂತ ಕೊಟ್ಟಿದ್ದಾನೋ ತಿಳಿಯದು." ಎಂದು ಹೇಳಿ, ಧನಂಜಯ ಹೇಮಂತನಿಗೆ ಅಭಿನಂದನೆ ಸೂಚಿಸಿದಾಗ, ಶಾಂತಿಯ ಎದೆ, ಮತ್ತಿಷ್ಟು ಹರವಾಯಿತು.

ಶಾಂತಿಯನ್ನು ಮನೆಗೆ ತಲುಪಿಸಿ, ಸೂರಪ್ಪ ಹಾಗೂ ಹೇಮಂತ ಮನೆಗೆ ಬಂದಾಗ, ಆಗಲೇ ಮಧ್ಯಾಹ್ನ ಎರಡು ಗಂಟೆ!

ರಿಮಿ ಜೊತೆ ಆಟವಾಡುತ್ತಾ ಕುಳಿತಿದ್ದ ತರುಣಿಯತ್ತ ದೃಷ್ಟಿ ಹರಿಯುತ್ತಲೂ ಸೂರಪ್ಪ ಬೆಚ್ಚಿಬಿದ್ದ ತಾವೇನಾದರೂ ಮರೆತು ಬೇರೆಕಡೆ ಬಂದಿದ್ದೇವೆಯೇ ?—ಎಂದು ವಿಚಾರಿಸಿದ ಮನೆ ಸರಿಯಾಗಿಯೇ ಇತ್ತು. ಹೇಮಂತನ ಕಡೆ ಹೊರಳಿ—"ಸರ್ ಪೆಟ್ಟಿಗೆ ಬದಲಾಗಿದೆಯಲ್ಲ ...ಈ ಅಮ್ಮಣ್ಣಿ ಯಾರೋ!" ಎಂದು ಗೊಣಗಿದ ಮೊದಮೊದಲು ಹೇಮಂತನಿಗೂ ನಿಜ ವಿಷಯ ಹೊಳೆಯಲಿಲ್ಲ. ಒಮ್ಮೆಲೆ ನೆನಪಾಯಿತು ..

"ಸೂರಪ್ಪ ಅಮ್ಮ ಊರಿಂದ ಬರುವವಳಿದ್ದಳಲ್ಲ, ಅವಳ ಜೊತೆ ಯಾರೋ ಬಂದಿರಬೇಕು" ಎಂದ.

ರಿಮಿಯೊಡನೆ ಆಡುತ್ತಿದ್ದ ಸುಷಮಾ, ಜೀಪನ್ನು ನೋಡುತ್ತಲೂ ಒಳಗೆ ಓಡಿಹೋಗಿ, ಸುದ್ದಿ ಮುಟ್ಟಿಸಿದಳು. ಶಾರದಮ್ಮ ಹೊರಗೆಬಂದು, ಜೀಪಿನಿಂದ ಇಳಿಯುತ್ತಿದ್ದ ಹೇಮಂತನಿಗೆ ಮುನಿಸಿನಿಂದ ಹೇಳಿದರು.

"ಈಗ ಹೊತ್ತಾಯಿತೋ ನಿನಗೆ ..ಕರೆಯಲು ಬರುತ್ತೇನೆ ಎಂದಿದ್ದೆ ... ಬಂದೆಯಲ್ಲ ..."

ಅಮ್ಮನ ಮುನಿಸು, ಹುಸಿಮುನಿಸೆಂದು ಹೇಮಂತನಿಗೆ ಗೊತ್ತು. ಮೊದಲು ಅವಳ ಪಾದಕ್ಕೆ ಮಣಿದು ಹೇಳಿದ ;

"ಅಮ್ಮಾ, ಬರಬೇಕೂಂತ ಹೊರಟ್ಟಿದ್ದೆ.. ಅಷ್ಟರಲ್ಲಿ ಕೇಸೊಂದು ಬಂದಿತು. ಅದಕ್ಕೆ ಹೋಗಬೇಕಾಯಿತು ಅಂತೂ ಬಂದೆಯಲ್ಲ. ಅಂದಹಾಗೆ ಆಕೆ, ಒಳಗೆ

ಹೋದಳಲ್ಲವಮ್ಮಾ ..ಆ ಹುಡುಗಿ ಯಾರು ?" ಮುಗುಳುನಗೆ ಸೂಸುತ್ತ ಶಾರದಮ್ಮ ಕೇಳಿದರು .

"ಏಕೆ ? ಗುರುತುಸಿಕ್ಕಲಿಲ್ಲವಾ ?"

"ಅದ್ಹೇಗೆ ಸಿಕ್ಕುತ್ತೆ ಅತ್ತೆ ?! ಊರಕಡೆ ಬರದೇ, ನಾಲ್ಕು ವರ್ಷಗಳಾದವು.

ಅತ್ತೆ-ಅತ್ತೆ—ಎಂದು ಅಮ್ಮನನ್ನು ಕರೆಯಬೇಕಾದರೆ ಯಾರಿರಬಹುದು ? . ಆಗಲೂ ಹೇಮಂತನ ತಲೆಗೆ, ಅವಳು ಯಾರೆಂದು ಹೊಳೆಯಲಿಲ್ಲ

"ನಿನ್ನ ಪೋಲೀಸ ತಲೆಗೆ ಇನ್ನೂ ಹೊಳೆಯಲಿಲ್ಲವೇನೋ ?—ಗುಗ್ಗೂ" —ಅಮ್ಮ ಮೂದಲಿಸಿದಳು

"ಇನಸಲ್ಟ್ ! ಗ್ರೇಟ್ ಇನಸಲ್ಟ್ ! ..ಸರ್ !" ಎಂದ ಸೂರಪ್ಪ. ಹೇಮಂತ, ತಲೆ ಕೆರೆದುಕೊಂಡ ಪರಪರ ಹೊಳೆಯಲಿಲ್ಲ. ಅವನ ಪರಿಸ್ಥಿತಿ ಕಂಡು, ಕರುಣೆ ಬಂದು ಶಾರದಮ್ಮ ಹೇಳಿದರು.

"ಆಕೆ, ಸುಷಮಾ ಕಣೋ ! ..ನನ್ನ ಅಣ್ಣನ ಮಗಳು "

"ಹೋ .ಹೊ ಸುಷಮಾನೇ !?—ಅಬ್ಬಾ ! ಎಷ್ಟೊಂದು ಬೆಳೆದು ಬಿಟ್ಟಿದ್ದಾಳಲ್ಲ !?—"

"ಹೆಣ್ಣು ಹುಡುಗಿಯರೇ ಹಾಗೆ ಕಣೋ "

"ಅದು ಸರಿ ಅಮ್ಮಾ .ಸುಷಮಾ—ನಿನ್ನ ಜೊತೆ ಏಕೆ ಬಂದಿದ್ದಾಳೆ ?"

"ಯಾಕೆ ಬಂದಿದ್ದಾಳೆ ?! ..ಲೋ, ಹೇಮಂತಾ, ನಾ—ಇಷ್ಟು ಬೇಗ ಬಂದುದಕ್ಕೆ ನೀನು ಹಿಗ್ಗಿ ಹೀರೆಕಾಯಿ ಆಗ್ತಿಯಾ ಅಂದ್ರೆ—ಯಾಕೆ ಬಂದಿದಾಳೆ ಅಂತಿಯಲ್ಲೋ ? ...ಅಲ್ಲೋ—ಗುಗ್ಗು—ನಾನು ಬರದೇ ಇದ್ರೇ—ನಿನ್ನ ಮದುವೇಯಾದ್ರೂ ನಡೆಯುತ್ತಾ ?"

"ಮದುವೆ ಇನ್ನೂ ತುಂಬಾ ದೂರ ಅದಕ್ಕೂ ನಿನಗೂ ಏನು ಸಂಬಂಧ? ...ನೀನೇನು ದೊಡ್ಡ ಮಹಾರಾಣೀನಾ ? ...ನೀನು ಬರದೆ ಇದ್ರೇ, ನನ್ನ ನನ್ನಮದುವೇ ನಿಂತೇ ಹೋಗುತ್ತಾ?" ಹೇಮಂತ ಮೂದಲಿಸಿದ ಸುಷಮಾ ಅಳುಮೊರೆ ಮಾಡಿ, ಚಿಕ್ಕ ಮಗುವಿನಂತೆ ಕಾಲು ಅಪ್ಪಳಿಸುತ್ತಾ :

"ಅತ್ತೇ—ನೋಡಮ್ಮಾ—ಹೇಮಂತ ಹೇಗಂತಾನೇ ?" .. ಎಂದಳು

ಶಾರದಮ್ಮ ಅವರಿಬ್ಬರನ್ನೂ ಸಮಾಧಾನ ಪಡಿಸಿ, "ಒಳಗೆ ಬನ್ನಿ" ಎಂದು ಹೇಳುತ್ತಿದ್ದಂತೆ—ಸುಷಮಾ ಕೇಳಿದಳು.

"ಹೇಮಂತಾ, ನಾನು ನಿನಗೆ ಏನು ತಂದೀದೇನೆ ಗೊತ್ತಾ?"

"ನೀನು ತಂದದು , ನನಗೆ ಹೇಗೆ ಗೊತ್ತಾ? .ನೀನೇ ಹೇಳು ?! " ..

ಬೆನ್ನ ಹಿಂದಿದ್ದ ಕೈಯ್ಯನ್ನು ಸುಷಮಾ ಮುಂದೆ ಮಾಡಿದಳು. ದೊಡ್ಡ ದೊಡ್ಡ ಎರಡು ಸೀಬೆಕಾಯಿಗಳ ಹೇಮಂತ ಅವನನ್ನು ಕಂಡು, ಹುಚ್ಚನಂತಾದ

"ಓಹೋ! .ಸೀಬೆಕಾಯಿ,! ಇವನ್ನು ತಿನ್ನದೆ ಎಷ್ಟೋ ದಿನಗಳಾದವು "

"ತಗೋ ಹಾಗಾದರೆ—ತಿನ್ನು!"

"ಹಾಗೇ, ತಿನ್ನೋದಾ ?"

"ಮತ್ತೆ ಹೇಗೆ ತಿನ್ನೋದು ?"

"ನೀನು—ಲಂಗದಲ್ಲಿ ಕಚ್ಚಿಕೊಡು—ಅಂದ್ರೇ ಅದ್ಕೆ ತುಂಬಾ ರುಚಿ ಬರೋದು ?!"

ಸುಷಮಾ ನಾಚಿ ಮುದ್ದೆಯಾದಳು. ಹೇಮಂತ ಇನ್ನೂ ತನ್ನನ್ನು ಮರೆತಿಲ್ಲ!. ..ಅನ್ನುವುದು ಅವಳಿಗೆ ಖಾತ್ರಿಯಾಯಿತು. ಸೀಬೆಹಣ್ಣನ್ನು ಲಂಗದಲ್ಲಿ ಸುತ್ತಿ ಕಚ್ಚಿ ತುಂಡು ಮಾಡಿದಳು. ಒಂದು ತುಂಡು, ತಾನು ತೆಗೆದುಕೊಂಡು, ಹೇಮಂತ, ಮತ್ತೊಂದನ್ನು ಅವಳಿಗೆ ಕೊಟ್ಟು, ಬಾಯಿಂದ ಕಚ್ಚಿ ಕುರುಂ-ಕುರುಂ, ತಿನ್ನುತ್ತಾ, "ಓಹ್! ಎಷ್ಟು ರುಚಿಯಾಗಿದೆ" ಎಂದ, ಜೋರಾಗಿ.

ಮತ್ತೊಮ್ಮೆ ಸುಷಮಾಳ ಮುಖದ ಮೇಲೆ ಕೆಂಪು ಬಣ್ಣ ಹರಡಿತು :

"ಒಳಗೆ ಬರ್ತೀರೋ—ಅಲ್ಲೇ ನಿಲ್ತೀರೋ, ಮಾತಾಡ್ತಾ" ಎಂದು ಅಮ್ಮ ಕೂಗಿದಳು

"ಓಹ್ ಅಮ್ಮಗೆ ಕೋಪ ಬಂದಿದೆ ಬಾ—" ಹೇಮಂತ ಸುಷಮಾಳ ಕೈ ಹಿಡಿದು, ಒಳಗೆ ಎಳೆದೊಯ್ದು. ಅವರು ಹೋಗುವುದನ್ನೇ ನೋಡುತ್ತಾ ನಿಂತಿದ್ದ ಸೂರಪ್ಪ ತನ್ನಷ್ಟಕ್ಕೆ ತಾನೇ ಗೊಣಗಿಕೊಂಡ.

"ಸಾಹೇಬರ ವ್ಯವಹಾರ ಯಡವಟ್ಟಾಗಿದೆ. ಆ ಕಡೆಗೂ ಗಾಡಿ ಬಿಡ್ತಿದಾರೆ! ಈ ಕಡೆಗೂ ಬಿಡ್ತಿದಾರೆ. ಮಧ್ಯೆ ಎರಡೂ ಗಾಡಿ ಎದುರು-ಬದುರಾಗಿ ಆಕ್ಸಿಡೆಂಡ್ ಆದರೆ, ಮುಂದೆ ಗತಿ ?!"

# ಎಂಟು

ಸುಷಮಾಳ ಪಾಲಿಗೆ ಬಾಲ್ಯದ ದಿನಗಳು ಮತ್ತೆ ವಾಪಸ್ ಬಂದಿದ್ದವು ಹೇಮಂತನ ಕೈ ಹಿಡಿದುಕೊಂಡೇ ಮನೆತುಂಬ ಓಡಾಡಿದಳು. ಪಾರ್ಕ್‌ನಲ್ಲಿ ಸುತ್ತಿದಳು ಎಲ್ಲಿಹೋದರೂ ಹೇಮಂತನೇ! ಹೇಮಂತ! ಹೇಮಂತನಿಗೂ ಅಷ್ಟೇ!—ಅವನು ಚಿಕ್ಕವನಿದ್ದಾಗ, ನಡೆದಿದ್ದ ಘಟನೆಗಳು ಒಂದೊಂದಾಗಿ, ನೆನಪಿಗೆ ಬರತೊಡಗಿದವು ಗುಡ್ಡ ಹತ್ತಿದ್ದು, ನದಿ ದಂಡೆಗುಂಟ ಓಡಿದ್ದು—ಸೀಬೆ ಮರ ಹತ್ತಿ ಹಣ್ಣು ಕಿತ್ತಿದ್ದು—ಒಂದುದಿನ ಸೀಬೆ ಮರದಿಂದ ಬಿದ್ದು, ಪೆಟ್ಟು ತಿಂದಾಗ, ಅವನಿಗಿಂತ ಹೆಚ್ಚು ಜೋರಾಗಿ, ಸುಷಮಾನೇ ಅತ್ತಿದ್ದು,—ಎಲ್ಲಾ ನೆನಪಾಗಿ, ಅವನಿಗೆ—ನಗೆ ಬಂದಿತು ಜೋರಾಗಿ ನಕ್ಕುಬಿಟ್ಟ ..ತಾನು, ತಿಂಡಿ ತಿನ್ನುತ್ತಾ, ಅಡಿಗೆ ಮನೆಯಲ್ಲಿ ಕುಳಿತಿದ್ದಾನೆ—ಅನ್ನುವುದೇ ಅವನಿಗೆ ಮರೆತುಹೋಗಿತ್ತು. ಬೆಚ್ಚಿಬಿದ್ದ ಅಮ್ಮ ಕೇಳಿದಳು.

"ಏಕೋ .ಏನಾಯ್ತು?—ಹುಚ್ಚನಂತೆ ಒಬ್ಬನೇ ನಗ್ತಾ ಇದೀಯಾ?"

"ಏನೂ ಇಲ್ಲವಮ್ಮಾ—ಏನೋ ನೆನಪಾಯ್ತು?"

"ಏನೋಪ್ಪಾ, ನನಗೊಂದೂ ಅರ್ಥವಾಗಲೊಲ್ಲದು ."

"ಏನೂ ಇಲ್ಲವಮ್ಮಾ ಚಿಕ್ಕವನಿದ್ದಾಗ, ಸೀಬೆಯ ಮರದಿಂದ ಬಿದ್ದದ್ದು ನೆನಪಾಯಿತು. ಆಗ ಈ ಸುಷಮಾ ನನಗಿಂತ ಜೋರಾಗಿ, ತಾನೇ ಅತ್ತಿದ್ದಳು."

ಈಗ ನಗುವ ಸರದಿ ಅಮ್ಮನದು ಸುಷಮಾ ನೆಲದಲ್ಲಿ ಮುಖ ಹುದುಗಿಸಿದಳು. ನಗು ನಿಲ್ಲಿಸಿ, ಶಾರದಮ್ಮ ಕೇಳಿದಳು "ಏನೋ? ಅದೆಲ್ಲಾ ನಿನಗಿನ್ನೂ ನೆನಪಿದೆಯಾ?"

"ಚೆನ್ನಾಗಿ ಇದೆಯಮ್ಮಾ .ಅದೆಂತು ಮರೆಯಲಿ ಹೇಳು?!"

"ಹೂಂ ..ಹೂಂ ... ಅದೆಲ್ಲಾ ಚೆನ್ನಾಗಿ ನೆನಪಿದೆ ಆದ್ರೇ ಆದ್ರೇ .. ಯಾರಿಂದ ಅನ್ನೋದೇ ಮರೆತು ಹೋಗಿದೆ"

"ಹಾಗೇನೂ ಇಲ್ಲ ಸುಷಮಾ?!—ನಿನ್ನನ್ನು ನಾನೆಂದು ಮರೆತಿಲ್ಲ .. ನೀನು ನನ್ನಿಂದ ಎಷ್ಟು ದೂರವಿದ್ದರೂ, ನಿನ್ನ ನೆನಪು ಮಾಸಿಲ್ಲ ನನ್ನ ಮನದಲ್ಲಿ ನೀನು ಶಾಶ್ವತವಾಗಿ, ಉಳಿದುಕೊಂಡಿದ್ದೀಯಾ?!"

ಹೇಮಂತನ ಮಾತು ಕೇಳುತ್ತಿದ್ದಂತೆ, ಸುಷಮಾಳ ಎದೆ, ಮನ—ಎರಡೂ "ಜುಂ" ಎಂದವು. ಓಹ್! ದೇವರೇ! . ನಾನೆಷ್ಟು ಭಾಗ್ಯವಂತೆ!

. ." ಎಂದುಕೊಂಡಳು ಮನದಲ್ಲಿ .

ಕಾಫಿ ಕುಡಿದು ಎದ್ದು ನಿಂತ ಹೇಮಂತ

"ಅಮ್ಮಾ, ಸ್ವಲ್ಪ ಪೇಟೆಕಡೆ ಹೋಗಿ ಬರುತ್ತೇನೆ."

"ಹಾಗೇ ಜೊತೆಯಲ್ಲಿ ಸುಷಮಾಳನ್ನು ಕರೆದುಕೊಂಡು ಹೋಗೋ .. ಪಾಪ! ಅವಳಿಗೂ ಬೇಜಾರು ಆಗಿರಬೇಕು. "

"ಅವಳಿಗೆಲ್ಲಮ್ಮಾ ಕರೆದುಕೊಂಡು ಹೋಗೋದು? ಮನೆಯಲ್ಲಿಯೇ ಸಾಕಷ್ಟು ಪೀಡಿಸುತ್ತಾಳೆ ಹೊರಗೆ ಹೋದರೇ "

"ಸಾಕು—ಸುಮ್ನಾಗೋ! ಏನೂ ಆಯದ ಮಗೂಗೇ ."

"ಇದೇನಮ್ಮಾ ನೀನು ಹೇಳ್ತಾ ಇರೋದು? ಹೊಟ್ಟೆಯಲ್ಲಿ ಹೆತ್ತ ಮಗನ್ನ ಬದಿಗಿಟ್ಟು, ಈ ಗಂಡುಬೀರಿನ್ನ ಹೊಗಳ್ತೀಯಾ?! .."

"ಹೌದು ಕಣೋ! . .ಈ ಗಂಡು ಬೀರಿಯೇ ಈ ಮನೆಗೆ ಸೊಸೆಯಾಗಿ ಬಂದು, ನಿನಗೆ ಅಂಕುಶ ಹಾಕೋಳು—ಅಂತ ಅಮ್ಮನಿಗೆ ಚೆನ್ನಾಗಿ ಗೊತ್ತಿದೇ—ಅದಕ್ಕೆ "

ಮಧ್ಯೆಬಾಯಿಹಾಕಿ ಸುಷಮಾ ನುಡಿದಾಗ ಹೇಮಂತ ಅಬ್ಬರಿಸಿದ

"ಸಾಕು ಬಾಯಿ—ಮುಚ್ಚೇ—ಗಂಡುಬೀರಿ! ನಿನ್ನನ್ನಾರು ಕೇಳಿದ್ದು? ಅಮ್ಮ-ಮಗ ಮಾತನಾಡುವಾಗ ಮಧ್ಯೆ ಬರಲಿಕ್ಕೆ ನೀನಾರೇ?"

"ನನ್ನ ಕೇಳೋ ನಾ ಹೇಳ್ತೀನಿ!—ಅಕೆ ನನ್ನ ಸೊಸೆ ಆಳಿತೇನೋ? ....ನಿನ್ನ ಮದುವೆಯಾಗೋಳು!"

"ಏನಮ್ಮಾ ನೀನು ಹೇಳ್ತಾ ಇರೋದು...ಇವಳು ನಿನ್ನ ಸೊಸೇನಾ? Impossible ಅದೆಂದೂ ಸಾಧ್ಯವಿಲ್ಲ "

"cent percent ನಾನೆ ಮನೇಗೆ ಸೊಸೇನೋ!"

"ಏನೇ ಗಂಡುಬೀರಿ—ನನ್ನ ಜೊತೆ ಬೆಟ್ ಕಟ್ತೀಯಾ?"

"ಹೌದೊಲೋ ಗಂಡಸು ..ಬೆಟ್ ಕಟ್ತೀನೀ!"

"ಹಾಗಾದರೆ ಆಗೇ ಹೋಗಲೀ ಕಟ್ಟು ಬೆಟ್!"

"ನಾನು ಈ ಮನೆಗೆ ಸೊಸೆಯಾಗಿ ಬಂದ್ರೆ, ನೀನು ನನಗೆ ಒಂದು ಸೀಬೇಕಾಯಿ ಕೊಡಬೇಕು ..ಬರದೇ ಹೋದ್ರೆ—'ನಾನೇ' ನಿನಗೆ ಒಂದು ಸೀಬೇಕಾಯಿ ಕೊಡ್ತೇನೆ—ಆಯ್ತಾ?!"

"O K"

"ಪ್ರಾಮಿಸ್?"

"ಪ್ರಾಮಿಸ್!"

ಅವರಿಬ್ಬರ ಬೆಟ್—ಸಂದ್ಯ ಕಂಡು, ಹೊಟ್ಟೆ—ಹುಣ್ಣಾಗುವಂತೆ ನಕ್ಕಳು ಶಾರದಮ್ಮ ಹೇಮಂತ ಹೊರಟು ನಿಂತಾಗ, ಮತ್ತೆ ಸುಷಮಾ ಕರೆದಳು

"ಆರೆರೆರೆ .ಒಬ್ಬನೇ ಹೊರಟೆಯಲ್ಲ ?—ನನ್ನನ್ನೂ ಜೊತೆಯಲ್ಲಿ ಕರೆದು ಕೊಂಡು ಹೋಗು ಅಂತ ಹೇಳಲ್ವೇ ? ತಾಳು—ನಾನೂ, ಆಮೇಲೆ ನೀನೂ —ನನ್ನನ್ನ ತಿರುಗಾಡೋಕೆ ಕರೆದೊಯ್ಯುತ್ತೀ ಇಲ್ಲವೋ ?—ತಿಳಿಯದು"

"ಏಕೆ ಬೆಟ್—ಸೋಲೋ ಭಯನಾ ?"

"ಬೆಟ್ !—ಸೋಲೋ ಭಯ ಅಲ್ಲ ..ನಿನ್ನಂಥ ಕೆಲ ಹುಡುಗರು, ಮದುವೇಗೆ ಮುಂಚೇನೇ ಈ ತರಹ ರೊಮಾನ್ಸ್ ಮಾಡಿ ಮುಗಿಸಿ, ಮದುವೆ ಯಾದ ಕೂಡಲೇ, ಮುದುಕರಾಗಿ ಬಿಡ್ತಾರೆ. ನೀನೂ, ಆದೇ ತರಹ ಎಲ್ಲಿ ಮಾಡ್ತೀಯೋ "

"ಒಂದು ಹಾಕ್ತೇನೆ ನೋಡು "

ಹೇಮಂತ ಕೈ ಎತ್ತಿದ "ಅಮ್ಮಾ" ಎಂದು ಕಿರುಚಿದಳು ಸುಷಮಾ. ಅಲ್ಲಿಯೇ ಇದ್ದ ಶಾರದಮ್ಮ·

"ಏನೋ ?—ಹೆಂಡ್ತಿ ಆಗೋಳಮೇಲೆ ಕೈಯೆತ್ತೀ ಏನೋ ?"

"ಅದೂ ಮದುವೆಗೆ ಮುಂಚೆ ? !—ಮದುವೆ ಆದಮೇಲೆ ಪರವಾಗಿಲ್ಲ . ಚೆನ್ನಾಗಿ ಹೇಳಮ್ಮಾ ಇವನಿಗೆ "

"ಹೊ ಹೊ ಹೋ"—ನನಗಂತೂ ಹುಚ್ಚು ಹಿಡೀತಾ ಇದೆ ನೀವಿಬ್ರೂ ಸೇರಿಕೊಂಡು, ನನ್ನ ತಲೆ ಕೆಡಿಸ್ತಾ ಇದೀರಾ ! ...ನಾನು ಖಂಡಿತವಾಗಿಯೂ ಹೇಳ್ತೀನೆ—ನಾನವಳನ್ನು—ಈ ಗಂಡುಬೀರಿಯನ್ನು—ಮದುವೆ ಆಗೋಲ್ಲ ....ನಾನು ಮದುವೆ ಆಗೋದು ಬೇರೆ ಹುಡುಗಿನ್ನೇ ..."

"ಒಂದು ವೇಳೆ ನೀನು—ಹಾಗೇನಾದ್ರೂ ಮಾಡಿದ್ರೇ, ನಾನವಳ ರಕ್ತ ಕುಡಿದು ಬಿಡ್ತೀನೆ—ತಿಳೀತಾ ?"

"ಆಯ್ಯೋ ! ...ಆಯ್ಯೋ ..ನೀನು ಹೆಣ್ಣೇನೇ ! ? ನಿನ್ನ ನಾನು ಬರೀ ಗಂಡು ಬೀರಿ ಅಂದೆ. ಅಲ್ಲ ..ಅಲ್ಲ ನೀನು ಗಂಡುಬೀರಿ ಅಲ್ಲ ನೀನು ರಕ್ಕಸಿಕಣೇ ! ರಕ್ತಕುಡಿಯುವ ಹೆಣ್ಣ ರಕ್ಕಸೀ !. ಅದ್ಯಾವ ಪುಣ್ಯಾತ್ಮ ನಿನ್ನ ಮದುವೆ ಆಗ್ತಾನೋ—ಆ ದೇವರೇ ಬಲ್ಲ ! .."

"ಆ ಭಾಗ್ಯ ಇರೋದು ನಿನಗೊಬ್ಬನಿಗೇ ಕಣೋ ! ನಿನ್ನ ಬಿಟ್ಟು ಬೇರೆ ಯಾರಿಗೂ ಇಲ್ಲ !"

'ಉಷ್' ಎಂದೆನ್ನುತ್ತ ಕೆನ್ನೆಗೆ ಕೈ ಹೊತ್ತು ಕುಳಿತು ಬಿಟ್ಟ ಹೇಮಂತ.

ಶಾರದಮ್ಮ ಗದರಿದರು.

"ಏನು ತಲೆ ಹರಟೆ .?—ಪೇಟೆಗೆ ಹೋಗೋದಾದ್ರೆ ಹೋಗಿ ಬನ್ನಿ ಬೇಗ ಬೇಗ !, ..ಊಟದ ಹೊತ್ತಿಗೆ ಬಂದುಬಿಡಿ."

ಹೇಮಂತ ಮೇಲೆದ್ದ. ಸುಷಮಾ ಹಿಂಬಾಲಿಸಿದಳು.

ಪೇಟೆಯಲ್ಲೆಲ್ಲಾ ಸುಷಮಾಳದೇ ಕಾರುಭಾರ. ಅವಳು ಹೇಳಿದ್ದೇ ಅವನು ತೋರಿಸಿದ್ದೇ—ತೆಗೆಯಬೇಕು ಚಿಕ್ಕ ಪುಟ್ಟ ಸಾಮಾನು ಕೊಳ್ಳುವ ದಾಯ್ತು. ತಲೆ ತುಂಬ ಹೂ ಮುಡಿದದ್ದಾಯ್ತು. ಕೊನೆಗೆ ಕಾಫಿ ಕುಡಿದ ರಾಯ್ತು ಎಂದು ಹೋಟೆಲ್ ಪ್ರವೇಶಿಸಿದರು ತಿಂಡಿ ತಿನ್ನುತ್ತಾ ಸುಷಮಾ ಎದುರಿಗೇ ಕಾಣುತ್ತಿರುವ ಟಾಕೀಸಿನತ್ತ ದೃಷ್ಟಿ ಹರಿಸಿದಳು ಆಕರ್ಷಕ ಬಣ್ಣದಿಂದ ಬರೆದ ಬ್ಯಾನರು. ನಾಲ್ಕಾರು ಚಿತ್ರಗಳು ಅವಳು ಸಿನಿಮಾ ನೋಡದೇ ಬಹಳ ದಿನಗಳಾಗಿದ್ದವು. ಇಂದು ಹೇಮಂತನೊಂದಿಗೆ ನೋಡ ಬೇಕೆಂಬ ಹುಬಲ ಗರಿಗೆದರಿ ಹಾಡಿತು ಕಾಫಿ ಕುಡಿಯುತ್ತಾ,

"ಲೋ ಹೇಮಂತಾ, ಪಿಕ್ಚರ್ ತೋರಿಸ್ತೀ ಏನೋ ?" ಎಂದು ಕೇಳಿದಳು. ಕಾಫಿ ಕುಡಿದು ಬರಿದಾದ ಕಪ್ಪು ಕೆಳಗಿರಿಸುತ್ತಾ ಹೇಮಂತ ಬೆಚ್ಚಿ ಕೇಳಿದ.

'ಏನೇ—ಇಂದು, ನಿನ್ನ ಬಯಕೆ ಜೋರು ಆಗ್ತಾ ಇದೆ? ಏನು ವಿಶೇಷ? ಎಷ್ಟು ತಿಂಗಳು?"

"ಒಂದು ಕೊಡ್ತೇನೆ ನೋಡು ಸಿನಿಮಾಕ್ಕೆ ಹೋಗೋಣಾಂದ್ರೇ ಏನೇನೋ ಹರಟ್ತೀಯಾ ?"

"ನೊಂದ್‌ಕೋ ಬೇಡ್ವೇ ? ಬೆಳಗ್ನಿಂದ ನೀನೊಂದು ಥರಾ ಇದೀಯಾ ? ಮೇಲಿಂದ ಮೇಲೆ ಏನೇನೋ ಕೇಳ್ತಿದೀಯಾ ಅದಕ್ಕೇ ಕೇಳಿದ್ದು .ಇರಲಿ ಮೇಲೇಳು ಹೊತ್ತಾಗತ್ತೆ ಅಮ್ಮಾ ದಾರಿ ಕಾಯ್ತಾ ಇರ್ತಾಳೆ."

"ಪಿಕ್ಚರ್ ಬೇಡವಾ ?"

"ಅಮ್ಮಾ ದಾರಿ ಕಾಯ್ತಾ ಇರ್ತಾಳೇಂದ್ರೇ ಕೇಳಲಿಲ್ಲವಾ ? ಮತ್ತೆ ನಾಳೆ ನೋಡಿದರಾಯ್ತು ! ..ಏಳು ಮೇಲೆ!" ಸುಷಮಾಗೆ ಮನಸ್ಸಿಲ್ಲ. ಅವನ ಬಲವಂತಕ್ಕೆ ಏಳಬೇಕು ಅನ್ನುವಷ್ಟರಲ್ಲಿ ..

"ಹಾಯ್ ಹೇಮಂತ ! ಎಂಬ ನಾರೀ ಕಂಠ ಕೇಳಿಸಿತು. ಹೇಮಂತ ಆ ಕಡೆ ಹೊರಳಿ "ಹಲೋ ! ..ಶಾಂತೀ ..ಹೇಗಿದೀಯ ?" ಎಂದು ಕೇಳಿದ ಹುರುಪಿನಿಂದ. ಸುಷಮಾಗೆ ಕಸಿವಿಸಿಯಾಯಿತು. ಶಾಂತಿಯತ್ತ ನೋಡಿದಳು. ಅವಳು ಸೌಂದರ್ಯವತಿ ಎನಿಸಿದರೂ ಅದರೊಂದಿಗೇ ನಾನೇನು ಕಡಿಮೆ ಎಂದುಕೊಂಡಳು ಮನದಲ್ಲಿ !

ಧಡಧಡ ಬಂದ ಶಾಂತಿ, ಗಪ್ ಎಂದು, ಒಮ್ಮೆಲೇ ನಿಂತುಬಿಟ್ಟಳು. ಅಲ್ಲಿಯವರೆಗೂ ಅವಳು, ಸುಷಮಾಳನ್ನು ಗಮನಿಸಿರಲಿಲ್ಲ. ತನ್ನತ್ತಲೇ ನೋಡುತ್ತಿರುವ ಆ ಸ್ನಿಗ್ಧ ಸೌಂದರ್ಯದ ಪುತ್ಥಳಿಗೆ ಆಕೆ ಮಾರು ಹೋದಳು. ಬೊಂಬೆಯಂತೆ ನಿಂತಿದ್ದ ಶಾಂತಿಯ ಬೆನ್ನಮೇಲೊಂದು ಗುದ್ದಿ, ಹೇಮಂತ ಹೇಳಿದ

"ಏಕೆ? ಹಾಗೆ ನಿಂತುಕೊಂಡೆ?—ಕುಳಿತುಕೊ." ಹೇಮಂತ ಅಷ್ಟು ಸಲಿಗೆಯಿಂದ ಶಾಂತಿಯ ಬೆನ್ನಮೇಲೆ ಬಾರಿಸಿದ್ದು, ಶಾಂತಿಗೆ ಸರಿಬರಲಿಲ್ಲ. ಮುಖ ಕಿವುಚಿದಳು ಸಂಕೋಚದಿಂದ ಶಾಂತಿ, ಎದುರಿಗಿದ್ದ ಕುರ್ಚಿಯ ಮೇಲೆ, ಕುಳಿತುಕೊಳ್ಳುತ್ತಿದ್ದಂತೆ, ಹೇಮಂತ, ಅವರಿಬ್ಬರಿಗೂ ಪರಿಚಯ ಮಾಡಿಸಿಕೊಟ್ಟ.

"ಇವಳು ಸುಷಮಾ. ನನ್ನ ಸೋದರ ಮಾವನ ಮಗಳು"

"ಆಂ? ಏನೆಂದೆ?" ಗಾಬರಿಯಿಂದ ಶಾಂತಿ ಕೇಳಿದಳು.

"ಹೇಮಂತ ಸೋದರ ಮಾವನ ಮಗಳು ಅಂದರೆ, ಮುಂದೆ, ನಾನಿವನ ಹೆಂಡತಿಯಾಗುವವಳು ಎಂದರ್ಥ. .ಈಗಲಾದರೂ ತಿಳಿಯಿತಾ?!"

ಮಧ್ಯೆ ಬಾಯಿ ಹಾಕಿ ನುಡಿದ ಸುಷಮಾಳ ಮಾತಿಗೆ ಶಾಂತಿ ಜರ್ರ್ ಎಂದು ಭೂಮಿಗಿಳಿದು ಹೋದಳು. ಅವಳ ಮುಖ ಬಿಳಿಚಿಕೊಂಡಿತು. ಹೇಮಂತನಿಗೆ ಸುಷಮಾಳ ಮೇಲೆ ತುಂಬಾ ಕೋಪಬಂತು.

"ಏನೇ ಗಂಡು ಬೀರಿ? ಎಲ್ಲಾಕಡೆ ನಾನೇ ನಿನ್ನ "ಗಂಡ" ಅಂತ ಟಾಂ ಟಾಂ ಹೊಡೀತಾ ಇದೀಯಲ್ಲಾ, ನಿನಗೆ ಸ್ವಲ್ಪವಾದರೂ ನಾಚಿಕೆ ಬೇಡವೆ?"

"ಗಂಡಾ ಆದವನಿಗೆ ಗಂಡ ಆಗುವವನು ಅಂತ ಹೇಳಲಿಕ್ಕೆ ಏತರ ನಾಚಿಕೆ?!"

"ಯಾರೇ ನಿನಗೆ—ನಾನು ನಿನ್ನ ಮದುವೆ ಮಾಡ್ಕೋತೀನೆ ಅಂತ ಹೇಳಿದ್ದು. ನಾನೇನೂ ಹೇಳಿಲ್ಲ ಚೆನ್ನಾಗಿ ನೆನಪಿನಲ್ಲಿಟ್ಟುಕೊ ಪ್ರಾಣ ಹೋದ್ರೂ ನಾ ನಿನ್ನ ಮದುವೆಯಾಗೊಲ್ಲ!"

"ಹೇಮಂತ! ನೀನು ಚೆನ್ನಾಗಿ ನೆನಪಿನಲ್ಲಿಟ್ಟುಕೋ ಪ್ರಾಣಹೋದ್ರೂ, ನಾ ನಿನ್ನ ಬಿಡೋಲ್ಲ ..ಮದುವೆ ಆಗೇ ಆಗ್ತೀನಿ!"

ಅವರಿಬ್ಬರ ಸಂಭಾಷಣೆಗೆ ಶಾಂತಿಯ ಪ್ರಾಣ ಹೋದಹಾಗಾಯಿತು. ವಿಷಯವೇನು ಎಂಬುದೇ, ತಿಳಿಯದಂತಾಯಿತು. ಇಷ್ಟು ದಿವಸ ಹೇಮಂತ ನನ್ನೇ ತನ್ನ ಆರಾಧ್ಯದೈವವೆಂದು ತಿಳಿದ ಆಕೆಗೆ, ಇಂದು ಬರಸಿಡಿಲೊಂದು ಎರಗಿದಂತಾಯಿತು. ಅವಳ ಪರಿಸ್ಥಿತಿ ಕಂಡು, ಹೇಮಂತ ಗಲಿಬಿಲಿಗೊಂಡ.

ಎದ್ದು ಹೋಗಿ, ಶಾಂತಿಯ ಪಕ್ಕದ ಕುರ್ಚಿಯಲ್ಲಿ ಕುಳಿತು,

"ಇವಳ ಮಾತಿಗೆ ನೀನೇನೂ—ತಪ್ಪುತಿಳಿಯಬೇಡ. ಇವಳ ಸ್ವಭಾವವೇ ಹೀಗೆ ಯಾವಾಗಲೂ ನನ್ನ ಜೊತೆ ಜಗಳ ಕಾಯ್ತಾಳೆ ..ಇರಲೀ, ಕಾಫಿ ತಗೋತೀಯಾ ? ತಿಂಡಿ ಏನು ಬೇಕು ?"

"ಯಾವುದೂ ಬೇಡ ಹೇಮಂತ ಏನೋ ಮನಸ್ಸು ಸರಿಯಾಗಿಲ್ಲ. ನಾನಿನ್ನು ಬರ್ತೀನೆ!"

ಶಾಂತಿ ಮೇಲೆದ್ದಾಗ, ಅವಳ ಭುಜ ಹಿಡಿದು ಹೇಮಂತ ಅವಳನ್ನು ಮೆತ್ತಗೆ ಕೆಳಗೆ ಕುಳ್ಳಿರಿಸಿದ. ಸುಷಮಾಳ ಹೃದಯದಲ್ಲಿ ಚೂರಿಯಿಂದ ಇರಿದಂತಾಯಿತು. ಹೇಮಂತ, ಶಾಂತಿಯನ್ನು ಸಮಾಧಾನ ಪಡಿಸುತ್ತಾ ಕೇಳಿದ.

"ಏಕೆ ಶಾಂತಿ—?—ಏನಾಗಿದೆ ? ಏಕೆ ಬಂದಿದ್ದೆ ಹೇಳು ?"

ಅಷ್ಟರಲ್ಲಿ ಶಾಂತಿ ಸುಧಾರಿಸಿಕೊಂಡಿದ್ದಳು

"ಏನಿಲ್ಲ! ತುಂಬಾ ಬೇಜಾರಾಗಿತ್ತು. ಯಾವುದಾದರೂ ಪಿಕ್ಚರ್‌ಗೆ ಹೋಗೋಣಾಂತ ಬಂದೆ ಆದರೆ ?"

"ಓಹ್ ! ಇಷ್ಟೇನಾ ? ಪಿಕ್ಚರ್ ತಾನೇ ?—

ಹೋಗೋಣ ನಡೀ ! ."

ಸುಷುಮಾಳಿಗೆ ದಿಗ್ಭ್ರಮೆ ಒಂದು ನಿಮಿಷದ ಹಿಂದೆ, 'ಅಮ್ಮ ಕಾಯ್ತಿರ್ತಾಳೆ ..ಬೇಡ'—ಅಂದವನು, ಈಗ ಅವಳಿಗೆ ತಡೆಯಲಾಗಲಿಲ್ಲ.

"ಆದ್ರೇ—ಮನೆಯಲ್ಲಿ ಅಮ್ಮ ಕಾಯ್ತಾ ಇರ್ತಾರೆ" ಎಂದಳು.

"ಏನಾಯಿತು ! ಒಂದು ಫೋನ್ ಮಾಡಿದರಾಯ್ತು" ಎನ್ನುತ್ತಾ, ಮೇಲೆದ್ದ ಹೇಮಂತ.

"ಶಾಂತೀ ! ಒಂದು ನಿಮಿಷದಲ್ಲಿ ಬಂದು ಬಿಟ್ಟೆ" ಎಂದು ಹೇಳಿದವನೇ, ಫೋನಿದ್ದ ಕೌಂಟರ್ ಕಡೆಗೇ ಓಡಿದ.

ಸುಷಮಾಳ ಒಡಲಿನಲ್ಲಿ ಬೆಂಕಿ ಹೊಳೆ ಹರಿದಂತಾಯ್ತು.

ಅದೇ ಟಾಕೀಸು ! ಅದೇ ಸಿನಿಮಾ ! ಕ್ಷಣದ ಹಿಂದೆ ಬೇಡ ಅಂದವನು, ತನ್ನ ಹೊಟ್ಟೆ ಉರಿಸೋಕ್ಕೆ ಈ ರೀತಿ ಮಾಡ್ತಿದಾನೆ. ಇರಲಿ . ಇರಲೀ . ಮನೆಗೆ ಹೋದ ತಕ್ಷಣ, ಅಮ್ಮನಿಗೆ, ಹೇಳಿ, ಸರಿಯಾದ ಶಾಸ್ತಿ ಮಾಡಿಸ್ತೀನೆ —ಎಂದುಕೊಂಡಳು—ಸುಷಮಾ ಮನದಲ್ಲಿ ಮೂವರೂ ಟಾಕೀಸು ಪ್ರವೇಶಿಸಿದರು.

ಮಧ್ಯೆ ಹೇಮಂತ, ಎಡಕ್ಕೆ ಸುಷಮಾ ಬಲಕ್ಕೆ ಶಾಂತಿ! ಸಿನಿಮಾ

ಪ್ರಾರಂಭವಾಯಿತು. ದೃಶ್ಯಗಳು ಓಡಲಾರಂಭಿಸಿದವು ಹೇಮಂತ, ಶಾಂತಿ ಯೊಂದಿಗೆ ಸಲಿಗೆಯಿಂದ ಮಾತನಾಡುತ್ತಾ. ಅವಳತ್ತ ಬಾಗಿ, ಹಾಸ್ಯದ ಚಟಾಕಿ ಹಾರಿಸಿದನು. ರೋಸಿ ಹೋದ ಸುಷಮಾ ಅವನತ್ತ ಎಳೆದು ಕೊಂಡಳು. ಹೇಮಂತ, ಸುಷಮಾಳ ಕಡೆ ವಾಲುತ್ತಲೇ—ಶಾಂತಿ ಅವನ ರಟ್ಟೆ ಹಿಡಿದು, ತನ್ನ ಕಡೆ ಎಳೆದುಕೊಳ್ಳುತ್ತಿದ್ದಳು. ಪಿಕ್ಚರ್ ಮುಗಿಯುವ ವರೆಗೂ, ಈ ನಾಟಕದಲ್ಲಿ ಹೇಮಂತ ಸುಸ್ತಾದ

ಪಿಕ್ಚರ್ ಮುಗಿದು ಆತ ಹೊರ ಬಂದಾಗ, ನಿಟ್ಟುಸಿರು ಬಿಟ್ಟು, 'ಬದುಕಿದೆಯಾ ಬಡ ಜೀವವೇ' ಎಂದುಕೊಂಡು, ದೇವರಿಗೆ ನೂರು-ನೂರು ನಮಸ್ಕಾರ ಹೇಳಿದ. ಶಾಂತಿಯನ್ನು ಅವಳ ಕಾರಿನವರೆಗೆ ಕಳಿಸಲು ಬಂದ ಹೇಮಂತ. ಸುಷಮಾ ನಿರ್ವಾಹವಿಲ್ಲದೇ, ಅವನನ್ನೂ ಹಿಂಬಾಲಿಸಿದಳು. ಕಾರ್ ಸ್ಟಾರ್ಟ್ ಮಾಡಿದ ಶಾಂತಿ, ಹೇಮಂತನ ಕಡೆ ಹೊರಳಿ—"ಹೇಮಂತಾ ನಾಳೆ ನನ್ನ ಹುಟ್ಟಿದ ಹಬ್ಬ ಸಂಜೆ ಮನೆಗೆ ಬರಬೇಕು" ಎಂದು ಹೇಳಿ, ಸುಷಮಾಳ ಕಡೆ ನೋಡುತ್ತಾ, ನೀವು ಬರ್ರೀ !" ಎಂದಳು. ಎಲ್ಲಾ ನಾಟಕ ನನಗೆ ಸಮಾಧಾನಕ್ಕಾಗಿ ಹೇಳಿದ್ದಾಳೆ—ಎಂದುಕೊಳ್ಳುತ್ತಾ, ಕಾರು ಹೋಗುತ್ತಲೂ ಹೇಮಂತನನ್ನು ಚಿಕ್ಕ ಮಗುವಿನ ತರಹ, ಜೀಪಿನವರೆಗೆ ಎಳೆದುತಂದಳು—ಸುಷಾಮಾ. "ಲೇ ..ಲೇ ..ಏನೇ ಇದು ? ಜನ ನಗ್ತಾರೆ ಬಿಡೆ" ಎಂದು ಹೇಮಂತ ಕೂಗಿಕೊಂಡರೂ ಆಕೆ ಕೇಳಲಿಲ್ಲ.

ದಾರಿಯುದ್ದಕ್ಕೂ ಸುಷಮಾ ಮೌನವಾಗಿದ್ದಳು. ಅವಳ ಮನದಲ್ಲಿ ಸಿಡಿ ಮದ್ದು ತುಂಬಿಕೊಂಡಿತ್ತು ಅದು ಸ್ಫೋಟಗೊಳ್ಳಲು ಸಮಯಬೇಕಾಗಿತ್ತು. ಮನೆಗೆ ಹೋಗುತ್ತಲೂ, ಅತ್ತೆಗೆ ಹೇಳಿ ಹೇಮಂತಗೆ ಸರಿಯಾದ ಶಾಸ್ತಿ ಮಾಡಿಸಬೇಕು ಎಂದು ಮನದಲ್ಲಿ ಮಂಡಿಗೆ ತಿನ್ನಲಾರಂಭಿಸಿದಳು.

ಮನೆಯ ಮುಂದೆ ಕಾರೊಂದು ಬಂದುನಿಂತಿತ್ತು. ಜೀಪು ನಿಲ್ಲುತ್ತಲೂ, ಕೈಲಿ ಬ್ಯಾಗು ಹಿಡಿದ ವೈದ್ಯರು ಹೊರಗೆಬಂದರು. ಅವರ ಹಿಂದೆ ಸೂರಪ್ಪ. ಹೇಮಂತಗೆ ಚಿಂತೆಯಾಗತೊಡಗಿತು. ವೈದ್ಯರೇಕೆ ಬಂದಿದ್ದಾರೆ ? ಅಮ್ಮ ನಿಗೇನಾಗಿದೆ ?—ಸುಷಮಾ ಜೀಪಿನಿಂದಿಳಿದು ಒಳಗೆ ಓಡಿದಳು. ಅವಳು ಹೇಮಂತನಿಗೆ ಶಾಸ್ತಿಮಾಡಿಸಬೇಕೆಂದು ಯೋಚಿಸಿದ್ದು 'ಫುರ್' ಆಗಿತ್ತು

ಹೇಮಂತ ವೈದ್ಯರನ್ನು ತಡೆದು ವಿಷಯ ಏನೆಂದು ಕೇಳಿದ—"ಏನೂ ಇಲ್ಲ. ಸ್ವಲ್ಪ ಭಯವಾಗಿದ್ದಾರೆ—ಅಷ್ಟೇ !—ಎರಡು-ಮೂರು ದಿನಗಳಲ್ಲಿ ಸರಿಹೋಗುತ್ತಾರೆ" ಎಂದು ಆಶ್ವಾಸನೆ ನೀಡಿ, ಅವರು ಹೊರಟುಹೋದರು. ಆವೇಳೆ ಸೂರಪ್ಪ ನಡೆದ ವಿಷಯ ತಿಳಿಸಿದ—

"ಅಮ್ಮಾವರು ದೇವಸ್ಥಾನಕ್ಕೆ ಹೋಗಿದ್ರು. ಅಲ್ಲಿ ಅವರು ಮೂರ್ಛೆ ಹೋಗಿ ಬಿದ್ದುಬಿಟ್ರಂತೆ. ಯಾರೋ ತಂದು ಮನೆ ಸೇರಿಸಿದರು ..ಅವರು ಭೀತಿಯಿಂದ ನಡುಗ್ತಾ ಇದ್ರು."

ಹೇಮಂತ ಒಳಗೆ ಧಾವಿಸಿದ. ಸುಷಮಾ, ಶಾರದಮ್ಮನವರ ತಲೆಯ ಬಳಿ ಕುಳಿತು, ಮೆಲುವಾಗಿ ಅವರ ಹಣೆ ನೀವುತ್ತಿದ್ದಳು. ಅವರು ಕಣ್ಣುಮುಚ್ಚಿದ್ದರಾದರೂ, ನಿದ್ದೆ ಹತ್ತಿಲ್ಲವೆಂಬುದು ಸ್ಪಷ್ಟವಾಗಿ ಕಂಡುಬರುತ್ತಿತ್ತು. ಹೇಮಂತ ಗಾದಿಯ ಮೇಲೆ ಅವರ ಪಕ್ಕದಲ್ಲಿಯೇ ಕುಳಿತುಕೊಳ್ಳುತ್ತಾ "ಅಮ್ಮಾ" ಎಂದ. ಅವನ ಧ್ವನಿ ಕಂಪಿಸುತ್ತಿತ್ತು. ಶಾರದಮ್ಮ ಮೆಲ್ಲನೆ ಕಣ್ಣು ತೆರೆದರು. ಮಗನ ಕಣ್ಣುಗಳಲ್ಲಿ ನೀರಾಡಿದ್ದು ಕಂಡು ಕರುಳು ಚುರಕ್ ಅಂದಿತು—

"ಕಣ್ಣಲ್ಲಿ ನೀರು ಹಾಕೋಕೆ ಏನಾಗಿದೆಯೋ ನಿನಗೆ ? . ಒಳ್ಳೆ ಹೆಣ್ಣು ಮಗು ತರಹ ಅಳ್ತಾ ಇದೀಯಲ್ಲ"—ಎಂದು ಪ್ರೀತಿಯಿಂದ ಗದರಿದಳು. ಹೇಮಂತ ಅವರ ಪಕ್ಕದಲ್ಲಿಯೇ ತನ್ನ ತಲೆ ಹುದುಗಿಸಿ, ಚಿಕ್ಕಮಗುವಿನಂತೆ, ಅವರನ್ನು ತಬ್ಬಿಕೊಂಡು. "ಅಮ್ಮಾ ! ಅಮ್ಮಾ ! ನಿನಗೇನಾದ್ರೂ ಆದು— ನಾನು ಬದುಕೋಲ್ಲಮ್ಮಾ ಖಂಡಿತ ನಾನು ಬದುಕೋಲ್ಲ .." ಅಂತ ಹಸುಗೂಸಿನಂತೆ ಬಿಕ್ಕಿ-ಬಿಕ್ಕಿ ಅಳಲಾರಂಭಿಸಿದಾಗ, ಶಾರದಮ್ಮನವರಗೂ ತಡೆಯಲಾಗಲಿಲ್ಲ. ಅವನನ್ನು ಅಪ್ಪಿಕೊಂಡು, ನೆತ್ತಿಯ ಮೇಲೆ ಮುತ್ತಿಟ್ಟು "ಹೇಮಂತಾ, ನನಗೇನೂ ಆಗಿಲ್ಲಪ್ಪ ! ..ಚೆನ್ನಾಗಿದೇನೆ" ಎನ್ನುವಲ್ಲಿ, ಅವರ ಕಣ್ಣುಗಳಿಂದಲೂ ಸಹ ಧಾರಾಕಾರವಾಗಿ ನೀರು ಹರಿಯಲಾರಂಭಿಸಿತು. ಸುಷಮಾ, ತಾಯಿ ಮಗನ ಪ್ರೀತಿ ಕಂಡು ಮೂಕಳಾಗಿ ಕುಳಿತುಬಿಟ್ಟಿದ್ದಳು.

ಐದು-ಹತ್ತು ನಿಮಿಷಗಳಲ್ಲಿ ತಾಯಿ-ಮಗ ಇಬ್ಬರೂ ಸುಧಾರಿಸಿಕೊಂಡಿದ್ದರು, ಹೇಮಂತ, "ವಿಷಯ ಏನು ನಡೆಯಿತು ? ನಿನಗೇಕೆ ಮೂರ್ಛೆ ಬಂದಿತು" ಎಂದು ಕೇಳಿದಾಗ, ಶಾರದಮ್ಮ "ಹೇಮಂತ ಇಪ್ಪತ್ತು, ಇಪ್ಪತ್ತೈದು ವರ್ಷಗಳ ನಂತರ, ನಾನಿಂದು, ಶಂಕರ-ಸುಂದರರನ್ನು ಕಂಡೆ ಕಣೋ" ಎಂದು ಹೇಳಿ ಮತ್ತೊಮ್ಮೆ ಭಯದಿಂದ ನಡುಗಿದರು. ಹೇಮಂತ ಅವರನ್ನು ಬಲವಾಗಿ ಅಪ್ಪಿಕೊಂಡು ಸಮಾಧಾನಪಡಿಸಿದ.

ನಂತರ, ಶಾರದಮ್ಮ ನಿಧಾನವಾಗಿ, ಅಂದು ನಡೆದ ಆ ಕರಾಳ ರಾತ್ರಿಯ ಅನುಭವ ಹೇಳಿದಳು. ಅದೇ ಶಂಕರ-ಸುಂದರ, ಇಂದು ದೇವಸ್ಥಾನದಿಂದ ಬರುವಾಗ, ಕಣ್ಣಿಗೆ ಬಿದ್ದರು. ಸುಂದರ ಕುರುಡನಾಗಿದ್ದ. ಶಂಕರ ಮಾತ್ರ ತನ್ನತ್ತಲೇ ದಿಟ್ಟಿಸುತ್ತಿದ್ದ

ತಾಯಿಯ ಮಾತು ಕೇಳಿ— ಹೇಮಂತನ ರಕ್ತ, ತಕ-ತಕ ಕುದಿಯ

ತೊಡಗಿತು. ಅವರೊಂದಿಗೇ ಸೇಡಿನ ಜ್ವಾಲೆ 'ಭುಗಿಲ್' ಎಂದು ಪ್ರಜ್ವಲಿಸ ತೊಡಗಿತು.

## ಒಂಬತ್ತು

ಮರುದಿನ ಮುಂಜಾನೆ ಹೇಮಂತ, ಉಪಾಹಾರ ತೆಗೆದುಕೊಳ್ಳುವಾಗ, ಹೊರಗಡೆ ಸೂರಪ್ಪ, ಯಾರೊಂದಿಗೋ ಮಾತನಾಡುತ್ತಿರುವುದು ಕೇಳಿಸಿತು. ಧ್ವನಿ, ಎಲ್ಲಿಯೋ ಕೇಳಿದಂತಿದೆಯಲ್ಲಾ—ಎಂದು ಯೋಚಿಸುತ್ತಾ, ಆತ ತಿಂಡಿ ತಿನ್ನತೊಡಗಿದ. ಸೂರಪ್ಪ ಮತ್ತು ಆ ಮಹಿಳೆಯ ಮಾತುಗಳು ಅವನಿಗೆ ಸ್ಪಷ್ಟವಾಗಿ ಕೇಳುತ್ತಿದ್ದವು.

"ರೀ ..ಸೂರಪ್ಪನವರೇ....ಎಲ್ಲಿ ನಿಮ್ಮ ಸಾಹೇಬರು ?"

"ಆಗಲೇ ಹೇಳಲಿಲ್ಲವೆನ್ರಿ, ಒಳಗೆ ತಿಂಡಿತಿಂತಾ ಇದಾರೆ. ಈಗ ಬರತಾರೆ —"ಅಂತ.

"ಯಾವಾಗ ಬರತಾರೆ ?"

"ಸ್ವಲ್ಪ ಕೂತ್ಕೊಳ್ರಿ, ದಣಿವು ಆರಿಸಿ ಕೊಳ್ರೀ—ವಿಷಯ ಏನೊಂತ ನನ್ನ ಮುಂದೆ ಹೇಳ್ರೀ."

"ನಿಮ್ಮ ಮುಂದೇ?" ಯಾಕ್ರಿ—ಹೇಳೋದು?ನಾ—ಅವರಮುಂದೇ ?

"ರೀ ಮೇಡಮ್, ನಾನು ಅವರ ಪಿ.ಸಿ.,—ಇಪ್ಪತ್ತು ವರ್ಷಗಳಿಂದ ನಾನು ಇದೇ—ಡಿಪಾರ್ಟ್‌ಮೆಂಟನಲ್ಲಿ ಪಿ.ಸಿ. ಆಗಿ ಕೆಲಸ ಮಾಡ್ತಾ ಬಂದಿದೀನಿ. ನನ್ನ ಯೋಗ್ಯತೆ ನಿಮಗೆ ಏನು ಗೊತ್ರೀ ?"

"ಎಲ್ಲಾ ಗೊತ್ತಾಯ್ತಲ್ಲಾ—ಬಿಡ್ರೀ."

"ಏನು ಗೊತ್ತಾಯ್ತು ?"

"ಅದೇ ನಿಮ್ಮ ಯೋಗ್ಯತೆ ?"

"ಅದೇನ್ರೀ ನಿಮಗೆ ಗೊತ್ತಾಗುತ್ತೆ ? ಇದುವರೆಗೂ ಅದು ನನಗೇ ಗೊತ್ತಾಗಿಲ್ಲ."

"ಇದೇ ಈಗ ನೀವು ಹೇಳಿದ್ರಲ್ಲ—" ಇಪ್ಪತ್ತು ವರ್ಷದಿಂದ ಪಿ.ಸಿ. ಆಗಿ ಬಂದೀವೇ—ಅಂತ.

"ಹೌದ್ದು ! ಹೌದು ! . ಈಗಲಾದರೂ ಗೊತ್ತಾಯ್ತಾ ?" ಸೂರಪ್ಪ ಯೂನಿಫಾರ್ಮು ಸರಿಪಡಿಸಿಕೊಂಡು, ಕಾಲರ್ ಮೇಲಿನ ಧೂಳು ಝಾಡಿಸು

ವಂತೆ, ಬಲಗೈ ಬೆರಳಿನಿಂದ ಪರ್-ಪರ್ ಎಂದು ಎರಡು ಮೂರು ಬಾರಿ ಬಡಿದ. ಅವನ ರೀವಿ ಕಂಡು, ಮುಸಿ-ಮುಸಿ ನಕ್ಕ ಆಕೆ ಮುಂದುವರಿಸಿದರು

"ಅಯ್ಯೋ ಸಾಕು ಮಾಡ್ರೀ, ನಿಮ್ಮ ಧಿಮಾಕಾನ. ಇಪ್ಪತ್ತು ವರ್ಷ ಸರ್ವೀಸ್ ಆದ್ರೂ-ಇನ್ನೂ ಪಿ ಸಿ. ಆಗೇ ಇದ್ದೀರೀಂದ್ರೇ, ನಿಮ್ಮ ಯೋಗ್ಯತೆ ಎಂಥದು ಅನ್ನೋದು ಗೊತ್ತಾತು—ಬಿಡ್ರೀ !"

ಸೂರಪ್ಪ, ಇಂಗು ತಿಂದ ಮಂಗನಂತಾದ ಅವಳು, ಅವನ ತಲೇಮೇಲೆ, ಒಂದುಕೊಳಾಯಿ, ತಣ್ಣೀರು ಸುರಿಯೋಷ್ಟು—"ಡಿಸ್" ಅಂತ ಕುರ್ಚಿಯಲ್ಲಿ ಕುಸಿಯೊ ಅಷ್ಟೊತ್ತಿಗೆ ಹೇಮಂತ ಅಲ್ಲಿಗೆ ಬಂದ. ಅವನನ್ನ ನೋಡುತ್ತಾ ಎದ್ದುನಿಂತ ಆ ಮಹಿಳೆ, "ಓಹ್ ! ಹೇಮಂತ, Good morning sir" ಎಂದಳು. ಅವಳು ರೋಜಲೀನಾ ! ಅದಕ್ಕೆ, ಹೇಮಂತನಿಗೆ ಅವಳ ಧ್ವನಿ ಪರಿಚಿತ ಅನಿಸಿದ್ದು—"ಕುಳಿತುಕೊಳ್ಳಿ" ಎಂದ, "Thanks" ಎನ್ನುತ್ತಾ, ಆಕೆ ಕುಳಿತಳು.

"ಈಗ ಹೇಳಿ ..ನೀವು ಏಕೆ ಬಂದದ್ದು ?" ಹೇಮಂತ ಕೇಳುತ್ತಲೂ ಒಮ್ಮೆಲೇ ರೋಜಲೀನಾ ಗದ್ಗದಿತಳಾದಳು. ಅವಳ ಕಣ್ಣುಗಳು ತುಂಬಿ ಬಂದವು ಮೂಗು ಕೆಂಪಾಯಿತು. ಗಂಟಲುಬ್ಬಿ ಬಂದಿತು. ಪರ್ಸಿನಿಂದ ವಸ್ತ್ರತೆಗೆದು ಕಣ್ಣು-ಮೂಗು ಒರೆಸಿಕೊಳ್ಳಲಾರಂಭಿಸಿದಳು.

"ಒಳಗಡೆ ದೊಡ್ಡ ಟವೆಲ್ ಇದೆ—ತಂದುಕೊಡಲಾ?"—ಎಂದು ಕೇಳಿದ ಸೂರಪ್ಪ, ರೋಜಲೀನಾ ಅವನೆಡೆ ಕೆಕ್ಕರುಗಣ್ಣಿನಿಂದ ನೋಡಿದಳು,

"ಅಯ್ಯೋ ! ತಾಳಲಾರೆ ...ನಾ ತಾಳಲಾರೆ .. ನಿಮ್ಮ ಈ ಉಗ್ರ ದೃಷ್ಟಿಗೆ ನಾನು, ಸುಟ್ಟು ಭಸ್ಮವಾಗಿ ಹೋಗುತ್ತೇನೆ "

ಕುರ್ಚಿಯ ಮೇಲೆ ಕುಳಿತುಕೊಂಡೇ, ಸೂರಪ್ಪ ಬೇಗೆಯಲ್ಲಿ ಸುಟ್ಟು ಹೋಗುತ್ತಿರುವ ಹಾಗೆ ಅಭಿನಯಿಸಿದಾಗ, ರೋಜಲೀನಾ ಸಹ ತನ್ನ ದುಃಖ ಮರತು ನಗಲಾರಂಭಿಸಿದಳು

ಹೇಮಂತ ತಿಂಡಿ ತಿಂದು, ಕಾಫಿ ಬಟ್ಟಲು ತೆಗೆಯಲೆಂದು ಬಂದ ಸುಷಮಾಳ ಕಿವಿಗೆ, ರೋಜಲೀನಾ ನಗುವುದು ಕೇಳಿಸಿತು. "ಓಹ್, ...ಮತ್ತೊಬ್ಬಳು— ಯಾವೊಳೋ ಬಂದು, ತನ್ನ ದೈವಕ್ಕೆ, ಮಕ್ಕರಿಸುತ್ತಿದ್ದಾಳೆ" ಎಂದುಕೊಳ್ಳುತ್ತ, ಉಗ್ರನರಸಿಂಹನ ಅವತಾರ ತಾಳಿ, ಹೊರಗೆ ಬರುತ್ತಲೇ ರೋಜಲೀನಾಳ ದೃಷ್ಟಿ ಅವಳ ಮೇಲೆ ಬಿದ್ದು, ನಗುತ್ತಿದ್ದ ಆಕೆ, ಒಮ್ಮೆಲೆ ತಣ್ಣಗಾದಳು. ಅವಳಿಗೆ ಆಶ್ಚರ್ಯ—ಯಾರೀಕೆ ?—

ಸುಷಮಾ ಯಾರೊಂದಿಗೂ ಯಾವ ಮಾತೂ ಆಡದೆ, ಹಾಲಿನಲ್ಲಿದ್ದ

ಕುರ್ಚಿಯ ಮೇಲೆ ಕುಳಿತುಕೊಳ್ಳುತ್ತಿದ್ದಂತೆ, ರೋಜಲೀನಾ—ಬಡಬಡನೆ ಒಂದೇ ಉಸುರಿಗೆ, ಹೇಳಿ ಮುಗಿಸಿದಳು

"ಹೇಮಂತ ...ನನ್ನ ಪಿಂಕಿ .ಕಳೆದಿದೆ ದಯವಿಟ್ಟು ಹುಡುಕಿ ಕೊಡಿ."

"ಪಿಂಕಿ ಅಂದರೆ ?"

ಅದೇ ಸಾರ್, ಅಂದು ನೀವು ಬೇಬಿ ವಿಳಾಸ.— ಶೀಘ್ರ ಕೊಟ್ಟಲ್ಲೀ— ಅದೇ ನಾಯಿ ಕುನ್ನಿ—ಪಿಂಕಿ ಹೌದಲ್ವೇ ಮೇಡಮ್.

"Exactly correct! ಎಂದು ಅಂದ ಆಕೆ. ಹೇಮಂತನ ಕಡೆ ಹೊರಳಿ "ಪ್ಲೀಸ್—ಹುಡುಕಿಕೊಡಿ. ಸರ್!, ನೆನ್ನೆಯಿಂದ ನನಗೆ ಅನ್ನ-ನೀರು ಸಹ ಸೇರದಾಗಿದೆ" ಎಂದಳು. ಸೂರಪ್ಪ ಮೂಗು ಕಿವಿಚಿ,—"ಸರ್! ..ಇನ್ನು ಮೇಲೆ ನಾವು ಕೊಲೆಗಾರರನ್ನು, ಕಳ್ಳಕಾಕರನ್ನೂ ಹುಡುಕುವ ಬದಲು, ನಾಯಿ ಕತ್ತೆ—ಕುರಿ ಹುಡುಕೋ ಕೆಲಸ ಮಾಡಬೇಕಾಗುತ್ತೆ ಅಂತ ಕಾಣುತ್ತೆ" ಅಂದ ಸುಷಮಾ ಖಿಸಕ್ ಎಂದು ನಕ್ಕರೆ—ರೋಜಿಲೀನಾ ಮುಖ ಊದಿ ಸಿರಲು, ಹೇಮಂತ, ಸೂರಪ್ಪನಿಗೆ ಗದರಿ ಹೇಳಿದ.

"ಸೂರಪ್ಪ ಸ್ವಲ್ಪ .ನೀನು ಬಾಯಿ ಮುಚ್ಚಿಕೊಂಡು ಸುಮ್ನೆ ಇರ ತೀಯಾ?"

ಸೂರಪ್ಪ ಒಮ್ಮೆಲೇ ಗಟ್ಟಿಯಾಗಿ ತನ್ನ ಬಾಯಿಯನ್ನು ಕೈಗಳಿಂದ ಮುಚ್ಚಿಕೊಂಡು, ಮೆಲುವಾಗಿ ನಗುತ್ತ, ಹೇಮಂತ, ರೋಜಲೀನಾಳಿಗೆ ಹೇಳಿದ

"ನೋಡಿ ಮಿಸ್, ಇದು ನಮ್ಮ ಕೆಲಸವಲ್ಲ .ದಯವಿಟ್ಟು ತಪ್ಪು ತಿಳಿಯ ಬೇಡಿ ನೀವು ಬೇರೆಯವರ ಆಳಿಗೆ ಹೋಗಿ .."

"ಅಯ್ಯೋ ..ಹಾಗೆ ಅನ್ನ ಬೇಡಿ ಸಾರ್, ನಾನು ಬಹಳ ಆಶೆ ಇಟ್ಟು ಕೊಂಡು ಬಂದಿದ್ದೆ ...ದಯವಿಟ್ಟು ಹುಡುಕಿ ಕೊಡಿ!"

"ನಾನು ಹೇಳಿದೇನೆ ಮಿಸ್ : ಇದು ನಮ್ಮ ಕೆಲಸವಲ್ಲ"

"ಏನ್ ಸಾರ್, ದೊಡ್ಡ ದೊಡ್ಡ ಸ್ಮಗಲರನ್ನು ಹಿಡಿಯೋರು ನೀವು! . ನಿಮಗೊಂದು ನಾಯಿಮರಿ ಹುಡುಕಿ ಕೊಡೋಕೆ ಆಗೋಲ್ವೆ? .."ಸರ್' .. ಶಾಂತಿ ಸಹಿತ ನಿಮ್ಮನ್ನ ಬಾ—ಹೋಗು ಅಂತ ಅಂದಿದ್ಲು!"

"ಏನು, ಶಾಂತಿ ಹೇಳಿದ್ಲಾ?.. "

ಒಮ್ಮೆಲೆ ಬದಲಾದ ಹೇಮಂತನ ವರ್ತನೆಗೆ ಸುಷಮಾ ಬೆರಗಾದಳು. ಶಾಂತಿ ಎಂಬ ಹೆಸರು ಅವನ ಮೇಲೆ ಪವಾಡ ಮಾಡಿತ್ತು.

"ಏನು ಶಾಂತಿ ಹೇಳಿದ್ಲಾ?" ಆತ ಮತ್ತೊಮ್ಮೆ ಕೇಳಿದ.

"ಹೌದು ಸಾರ್"

"ಹಾಗಾದರೆ ...ನೀವು ಚಿಂತಿಸಬೇಡಿ. ನಾವೆಲ್ಲ ವಿಚಾರಿಸ್ತೇವೆ ?".... ನೀವಿನ್ನು ಹೋಗಬಹುದು.

ಆಕೆ ವಂದಿಸಿ, ಸಂತಸದಿಂದ ಹೊರಗೆ ನಡೆದಳು.

"ಸೂರಪ್ಪ" ಎಂದು ಕರೆದ ಹೇಮಂತ, ಉತ್ತರವಿಲ್ಲ.

"ಸೂರಪ್ಪ" ಎಂದು ಸ್ವಲ್ಪ ಜೋರಾಗಿ ಕರೆದ. ಅದಕ್ಕೂ ಉತ್ತರವಿಲ್ಲ ಹೊರಳಿ ನೋಡಲು ಬಾಯಿ, ಗಟ್ಟಿಯಾಗಿ ಮುಚ್ಚಿಕೊಂಡು ಕುಳಿತ ಅವನನ್ನು ಕಂಡು ಚೆನ್ನಾಗಿ ನಕ್ಕು ಬಿಟ್ಟು "ಆಯ್ತು !....ಬಾಯಿ ತೆರೆ" ಎಂದ. ಬಾಯಿ ತೆರೆಯುತ್ತಲೇ ಸೂರಪ್ಪ ಆರೋಪಿಸಿದ.

"ಏನ್ ಸಾರ್ ...ನೀವು ನನಗೆ ಬಹಳ ಇನ್‌ಶರ್ಟ್ ಮಾಡ್ತೀರಿ ?"

"ಏನ್ ಮಾಡ್ತೀನೆ ?"

"ಇನ್‌ಶರ್ಟ್ ..ಅಂದರೆ, ಅಪಮಾನ ಮಾಡ್ತೀರಿ !"

"ಮಬ್ಬೇ ? ..ಅದಕ್ಕೆ ಇನ್‌ಸಲ್ಟ್ ಅಂತಾರೆ."

"ಮತ್ತೆ ನಾನೇನೆಂದೇ ?"

"ಇನ್ ಶರಟು"

"ಎರಡೂ ಒಂದೇ ಆಯಿತಲ್ಲ !"

"ಜಗತ್ತಿನಲ್ಲಿ ಒಂದು ನಂಬರ ಬುದ್ದೂ ನೋಡು ನೀನು !"

"ನೋಡೀ ! ನೋಡಿ ! ನೀವು ಮತ್ತೆ ಇನ್‌ಶರಟ್"

"ಸೂರಪ್ಪ, ಸ್ವಲ್ಪ-ಸ್ವಲ್ಪ ತಡೆ—'ಇನ್' ಅಂದರೇನು ?"

"ಒಳಗೆ"

"ಶರ್ಟು—ಅಂದರೆ ?"

"ಶರ್ಟು—ಅಂದರೆ "—

"ಶರ್ಟು—ಅಂಗಿ !"

"ಸರಿ ..Good ..! ಇನ್ ಶರ್ಟ್ ಅಂದ್ರೆ ?"

"ಒಳಗೆ ಶರ್ಟು ...ಒಳಗೆ ಅಂಗಿ ಶರ್ಟು ! .."

ಹೇಮಂತ ನಗು-ನಗುತ್ತ ಹೇಳಿದ.

"ಮತ್ತೆ, ಈಗಲಾದ್ರು ಅರ್ಥವಾಯ್ತಾ—? ಇನ್‌ಸಲ್ಟ ಅಂದ್ರೇನು ?" ಅಂತ !

"ಅರ್ಥ ಆಯ್ತು ಬಿಡಿ ಮೊನ್ನೆ ಅವ್ಮಾವ್ರು ಸ್ಟೇಟ್ ಹೀಗೆ ಅಂದಿದ್ರು!"

"ಯಾವ ಅವ್ಮಾವ್ರು ?" ಒಮ್ಮೆಲೆ ಸುಷಮಾ ಕೇಳಿದಳು.

"ಅವ್ರೇ ?! ಮತ್ತಾರು ? ..ಶಾಂತಿ ಅಮ್ಮಾವ್ರು !"

"ಅವ್ರೇಕೆ ನಿನಗೆ 'ಅಮ್ಮಾವ್ರು' ಆಗ ಬೇಕು ?!"

"ಒಳ್ಳೆ ತಮಾಷೆಯಾಗಿದೆಯಮ್ಮ ನಿಮ್ಮ ಪ್ರಶ್ನೆ. ..ಇವರು ಸಾಹೇಬರಾಗುತ್ತಾರೆ . ಆದರೆ ಅವಳು ಹೇಗೆ?"

"ಏಕೆ ಆಗೋಲ್ಲ"

"ಸೂರಪ್ಪ, ಸಾಹೇಬ್ರು ಅವರ ಜೊತೆ ಮದುವೆ ಆಗಿದೆಯಾ ?

"ಇಲ್ಲ"

"ಅಂದ ಮೇಲೆ ಹೇಗೆ—ಆಗ್ತಾರೆ."

"ಹೌದಲ್ಲ ..!"

"ಈಗ ಹೇಳು—ನಾನೇನಾಗಬೇಕು !"

"ಅಮ್ಮಾವ್ರು .."

ಸುಷಮಾ ನಾಚೀ, ಮುದ್ದೆಯಾದಾಗ ಸೂರಪ್ಪಾ ಮತ್ತೆ ಹೇಳಿದ.

"ನಮಗೆ ಯಾರಾದ್ರೂ ಅಷ್ಟೇ ಅಮ್ಮಾ ! .ಅವಳು ಮದುವೆಯಾದ್ರೇ, ಅವಳು—ಅಮ್ಮಾವರು !—ನೀವು ಮದ್ವೆ ಆದ್ರೇ—ನೀವೂ ಅಮ್ಮಾವ್ರು! ... ಇಬ್ಬರೂ ಆದ್ರೇ—ಇಬ್ರೂ ?"

"ಸೂರಪ್ಪಾ !" ಹೇಮಂತ ಗದರಿದ.

"ಏನ್‌ಸಾರ್ ?"

"ನಿನಗೆ ಸ್ವಲ್ಪವೂ ಬುದ್ಧಿ ಇಲ್ಲ ನೋಡು !"

"ಹೌದ್ಸಾರ್ !"—ಅದ್ಕೇ ಇಪ್ಪತ್ತು ವರ್ಷದಿಂದ ಪಿ.ಸಿ. ಆಗೇ ಬಿದ್ದಿದ್ದೀನಿ !

"ಮಾತು ಸಾಕೋ !. ನಡೆಯಿನ್ನು"

ಸೂರಪ್ಪ ಎದ್ದು ಹೊರಟು ನಿಂತ ! ..ಹೇಮಂತ ನಡೆದ.

"ಎಲ್ಲಿಗೆ ಹೊರಟೆ ?"

"ಮತ್ತೆ 'ನೀವೇ' ನಡೆ ಅಂದ್ರೀ ..ಅದ್ಕೇ .."

"ಥೂ,ಥೂ—ನಿನ್ನ ಜೊತೆ ಮಾತಾಡೋದು ಅಂದ್ರೇ ಸಾಕು—ಸಾಕಾಗುತ್ತೆ—ನೋಡು "

"ಮತ್ತೆ ಸುದ್ದಿ ಸೂರಪ್ಪ ಅಂದ್ರೇ ಸೊನ್ನೆ ಅಂದ್ಕೊಂಡ್ರಾ ?"

"ಸೂರಪ್ಪಾ....ಹೇಳು ...ನೀನು ರೋಜಲೀಲಾಳ ಪಿಂಕಿಯನ್ನು ಹುಡುಕಿ ಕೊಡು."

"ಆಂ....ನಾನಾ ?....ಪಿಂಕೀನಾ ?. ..ನಾಯಿಮರೀನಾ ?" ಹೇಮಂತ

ಎಲ್ಲಾದಕ್ಕೂ ಸೇರಿ ಒಂದೇಸಾರಿ "ಹೂಂ" ಎಂದ.

"ಸರ್ ! .ನೀವೇ ಅಂದಿದ್ರೀ— ಈ ಕೇಸ್ ನಮ್ಮದಲ್ಲಾಂತ."

"ಹೌದು ಅಂದಿದ್ದೆ .! ಆದ್ರೆ ಶಾಂತಿ, ಹೇಳಿಕಳಿಸಿದ್ದಾಳೆ."

"ಅವರು ಹೇಳಿಕಳಿಸಿದರೆ ಆಗಬಹುದಾ ?"

"ಹೌದು ಸೂರಪ್ಪಾ !ವ್ಯಂಗವಾಗಿ ಸುಷಮಾ ಹೇಳಿದಳು ಎದ್ದು ನಿಂತು.

"ಆ ಗಯ್ಯಾಳಿ ಶಾಂತಿ ಹೇಳಿದ್ದೆಲ್ಲವೂ, ಈ ಸಾಹೇಬರಿಗೆ ವೇದವಾಕ್ಯ ! ತಿಳೀತಾ ?—ನೀನಿನ್ನು ಹೊರಡು."

ನಿಜವಾಗಿಯೂ ಒಂದೇ ಮಾತಿಗೆ ಸೂರಪ್ಪ ಅಲ್ಲಿಂದ ಕಂಬಿಕಿತ್ತ ಸುಷಮಾ ಒಂದು ಬಾರಿ ಹೇಮಂತನ ಕಡೆ ನೋಡಿ, ಮುಖ ಸಿಂಡರಿಸಿಯೆ, ಮೂಗು ಮೇಲೇರಿಸಿ—"ಹೂಂ ! .ನಾನು ನಿನಗೆ ಸೀಬೇಹಣ್ಣೇ ಕೊಡಲ್ಲ" ಎನ್ನುತ್ತಾ ಹೊರಟುಹೋದಳು. ಅವಳ ಕಣ್ಣುಗಳು ತುಂಬಿ ಬಂದಿದ್ದವು.

ಸಾಯಂಕಾಲದವರೆಗೂ, ಮನೆಯಲ್ಲಿ ಒಂದು ಬಗೆಯ ಶಾಂತಿ ನೆಲೆಸಿತ್ತು. ಯಾವಾಗಲೂ ಬಡಬಡ ಮಾತನಾಡುವ ಸುಷಮಾ, ತನ್ನ ಬಾಯಿಗೆ ಬೀಗ ಹಾಕಿಕೊಂಡಿದ್ದಳು ಊಟ ಮಾಡುವಾಗಲೂ ಸಹ ಆಕೆ ತುಟಿ ಎರಡು ಮಾಡಲಿಲ್ಲ. ಅವರಿಬ್ಬರ ಮೌನ ಕಂಡು ಅಮ್ಮ

"ಏಕೋ ...? ಇಬ್ರೂ ಮಾತಾಡವಲ್ರೀ ?....ತಂಟೆ ಮಾಡೀದೀರಾ ?"– ಎಂದು ಕೇಳಿದಾಗ, ಹೇಮಂತ ,

"ಇಲ್ಲಮ್ಮಾ ..ತಂಟೆ–ಗಿಂಟೆ ಇಲ್ಲ." ಅಂತ ಸಬೂಬು ಹೇಳಿದ. ಶಾರದಮ್ಮ ಮುಸಿ-ಮುಸಿ ನಗುತ್ತಾ ಹೇಳಿದರು

"ಒಳ್ಳೇ ಚೆನ್ನಾಗಿದೆ ..ಮದುವೆಗೆ ಮುಂಚೆಯೇ ಈ ರಗಳೆ ಆದ್ರೇ ?"

"ಹೇಳೀಮ್ಮಾ, ಇನ್ನೂ ಚೆನ್ನಾಗಿ ಹೇಳೀ—" ಎಂದು ನುಡಿದಳು ಸುಷಮಾ ! ಹೇಮಂತನಿಗೆ ರೇಗಿ ಹೋಯಿತು ಅಬ್ಬರಿಸಿದ ;

"ಯಾರೇ !. ..ಯಾರೇ ? ನಿನಗೆ ಹೇಳಿದ್ದು ? ನಾನು ಹೇಳಿದೆನಾ ?— ನಾನೇ ನಿನ್ನ ಮದುವೆ ಆಗ್ತೇನೇಂತ ?—ನಿನ್ನ ಮದುವೆ ಆಗೋದೂ ಕಲ್ಲು ಕಟ್ಕೊಂಡು ಬಾವಿ ಬೀಳೋದೂ ಎರಡೂ ಒಂದೇ !"

ಸುಷಮಾ ಮುಳು-ಮುಳು ಅಳುತ್ತಾ, ಊಟ, ಅರ್ಧಕ್ಕೆ ಬಿಟ್ಟು ಹೊರಟು ಹೋದಳು. ವಾತಾವರಣ ಜಡವಾಯಿತು.

ಸೂರಪ್ಪ ಬಂದಿರಲಿಲ್ಲ. ಸಂಜೆ ಆಯಿತು. ಶಾಂತಿಯ ಮನೆಗೆ ಹೊರಡಲು ಹೇಮಂತ ಸಿದ್ಧನಾದ. ಅಮ್ಮನನ್ನು ಬಲವಂತ ಮಾಡಿ ಒಪ್ಪಿಸಿದ. ಆಮೇಲೆ, ಸುಷಮಾ ಬಳಿ ಬಂದ. ಆಕೆ ಪಟ್ಟು ಹಿಡಿದು ಕುಳಿತಳು. "ಒಲ್ಲೆ" ಎಂದು

ಸುಲಭವಾಗಿ ಒಪ್ಪಲಿಲ್ಲ. ಹೇಮಂತ ಕೈ ಮುಗಿದ. ನಂತರ, ತನ್ನ ಎರಡೂ ಕಿವಿ ಹಿಡಿಕೊಂಡು, ಐದು—"ಉರ್-ಬೈಟ್" ತೆಗೆದಾಗ, ..'ಖೊಳ್' ಎಂದು ನಕ್ಕಳು—ಸುಷಮಾ ಮತ್ತೆ ವಾತಾವರಣ ತಿಳಿಯಾಯಿತು

ಸರಿಯಾದ ಸಮಯಕ್ಕೆ ಹೇಮಂತ, ಶಾರದಮ್ಮ ಹಾಗೂ ಸುಷಮಾ ಳೊಂದಿಗೆ, ಶಾಂತಿಯ ಮನೆಗೆ ಬಂದ ಆ ಕಡೆ, ಶಾಂತಿ ಇವರಿಗಾಗಿಯೇ, ಬಾಗಿಲ ಬಳಿ ಕಾದು ನಿಂತಿದ್ದಳು. ಅವರನ್ನು ಸ್ವಾಗತಿಸಿ ಒಳಗೆ ಕರೆದೊಯ್ದಳು. ನಂಜುಂಡಪ್ಪ ಹೇಮಂತನನ್ನು ಕಂಡು ಕೃತಕನಗೆ ನಗುತ್ತಾ, ಮುಂದೆ ಬಂದು

"ಬರಬೇಕು, ಬರಬೇಕು ಸಾಹೇಬರು! ಅಂದಹಾಗೆ, ಮಗಳ ಕೈಗೆ ಕಬ್ಬಿಣದ ಬೇಡಿ ತೊಡಿಸಿದ್ದೀರಿ ಹೂವಿನ ಬೇಡಿ ಎಂದು ತೊಡಿಸುತ್ತೀರಾ ....ಅಂ .?!"

"ಹೂವಿನ ಬೇಡಿ ..! ..ಅಂದ್ರೇ ?" ಹೇಮಂತನ ಬದಲು ಸುಷಮಾ ಪ್ರಶ್ನಿಸಿದಾಗ, ತಬ್ಬಿಬ್ಬಾದ ನಂಜುಂಡಪ್ಪನವರು, ಹೇಮಂತನ ಕಡೆ, ನೋಡಿ, ಕೇಳಿದರು

"ಅಂ ?, ಇವರಾರು ? ನನ್ನನ್ನೇ ಕೇಳ್ತಿದಾರಲ್ಲಾ ?"

"ಅದಕ್ಕೂ ನಾನೇ ಉತ್ತರ ಕೊಡ್ತೀನೆ"—ಸುಷಮಾ ಮುಂದುವರಿಸಿದಳು "ನಾನು, ಹೇಮಂತನ ಸೋದರ ಮಾವನ ಮಗಳು."

"ಅಂ ? ಸೋದರ ಮಾವನ ಮಗಳೇ ?"

"ಹೌದು !"

"ಅಯ್ಯೋ ! ಎಲ್ಲಾ ಮುಗಿದು ಹೋಯ್ತು !"

"ಏನು ಮುಗಿಯಿತು ?"

ಅಷ್ಟರಲ್ಲಿ ಶಾಂತಿ, ಅಲ್ಲಿಗೆ ಬಂದಿದ್ದರಿಂದ, ಆ ವಿಷಯ ಅಲ್ಲಿಗೆ ಮುಗಿದು ಹೋಯಿತು. ಎಲ್ಲರೂ, ಸುಮಾರಾಗಿ ಸೇರಿದ ನೂರು ಜನ ಅತಿಥಿಗಳೊಂದಿಗೆ, ತಿಂಡಿತಿಂದರು. ಕಾಫಿ ಕುಡಿದರು. ಜನ್ಮ ದಿನದ ಕಾರ್ಯಕ್ರಮ ಪ್ರಾರಂಭವಾಯಿತು.

ಅಂದಿಗೆ ಶಾಂತಿಗೆ ಹದಿನೆಂಟು ವರ್ಷಗಳು. ಆಕೆ ಪ್ರಬುದ್ಧೆ. ಹೊಸ ಜೀವನಾವಸ್ಥೆಯೊಂದಿಗೆ, ಜೀವನ ಸಾಥಿ ಸಹ ಆಕೆಗೆ ದೊರಕಿದ್ದು—ಹೆಚ್ಚು ಸಂತಸ ತಂದಿತ್ತು.

ಒಂದೇ ಉಸುರಿಗೆ ಊದಿ ಹದಿನೆಂಟು ಮೇಣಬತ್ತಿಗಳನ್ನು ಆಕೆ ಆರಿಸಲು ಪ್ರಯತ್ನಿಸಿದಳು. ಫಲ ಸಿಗಲಿಲ್ಲ ಎರಡು ಉಳಿದೇ ಬಿಟ್ಟಿತ್ತು. ಅದನ್ನು

ಹೇಮಂತ ಊದಿ ಆರಿಸಿದ. ಶಾಂತಿ ಕೇಕ್ ಕಟ್ ಮಾಡಿ, ಮೊದಲ ತುಂಡನ್ನು ಹೇಮಂತನ ಬಾಯಿಗೆ ಇರಿಸಿದಳು. ಮತ್ತೊಂದು ತುಂಡು ಕಟ್ ಮಾಡಿ—ಹೇಮಂತ ಅವಳ ಬಾಯಿಗೆ ಇರಿಸಿದ. ಎಲ್ಲರೂ ಚಪ್ಪಾಳೆ ತಟ್ಟಿದರು.

ಸುಷಮಾ ಮೈ ಭಗ-ಭಗ ಉರಿದು ಹೋಯಿತು. ಜನ ಇದ್ದಾರೆ.! ಒಬ್ಬನೇ ನಗಲಿ ಅಂತ ತಾಳಿಕೊಂಡಳು. ಮುಂದೆ, ಮನರಂಜನಾ ಕಾರ್ಯಕ್ರಮಗಳು ನಡೆದವು. ಒಂದಿಬ್ಬರು, ಶಾಂತಿಗೇ ಹಾಡಲು ಪುಸಲಾಯಿಸಿದರು. ಮೊದಮೊದಲು ಆಕೆ ಅಸಮ್ಮತಿ ವ್ಯಕ್ತಪಡಿಸಿದರೂ, ಹೇಮಂತ, "ಶಾಂತೀ —Please" ಎಂದಾಗ —ಒಪ್ಪಿಕೊಂಡಳು. ಇದೂ ಸಹ ಸುಷಮಾಳಿಗೆ ಸಹಿಸಲಾಗಲಿಲ್ಲ.

ಪಿಯಾನೋ ಬಾರಿಸುತ್ತಾ ಶಾಂತಿ, "ನೀನೇ ನನ್ನ ಉಸಿರು. ಜೀವನ ಬನದಾ ಹಸಿರು!"ಎಂದು ಹಾಡಿ ಮುಗಿಸಿದಾಗ, ಹಾಲ್—ಚಪ್ಪಾಳೆಗಳಿಂದ ಪ್ರತಿಧ್ವನಿಸಿತು ಎಲ್ಲರೂ ಹೊರಟು ನಿಂತರು ಹೇಮಂತ ಸಹ. ನಂಜುಂಡಪ್ಪ ಶಾಂತಿಯನ್ನು ಕರೆದು, ಶಾರದಮ್ಮನವರ ಮುಂದೆ ನಿಲ್ಲಿಸಿ, ಹೇಳಿದರು

"ಅಮ್ಮಾ!, ಶಾಂತಿ ತಾಯಿ ಇಲ್ಲದ ಕೂಸು. ತಬ್ಬಲಿ. ಹೇಮಂತನ ಮೇಲೆ ಜೀವವಿರಿಸಿಕೊಂಡಿದ್ದಾಳೆ ಇವಳನ್ನು ಬೇಗ, ಮನೆ ತುಂಬಿಸಿಕೊಂಡು, ನನ್ನ ಹೆಗಲ ಮೇಲಿನ ಭಾರವನ್ನು ಬೇಗ ಇಳಿಸಿ—ತಾಯಿ!"

ಶಾಂತಿ, ಕೆಳಗೆ ಬಾಗಿ, ಶಾರದಮ್ಮನಿಗೆ ನಮಸ್ಕರಿಸಿದಾಗ, ಅವರಿಗೆ ಒಂದೂ ಅರ್ಥವಾಗಲಿಲ್ಲ. ಸುಷಮಾ ತಲೆಯ ಮೇಲೆ, ಭಾರವಾದ ಕಲ್ಲು ಬಂಡೆಯನ್ನು ಎತ್ತಿ ಹಾಕಿದಂತಾಯಿತು. ಅವಳು ಕಟ್ಟಿದ ಆಶಾಗೋಪುರ ಕಳಚಿ, ತುಂಡುತುಂಡಾಗಿ ಬಿದ್ದಿತು. ಶಾರದಮ್ಮ ಹೇಮಂತನ ಕಡೆ ಹೊರಳಿ ಕೇಳಿದರು :

"ಹೌದಮ್ಮಾ. ನಾನೂ—ಶಾಂತಿಯೂ,ಒಬ್ಬರನೊಬ್ಬರು ತುಂಬಾ ಪ್ರೀತಿಸುತ್ತೇವೆ ಇವಳನ್ನೇ ನಾನು ಮದುವೆಯಾಗೋದು!....ನಿನಗೆ ಫೋನಿನಲ್ಲಿ ಹೇಳಿದ್ದೂ ಸಹ ಇವಳ ಬಗೆಯೇ? .."

"ಛಳ್" ಎಂಬ ಸದ್ದು ಒಂದೆಡೆ ನೋಡಿದರು. ಸುಷಮಾಳ ಎಡಗೈಯಲ್ಲಿದ್ದ ಹತ್ತಾರು ಬಳೆಗಳಲ್ಲಿ ನಾಲ್ಕೈದು ಬಳೆಗಳು, ಒಡೆದು ತುಂಡಾಗಿದ್ದವು ಅಲ್ಲಿಂದ ರಕ್ತ—ಹನಿ-ಹನಿಯಾಗಿ ಕೆಳಗೆ ಬೀಳುತ್ತಿತ್ತು. ಭಾವನೆಯನ್ನು ತಡೆಯಲಾರದೆ ಆಕೆ ತನ್ನ ಬಲಗೈಯಿಂದ, ಎಡಗೈ ಅದುಮಿದ್ದಳು. ಬಳೆಗಳು ಛಳ್ ಎಂದವು

"ಸ್ವಲ್ಪ ನಿಲ್ಲೀ ನಾನು, ಗಾಯಕ್ಕೆ ಔಷಧಿ ತರ್ತೀನೆ"—ಶಾಂತಿ ಒಳಗೆ ನಡೆಯುತ್ತಿದ್ದಂತೆ, ಸುಷಮಾ ತಡೆದಳು

"ಬೇಡ! ...ಕೆಲವೊಂದು ಗಾಯಗಳಿಗೆ, ಯಾವ ಔಷಧಿಯಿಂದಲೂ ಗುಣವಾಗದು ..ದಯವಿಟ್ಟು ಬೇಡ ಅಮ್ಮಾ! ನಾವು ಹೋಗೋಣವೇ!"

ಆಕಸ್ಮಾತ್ತಾಗಿ ನಡೆದ ಘಟನೆಯಿಂದ ಗಬಿಬಿಲಿಗೊಂಡ ಶಾರದಮ್ಮಾ—"ಹಾಂ! ಹಾಂ!" ಎಂದರು.

ಶಾಂತಿ ಮತ್ತು ನಂಜುಂಡಪ್ಪ ಅವರನ್ನು ಕಳಿಸಲು ಜೀಪಿನವರೆಗೂ ಬಂದರು ಜೀಪೂ ಹೊರಟಿತು. ಅದು ಅರ್ಧ ದಾರಿಗೆ ಬಂದಾಗ—ಶಾರದಮ್ಮ ನುಡಿದರು

"ಹೇಮಂತಾ, ನೀನು—ಈ ರೀತಿ ಮಾಡಬಾರದಾಗಿತ್ತು! ನಮಗೆಲ್ಲಾ ಮೋಸಮಾಡಿದೆ!"

"ಅಮ್ಮಾ, ಇದೇನು, ನೀನು ಹೇಳ್ತಾ ಇರೋದು?"

"ಹೌದು ಹೇಮಂತ! ನಾನೂ—ಸುಷಮಾ ನಿನ್ನ ಅತ್ತೆ, ಮಾವ—ಎಲ್ಲರೂ ನಿನ್ನ ಮೇಲೆಯೇ ಆಸೆ ಇರಿಸಿಕೊಂಡಿದ್ದೆವು. ನಿನ್ನ ಮಾವ—ನಿನಗಾಗಿ ಎಷ್ಟು ಕಷ್ಟ ಪಟ್ಟಿದ್ದಾರೆ. ನಾನು—ಆಸ್ಪತ್ರೆಯಲ್ಲಿದ್ದಾಗ ಯಾವ ರೀತಿ ನೋಡಿಕೊಂಡಿದ್ದಾರೆ—ಅನ್ನೋದನ್ನು ನೀನು ಮರೆತೆ. ಅವರಿಲ್ಲದಿದ್ದರೆ, ನೀನು ಬೀದಿ-ಬೀದಿ ಅಲೀತಾ ಇದ್ದೇ! ನಾನು ಆಸ್ಪತ್ರೆಯಲ್ಲಿ ಕಾಲು ಹೊಸೆದು ಹೊಸೆದು ಸಾಯ್ತಿದ್ದೆ."

"ಅಮ್ಮಾ—ಸಾಕುಮಾಡು—ನಾ ಕೇಳಲಾರೆ."

"ಯಾಕೆ ಕೇಳೋಲ್ಲ?—ಕೇಳಲೇ ಬೇಕು! ನಾವೆಲ್ಲ ನಿನ್ನ ಮಾತು ಕೇಳಲಿಲ್ಲವೆ? ನಿನ್ನ ಮಾವ!—ಹೋಗಲೀ—ಅವನ ಮಗ—ನಿನಗಾಗಿ ಕಾಲೇಜು ಬಿಟ್ಟು ನಿನ್ನನ್ನು ಕಲಿಸಿದ. ಅವರೆಲ್ಲರಿಗೂ ಒಂದೇ ಆಸೆ. ನಿನ್ನನ್ನು ಅಳಿಯನನ್ನಾಗಿ ಮಾಡಿಕೊಳ್ಳಬೇಕೂಂತ! ನಿನಗಾಗಿಯೇ ಸುಷಮಾ ಉಸಿರು ಹಿಡಿದಿದ್ದಳು. ನೀನೂ ನನ್ನ ತವರಿನ ಕುಡಿ ಬೆಳಸ್ತೀಯಾ; ಅವರ ಅನ್ನದ ಋಣ—ತೀರಿಸ್ತೀಯಾ; ಅಂತ ಅಂದ್ಕೊಂಡಿದ್ದೆ! ಅದ್ಕೇ ಅದ್ಕೇ ನಿನ್ನ ಫೋನು ಬರುತ್ತಲೇ ನೀನೇ ಇವಳನ್ನು ಒಪ್ಪಿದೀಯಾ ಅಂತ, ಅಲ್ಲಿ ಸಕ್ಕರೆ ಹಂಚಿ ಬಂದೇ ...ಬಂದೇ ಈಗ?—ಹೆಣ್ಣು—ಸುಷಮಾಳ ಜೀವ, ಎಂತು—ಸೈರಿಸೀತು?—ಅವಳನ್ನು ಬೇರೆಯವರು ಮದುವೆ ಆಗಲು ಸಾಧ್ಯವೇ?—ಒಂದು ವೇಳೆ ಯಾರಾದರೂ ಒಪ್ಪಿದರೂ ಸುಷಮಾ ಒಪ್ಪುತ್ತಾಳೆಯೇ?"

"ಅಮ್ಮಾ! ..ನಾನು, ನಿನ್ನ ಆಣೆ ಮಾಡಿ ಹೇಳ್ತೀನೆ—ನನಗೆ ಈ ಯಾವ ವಿಷಯವೂ ಗೊತ್ತಿಲ್ಲ. ಸುಷಮಾಳನ್ನು ನಾನೆಂದೂ, ಆ ದೃಷ್ಟಿಯಿಂದ ನೋಡಲೇ ಇಲ್ಲ, ನೀವೆಲ್ಲ ತಪ್ಪು ತಿಳಿದಿರಿ. ಒಂದು ವೇಳೆ, ನಾನು —ನಿಮಗೆ, ಸುಷಮಾಳನ್ನು ಮದುವೆ ಆಗ್ತೀನೆ ಅಂತ ಯಾವಾಗಲಾದರು ಭಾಷೆ ಕೊಟ್ಟಿದ್ದರೆ—ಹೇಳೀ—ನಾನು ನನ್ನ ತಪ್ಪು ಒಪ್ಪಿಕೊಳ್ತೀನೆ."

ಇಬ್ಬರಲ್ಲಿ ಒಬ್ಬರೂ ಮಾತಾಡಲಿಲ್ಲ. ಸುಷಮಾಳ ಬಿಕ್ಕಳಿಕೆ ಸದ್ದಷ್ಟೇ ಕೇಳಿಸುತ್ತಿತ್ತು. ಜೀಪು, ಬಂದು ಮನೆಯ ಮುಂದೆ ನಿಂತಿತ್ತು. ಜೀಪನ್ನಿಳಿಯುವ ಮುನ್ನ ಹೇಮಂತ ಹೇಳಿದ.

"ಅಮ್ಮಾ! ..ಈಗಲೂ ಕಾರ್ಯ ಮಿಂಚಿಲ್ಲ, ನನ್ನದು ತಪ್ಪೇನಿದೆ ಹೇಳು ..ನಾನು ಶಾಂತಿಯನ್ನು ಬಿಟ್ಟು .."

"ನನಗೆ ಬೇರೊಬ್ಬರ ಎಂಜಲು ಬೇಕಿಲ್ಲ ." ಸಿಡಿಲಿನಂತೆ, ಗುಡುಗು-ಬಿರುಗಾಳಿಯಂತೆ ನುಡಿದಳು ಸುಷಮಾ. ಅಮ್ಮಾ, ಅವಳನ್ನು ಹಿಂಬಾಲಿಸಿದಳು

## ಹತ್ತು

ರಾತ್ರಿ ಹನ್ನೆರಡಕ್ಕೆ ಸಮೀಪಿಸಿದ್ದರೂ, ಯಾರಿಗೂ ನಿದ್ದೆ ಬಂದಿರಲಿಲ್ಲ. ದೆವ್ವಗಳಂತೆ ಕುಳಿತಿದ್ದರು. ಸುಷಮಾ, ಶಾರದಮ್ಮನವರ ಮಡಿಲಲ್ಲಿ ಮಲಗಿ ಬಿಕ್ಕುತ್ತಿದ್ದರೆ, ಅವರು ಗೋಡೆಗಾತು ಕುಳಿತಿದ್ದರು ಹೇಮಂತ,ಪೆ ಲ್ಲಂಗದ ಮೇಲೆ ಬೋರಲು ಬಿದ್ದಿದ್ದ.

"ಟ್ರಿನ್ ..ಟ್ರಿನ್" ಫೋನಿನ ಗಂಟೆ ಬಾರಿಸಿತು. ಹೇಮಂತ ಅನಿವಾರ್ಯವಾಗಿ ಮೇಲೆದ್ದ. ರಿಸೀವರ್ ಎತ್ತಿ "ಹಲೋ" ಎಂದ. ಅವನ ಧ್ವನಿಯಲ್ಲಿ ಜೀವವೇ ಇರಲಿಲ್ಲ. ಆ ಕಡೆಯಿಂದ ಸೂರಪ್ಪ ಮಾತಾಡ್ತಾ ಇದ್ದ.

"ಸರ್ ..ಸರ್, ...ಬೇಗ—ರೋಜಲೀನಾ ಮನೆಯ ಪಕ್ಕದ ಓಣಿಗೆ ಬನ್ನಿ...ನಾನು, ಧನಂಜಯ ಅವರಿಗೂ ಫೋನು ಮಾಡಿದ್ದೇನೆ. ...ಬೇಗ ಬನ್ನೀ...."

"ಏನಾಯ್ತು ?"

"ನೀವು ಬನ್ನಿ ಸಾರ್. ಎಲ್ಲಾ ಗೊತ್ತಾಗುತ್ತೆ"—ಸಂಬಂಧ ಕಡಿದು ಹೋಯಿತು:

ಹೇಮಂತ ಬಟ್ಟೆ ಧರಿಸಿ, ಅಮ್ಮನ ಹತ್ತಿರ ಬಂದು ನಿಂತ—"ಸ್ವಲ್ಪ ಹೊರಗೆ ಹೋಗಿ ಬರತೀನಿ. ಬಾಗಿಲು ಹಾಕಿಕೋ." ಅವರು ಯಾವ ಉತ್ತರವನ್ನೂ ಕೊಡಲಿಲ್ಲ. ಹೇಮಂತ ಹೊರಗೆ ಬಂದ.

ಸೂರಪ್ಪ ಅವನಿಗಾಗಿ ಕಾಯ್ದು ನಿಂತಿದ್ದ ಅವನ ಜೊತೆ ರೋಜಲೀನಾ, ಜೀಪು ನೋಡುತ್ತಲೂ ಓಡಿಬಂದ ಸೂರಪ್ಪ. ಹೇಮಂತ ಕೆಳಗೆ ಇಳಿಯುತ್ತಿದ್ದಂತೆ. ಒಂದೇ ಉಸುರಿಗೆ ಹೇಳಿದ.

"ಸರ್ .ಈ ಗಲ್ಲಿಯ ಕೊನೆಯ ಮನೆಯಲ್ಲಿ 'ಖೋಟಾ ನೋಟು' ಪ್ರಿಂಟ್ ಮಾಡ್ತಾ ಇದ್ದಾರೆ."

"ಆಂ ಏನಂದೆ ?—ಖೋಟಾ ನೋಟಿ ?"

"ಹೌದು ಸಾರ್ ! ನಾನೇ ಕಣ್ಣಾರೆ ನೋಡಿ ಬಂದು ನಿಮಗೆ ಫೋನು ಮಾಡಿದೆ."

"ಅದು, ನಿನಗೆ ಹೇಗೆ ಗೊತ್ತಾಯ್ತು ?"

"ಅದು ನನಗೆ ಗೊತ್ತಾಗಲಿಲ್ಲ ಸಾರ್ !"

"ಮತ್ತೆ !"

"ಎಲ್ಲಾ ನಮ್ಮ ರಿವಿ ಕರಾಮತ್ತು ಸಾರ್. ನಾನು ಮೊದಲೇ ಹೇಳಿರಲಿಲ್ಲವೇ, ಇದು ಒಳ್ಳೇ ಪೋಲೀಸ್ ನಾಯಿ ಆಗತ್ತೇ—ಅಂತ !"

ಸೂರಪ್ಪ, ನನಗೆ ನಿನ್ನ ಒಗಟಿನ ಮಾತು ಅರ್ಥವಾಗಲ್ಲ, ಸ್ವಲ್ಪ ಬಿಡಿಸಿ ಹೇಳು ..."

ಅಷ್ಟರಲ್ಲಿ, ಧನಂಜಯ ಜೀಪಿನಿಂದ ಬಂದಿಳಿದ. ಅವನಿಗೂ ವಿಷಯ ತಿಳಿಯಿತು ಸೂರಪ್ಪ ಹೇಳಲಾರಂಭಿಸಿದ.

ಪಿಂಕಿಯನ್ನು ಹುಡುಕಿ ಕೊಡುವ ಕೆಲಸವನ್ನು ಹೇಮಂತ ವಹಿಸುತ್ತಲೇ, ಮನಸ್ಸಿಗೆ ಬೇಸರವಾದದ್ದು ನಿಜ. ಆದರೆ ಮಾಡುವದೇನು ? ಬಾಸ್ ಹೇಳಿದಹಾಗೆ ಕೇಳಲೇಬೇಕಲ್ಲವೇ ? ಒಂದೆರಡು ಗಂಟೆ ಆಚೆ ಈಚೆ ಸುತ್ತಾಡಿ ಹೇಗೆ 'ಮಾಡಬೇಕೆಂದು ಯೋಚಿಸಿದ ಸೂರಪ್ಪ ರೋಜಲೀನಾ ಮನೆಗೆ ಬಂದಾಗ, ಸಂಜೆ ಐದಕ್ಕೆ ಸಮೀಪಿಸಿತ್ತು. ಸೂರಪ್ಪ ಕರೆಗಂಟೆ ಬಾರಿಸಿದ. ಒಳಗಿನಿಂದ "ಕಮಿನ್—ಬಾಗಿಲು ತೆರೆದಿದೆ" ಎಂಬ ಆದೇಶ ಕೇಳಿಸಿತು. ಆತ ಒಳಗೆ ಬಂದ.

"ನಾನು bath roomನಲ್ಲಿದ್ದೇನೆ. Please be seated" ಎಂದಿತು ನಾರೀ ಕಂಠ. ಅವಳು ಏನು ಹೇಳಿದಳೋ ಅದರ ಅರ್ಥ ಸೂರಪ್ಪನಿಗೆ ಆಗಲಿಲ್ಲ. ಆದರೆ bath room ಎಂಬುದೊಂದು ಮಾತ್ರ ಕೇಳಿ ಸೋಫಾದ

ಮೇಲೆ ಕುಳಿತುಕೊಂಡ. ಅವನ ದೃಷ್ಟಿಯೆಲ್ಲ bath room ನ ಮುಚ್ಚಿದ ಬಾಗಿಲ ಮೇಲೆಯೇ ?! ಆದರೆ ಹಿಂದೆ ರೋಜಲೀನ ..ಅವಳು ಸ್ನಾನ ಮಾಡ್ತಾ ಇದ್ದಾಳೆ ಆಹಾಹಾ ! ಕಲ್ಪನೆ ಮಾತ್ರದಿಂದ, ಸೂರಪ್ಪ ಆನಂದಿತನಾದ ಅವನಿಗೂ ನಲವತ್ತು ವರ್ಷಗಳು ಇನ್ನೂವರೆಗೂ ಮದುವೆಯಾಗಿಲ್ಲ. ರೋಜಲೀನಾ ಶ್ರೀಮಂತ ವಿಧವೆ ಅವಳಿಗೂ ನಲವತ್ತು ಮೀರಿ ವಯಸ್ಸಾಗಿದೆ. ಒಂದು ವೇಳೆ ಆಕೆಯನ್ನು ಮದುವೆಯಾದರೆ ? ...!

ಸೂರಪ್ಪ ಕಣ್ಣು ಮುಚ್ಚಿ ಅವಳೊಡನೆ ಮದುವೆ ಮಾಡಿಕೊಂಡು bash roomನಲ್ಲಿ Romance ಮಾಡುವುದನ್ನು ಕಲ್ಪಿಸಿಕೊಂಡು ಪರವಶನಾದ.

ಅದೇ ಕ್ಷಣದಲ್ಲಿ ಖಟಕ್ ಎಂದು ಬಾಗಿಲು ತೆರೆಯಿತು. ಟವೆಲ್ ಸುತ್ತಿಕೊಂಡ ರೋಜಲಿನಾ ಹೊರಗೆ ಬಂದು, "ಓಹ್ ! .ನೀನು ? ! .. ಇಲ್ಲಿಗೇಕೆ ಬಂದೆ ?" ಎನ್ನುತ ಪುನಃ bath room ಹೊಕ್ಕು ಬಾಗಿಲನ್ನು ಅರ್ಧ ತೆರೆದು ..'ಅಲ್ಲಿ ಮಂಚದ ಮೇಲೆ ನನ್ನ ಗೌನ್ ಇದೆ ಕೊಡು' ಎಂದಳು. ಸೂರಪ್ಪ, ಗೌನ್ ಎತ್ತಿಕೊಂಡ—ಆಹಾ !

ಅಯ್ಯೋ ! ಎಂಥ ಮಧುರವಾದ ಸುಗಂಧದ ವಾಸನೆ ದೇವರೇ ! ಇದರ ಭಾಗ್ಯ ನನಗಿಲ್ಲವಲ್ಲ—ಎಂದುಕೊಳ್ಳುತ್ತಾ, ಗೌನನ್ನು ಮೆದುವಾಗಿ, ಎದೆಗೊತ್ತಿಕೊಂಡು 'ಹಾಯ್' ಎಂದು ಉಸಿರು ಬಿಟ್ಟ.

"ಏಯ್ ! ..ಬೇಗ ಕೊಡು" ಎಂದಳು ಆಕೆ. ಆಕೆಗೆ ಗೌನು ಕೊಡುತ್ತಾ ಗುಲಾಬಿವರ್ಣದ ಅವಳ ಕೈಗಳ ಮೇಲೆ ದೃಷ್ಟಿ ಹರಿದು, ಮೈಮೇಲೆಲ್ಲಾ ಚೇಳು ಹರಿದಾಡಿದಂತಾಯಿತು "ನೀನು ಹೊರಗಿರು ಬಂದೆ" ಎಂದಳು ಆಕೆ. "ನನ್ನೆದುರೇ ಆಕೆ ಬಟ್ಟೆ ಧರಿಸಬಾರದೇ ?" ಎಂದುಕೊಳ್ಳುತ್ತಾ, ಆತ ಹೊರ ಬಂದು—

ಐದು ನಿಮಿಷ ಬಿಟ್ಟು, ಕಾಫಿ ಬಟ್ಟಲಿನೊಂದಿಗೆ ಬಂದ ಆಕೆ, ಸೂರಪ್ಪನಿಗೆ ಕಾಫಿ ಕೊಡುತ್ತ—" ಶಾಂತಿ ಬಂದಿರಬೇಕು ಅಂದ್ಕೊಂಡಿದ್ದೆ—ನೀವು ಬಂದದ್ದು ತಿಳಿಯಲಿಲ್ಲ ...ಕ್ಷಮಿಸಿ ಎಂದಳು

ಸೂರಪ್ಪನ ಕಿವಿಗೆ ಬಿದ್ದ ಶಬ್ದ—ನಂಬಲೊಲ್ಲದು ಅವನ ಮನ. ನೀನು ಅನ್ನುತ್ತಿದ್ದ ಅವಳು ! "ನೀವು" ಅಂದಳು ಕ್ಷಮಿಸಿ ಅಂದಳು ಮನೆ 'ಕಾಫಿ' ಬೇರೆ ! ವಾಹರೆ ಬಲಭೀಮ ! ಇಂದು ನನ್ನ ಮೇಲೆ ಪ್ರಸನ್ನನಾದ—ಎಂದುಕೊಂಡು—ಕಾಫಿ ಹೀರಿದ ಸಂತಸದಿಂದ !

ಆಮೇಲೆ ಪ್ರಾರಂಭವಾಯಿತು ಪಿಂಕಿ ಶೋಧನೆ. ಮೊದಲು ಅದರ ಮನೆ

ಊಟದ ತಟ್ಟೆ ಎಲ್ಲಾ ನೋಡಿ ಅದು ಎಲ್ಲೆಲ್ಲಿ ಓಡಾಡುತ್ತಿತ್ತೋ ಅದನ್ನೆಲ್ಲ ನೋಡಿ ಕೊನೆಗೆ ಅವಳ ಬೆಡ್ ರೂಂಗೆ ಒಂದ. ಅದು ಗಾದಿ ಮೇಲೆ ಓಡಾಡುತ್ತಿತ್ತಾ ಎಂದು ಕೇಳಿದ. ಆಕೆ ನಾಚುತ್ತ 'ಹೌದು' ಅಂದಳು. ಸೂರಪ್ಪ ಗಾದಿಯ ಮೇಲೆ ಕೂತುಕೊಂಡ. ಪೂರಾ ಆಳಕ್ಕೆ ಇಳಿದುಹೋದ, ಅದೆಂತಹ ಸುಖ ? ! ...ವಾಹ್ ತುಂಬಾ ಮೆತ್ತಗಿದೆ ! ಅಷ್ಟೇ ಸುಂದರ ವಾಗಿದೆ ... ನಿಮ್ಮ ಅಂದ ! ಅವಳ ಗಲ್ಲವೆಲ್ಲಾ ಗುಲಾಬಿ ಅಂತಾದವು.

"ಹಾಂ ! ನಾನಿನ್ನು ರಾತ್ರಿ ಬರ್ತೀನೆ ಎಂದ ಒಮ್ಮೆಲೇ !

"ಆಂ ? ! ..ರಾತ್ರಿಗಾ ?! ...ಏತಕ್ಕೆ ?!" ಗಾಬರಿಯಾಗಿ ಆಕೆ ಕೇಳಿದಳು.

"ಪಿಂಕಿ ಹುಡುಕಲು .."

"ಹೋ .ಹೀ ಈಜ್ "ಹೀಗಾ ?

"ಮತ್ತೆ, ನೀವು ಏತಕ್ಕೆಂದು ತಿಳಿದಿದ್ದೀರಿ?" ಸೂರಪ್ಪ ಇಷ್ಟಗಲ ಬಾಯಿ ಮಾಡಿ ಕೇಳಿದಾಗ ಆಕೆ, ಉತ್ತರ ಕೊಡದೇ ಒಳಗೋಡಿದಳು. ಸೂರಪ್ಪ ಮನದಲ್ಲಿ ಮುಂಡಿಗೆ ತಿನ್ನುತ್ತ ಮರಳಿದ.

ಸಂಜೆ ಮನೆಗೆ ಬಂದಾಗ, ಮನೆಯಲ್ಲಿ ಯಾರೂ ಇರಲಿಲ್ಲ. ರಿಮಿ ಮಾತ್ರ ಕೂಗಾಡುತ್ತಿತ್ತು. ಅದನ್ನುಬಿಚ್ಚಿಕೊಂಡು ಹೊರಗೆ ಬಂದಾಗ ಕತ್ತಲಾಗಿತ್ತು. ಇಂದು ರಾತ್ರಿ ತನ್ನೊಡನೆ ರಿಮಿಯನ್ನೂ ಕರೆದೊಯ್ಯಲು ಆತ ನಿರ್ಧರಿಸಿದ.

ತಾನು ಊಟ ಮಾಡಿ, ರಿಮಿಗೂ ಹಾಲು ಕುಡಿಸಿ ಆತ ರೋಜೀನಾಳ ಮನೆಗೆ ಬಂದಾಗ, ರಾತ್ರಿ ಒಂಭತ್ತು ಮೀರಿತ್ತು. ಪಿಂಕಿ ಹುಡುಕಲು ಆಕೆ ಸಹ ಸೂರಪ್ಪನೊಂದಿಗೆ ಹೊರಗೆ ಬಂದಳು

ರಾತ್ರಿಯ ಮಾದಕ ವಾತಾವರಣ ತಂಗಾಳೀ . ಹೂವುಗಳು ಘಮಘಮ ವಾಸನೆ ಸೂರಪ್ಪ ಒಂದೆರಡು ಬಾರಿ ಆಕಸ್ಮಿಕವಾಗಿ ಆಕೆಗೆ ತಾಕಿದ್ದ. ಆಕೆಯ ಮೈ 'ಜುಂ' ಎಂದಿತು. ಆಕೆ, ಪ್ರತಿಭಟಿಸಲಿಲ್ಲ, ತೆರೆಯೊಂದು ತಡೆಯಿತು. ಭಯಪಟ್ಟವರಂತೆ, ಆಕೆ ಸೂರಪ್ಪನನ್ನು ತಬ್ಬಿಕೊಂಡೇ ನಡೆದಳು. ಸೂರಪ್ಪ ಸಂತಸದಿಂದ ಗಡಗಡ ನಡುಗಿದ.

ಒಂದು ಗಂಟೆ ಸುತ್ತಿದ್ದು, ವ್ಯರ್ಥವಾಯಿತು. ರಿಮಿ ಕುಂಯ್ಯ-ಕುಂಯ್ಯ ಎಂದಾಗ ಸೂರಪ್ಪ ಅದನ್ನು ಬಿಟ್ಟ ಅದು, ಪಕ್ಕದ ಗಲ್ಲಿಯಲ್ಲಿ ನುಗ್ಗಿತು. ಸೂರಪ್ಪ ರೋಜಲಿನಳ ಕಡೆ ನೋಡಿ, "ಮೇಡಮ್ I am so sorry.... ನಿಮ್ಮ ಪಿಂಕಿ ಸಿಕ್ಕಲಿಲ್ಲ" ಎಂದ. ಆಕೆ, ಭಾವುಕಳಾಗಿ ಅವನ ಕೈ, ತನ್ನ ಕೈಯಲ್ಲಿ ತೆಗೆದುಕೊಂಡು, "ಪಾಪ ! ನೀವೂ ತುಂಬಾ ಕಷ್ಟ ಪಟ್ಟಿರಿ.... ಸೂರಪ್ಪ, ನೀವು ತುಂಬಾ ಒಳ್ಳೆಯವರು." ಎಂದಳು. ಸೂರಪ್ಪ, ಅವಳ ಕೈ

ಹಿಡಿದು ಎಳೆದ, ಆಕೆ ಅವನೆದೆಯ ಮೇಲೆ ವಾಲಿದಳು.

ದೂರದಲ್ಲಿ ಎಲ್ಲೋ ಒಂದು ಕಡೆ ಕತ್ತೆಯೊಂದು ಅರಚಿದ್ದಕ್ಕೆ, ಒಮ್ಮೇಲೆ ಸೂರಪ್ಪ ಬೆಚ್ಚಿಬಿದ್ದ. ರೋಜಲಿನ ಅವನನ್ನು ತಬ್ಬಿಕೊಂಡೇ ಇದ್ದವಳು, ಬಡಬಡಿಸಿಕೊಂಡು ಎದ್ದು ನಿಂತಳು. "ಅರೆ! ಅರೆ! ರಿಮಿ ಎಲ್ಲಿ?"— ಸೂರಪ್ಪ ಪಕ್ಕದ ಗಲ್ಲಿ ಹೊಕ್ಕ. ರೋಜಲೀನ ಹಿಂಬಾಲಿಸಿದಳು.

ಗಲ್ಲಿಯಿಂದ ಅವರು ದೂರ ಬಂದರು ಮನೆಗಳೆಲ್ಲ ಮುರುಕು. ಬಯಲು. ನಾಲ್ಕಾರು ಮರಗಳು ಮರಗಳ ಮಧ್ಯೆ ಮನೆಯೊಂದು ಕಂಡಿತು. ರಿಮಿ, ಸಿಗಲಿಲ್ಲ. ಆ ಮನೆಗೇನಾದರೂ ಹೋಗಿವೆಯೋ ಎಂದು ಕೊಂಡು, ಅಲ್ಲಿಗೆ ಬಂದರು ಅದೊಂದು ರಹಸ್ಯಮಯ ಬಂಗಲೆಯಂತೆ ಕಂಡಿತು, ಮೆಲ್ಲಗೆ, ಗೋಡೆ ಹತ್ತಿ ಜಿಗಿದರು. ಗೇಟಿಗೆ ಬೀಗ ಹಾಕಿತ್ತು. ಎಲ್ಲೋ ರಿಮಿ, ಕುಂಯ್-ಕುಂಯ್ ಮಾಡಿತು. ಅತ್ತ ಹೋದರು ಅಲ್ಲಿಲ್ಲಾ ದೃಷ್ಟಿ ವಿಚಿತ್ರವಾಗಿತ್ತು ...ಮಧ್ಯ ರಿಮಿ, ಅದರ ಸುತ್ತ ನಾಲ್ಕು ರಾಕ್ಷಸನಂತಹ ನಾಯಿಗಳು. ಅವು ಪ್ರೇಮ ಸಂಭಾಷಣೆ ನಡೆಸಿದ್ದವು "ಓಹೋ! ರೋಮ್ಯಾನ್ಸ"ಎಂದ ಸೂರಪ್ಪ! ಮೆಲ್ಲಗೆ, ರೋಜಾಲೀನಾ ನಾಚಿ ನಿರಾದಳು.

ಸೂರಪ್ಪ ಆಚೆ-ಈಚೆ ನೋಡಿದ. ಚಿಕ್ಕ ಕಿಟಕಿ ಕಂಡಿತು. ಮೆಲ್ಲಗೆ ಒಳಗೆ ಇಣುಕಿದ. ಅದೊಂದು ಪ್ರೆಸ್. ಅಲ್ಲಿ ನಕಲಿ ನೋಟ್ ಪ್ರಿಂಟ್ ಮಾಡ್ತಾ ಇದ್ದರು. ಹೊರಗಡೆ ನಾಲ್ಕು ನಾಯಿ ಕಾವಲು. ಹೀಗಾಗಿ, ಅವರು, ನಿಶ್ಚಿಂತ ರಾಗಿದ್ದರು. ರಿಮಿಯಿಂದಾಗಿ, ಸೂರಪ್ಪ ಅವನ್ನು ಕಂಡು ಹಿಡಿದ .. ರೋಜ ಲೀನಾಳೊಂದಿಗೆ ಅದೇ ರೀತಿ ಹೊರಗೆ ಬಂದ.

ಹೇಮಂತ ಹಾಗೂ ಧನಂಜಯಗೆ ಫೋನ್ ಮಾಡಿದ.

ನಡೆದ ವಿಷಯ ತಿಳಿದು, ಹೇಮಂತ ಸೂರಪ್ಪನ ಬೆನ್ನು ಚಪ್ಪರಿಸಿ, 'ಶಹಬಾಷ್' ಸೂರಪ್ಪ—ಇನ್ನು ನೀನು ಹೆಡ್ ಕಾನ್‌ಸ್ಟೆಬಲ್ ಆಗ್ತೀಯಾ— ಎಂದಾಗ ಹೆಮ್ಮೆಯಿಂದ ಅವನೆದೆ ಬೀಗಿತು.

ಮುಂದೆ ಅರ್ಧ ಗಂಟೆಯಲ್ಲಿ ನಕಲಿ ನೋಟು ಪ್ರಿಂಟ್ ಮಾಡುವ ಖದೀಮರು ಸಿಕ್ಕಿಹಾಕಿಕೊಂಡರು. ಎಲ್ಲರನ್ನೂ ಜೀಪಿನಲ್ಲಿ ಹಾಕಿಹೊರಟಾಗ ಸೂರಪ್ಪ. ಅತ್ತಿತ್ತ ನೋಡಿದ. ರಿಮಿ ಇಲ್ಲ... "ಅರೆ! ರಿಮಿ ಎಲ್ಲಿ?..." ರೋಜಲೀನಾ ಹಾಗೂ ಸೂರಪ್ಪ, ಉಳಿದವರಿನ್ನೂ ರಿಮಿಯತ್ತ ನಡೆದರು..... ಸ್ವಲ್ಪ ಅಂತರದಲ್ಲಿ, ರೋಜಲೀನಾಳ ಮನೆಯಿಂದ ಕೆಲವೇ ಅಂತರದಲ್ಲಿದ್ದ ಹಳ್ಳದಿಂದ ರಿಮಿಯ ಕುಂಯ್-ಕುಂಯ್ ಸದ್ದು ಬಂತು. ಇಬ್ಬರೂ ಓಡಿದರು.

ಹಳ್ಳದಲ್ಲಿ ಇಣಕಿದರು. ಅರೆ!?—ಹಳ್ಳದಲ್ಲಿ ರವಿಯ ಜೊತೆ ಪಿಂಕಿ ಸಹ ಇದೆ. ಪಾಪ! ಹಳ್ಳದಲ್ಲಿ ಬಿದ್ದು ಅದು ಮೇಲೆ ಬರಲಾಗದೇ, ಒದ್ದಾಡುತ್ತಿತ್ತು. ಸೂರಪ್ಪ, ಕೆಳಗಿಳಿದು—ಎರಡನ್ನೂ ಮೇಲೆ ತಂದ, ಅದನ್ನು ಅಪ್ಪಿಕೊಂಡು ಲೊಚ-ಲೊಚ ಮುದ್ದು ಕೊಟ್ಟಳು ಆಕೆ.

"ಮತ್ತೆ ನನಗೆ?" ಸೂರಪ್ಪ ತುಂಟತನದಿಂದ ಕೇಳಿದ. ಆಕೆ, ಮನೆಕಡೆ ಓಡುತ್ತಾ "ಥೂ—ನೀವು ತುಂಬಾ ಕೆಟ್ಟೋರು. ಅದು ಈಗಲ್ಲ ಆಮೇಲೆ" —ಎಂದಳು'

ಸೂರಪ್ಪನ ಕೈಗೆ ಆಕಾಶ ಮಲ್ಲಿಗೆ ಬಂದು ಸಿಕ್ಕಷ್ಟು ಸಂತಸವಾಯಿತು. ಇದಕ್ಕೆ ಕಾರಣ ರವಿ. ಅದನ್ನು ಮುದ್ದಿಸಲು ಬಾಯಿ ತೆರೆದ. ಅದು ಉಚ್ಚೆ ಮಾಡಿತು. 'ಥುತ್' ಎಂದ.

## ಹನ್ನೊಂದು

ಹೇಮಂತ ಹಾಗೂ ಶಾಂತಿಯ ಮದುವೆಯ ದಿನ ನಿಶ್ಚಯಿಸಲಾಗಿತ್ತು. ಮದುವೆ ಕೇವಲ ಹದಿನೈದು ದಿನಗಳು ಮಾತ್ರ ಉಳಿದಿದ್ದವು ಸುಷಮಾ'. ತಾನು ಊರಿಗೆ ಹೋಗುವದಾಗಿ ಹಟ ಹಿಡಿದಳು. "ಮದುವೆ ಮುಗಿಸಿ ಕೊಂಡು ಹೋಗು" ಎನ್ನಲು ಸಹ ಬಾಯಿ ಇಲ್ಲದ ಹೇಮಂತ ಮೌನವಾಗಿ ಅವಳೆದುರು ನಿಂತಿದ್ದ. ಶಾರದಮ್ಮ ಮೌನವಾಗಿ ರೋಧಿಸುತ್ತಿದ್ದರು. ತನ್ನ ಸೊಸೆ ಎಂದು ಕರೆತಂದವಳನ್ನು ಮನೆಯಿಂದ ಹೊರಗಟ್ಟುವ ಪ್ರಸಂಗ ವಿಧಿ—ಅವರ ಪಾಲಿಗೆ ತಂದಿತ್ತು. ಹೇಮಂತ ಸುಷಮಾಳ ಕೈಹಿಡಿದು ಶಾಂತನಾಗಿ ನುಡಿದ.

"ಸುಷಮಾ. ವಿಧಿ ನಮ್ಮೊಡನೆ ವಿಚಿತ್ರ ಆಟವಾಡಿದೆ. ಇದರಲ್ಲಿ ಯಾರ ತಪ್ಪು ಇದೆ ಎಂದು ವಿಚಾರಿಸುವುದು ಬೇಡ. ಅದರಲ್ಲಿ ನನ್ನ ತಪ್ಪೇನಾದರೂ ಇದ್ದರೆ ಹೇಳು ..ನಾನೇನಾದರೂ, ನಿನಗೆ—ನಿನ್ನನ್ನೇ ಮದುವೆಯಾಗುವೆ ನೆಂದು ಭಾಷೆ ಕೊಟ್ಟಿದ್ದೆನಾ?—ಅಥವಾ ಆರೀತಿ ಭಾವನೆ ನಿನ್ನ ಮನದಲ್ಲಿ ಬರುವಂತೆ ನಡೆದುಕೊಂಡೆನಾ?—ಅದೂ ಹೋಗಲೀ—ಮ್ಮಾವನ ಮುಂದಾ ಗಲೀ, ಅತ್ತೆಯ ಮುಂದಗಲೀ, ಈ ರೀತಿಯ ಘಟನೆ ನಡೆದಿದ್ದವೆ?— ನಿಜ ಹೇಳು—ಒಂದು ವೇಳೆ ಹಾಗೇನಾದರೂ ಆಗಿದ್ದರೆ ನಾನು—ನಾನು— ನೀನು ಹೇಳಿದಂತೆ ಕೇಳುತ್ತೇನೆ."

ಸುಷಮಾ ಒಂದು ನಿಮಿಷ ಮೌನವಾಗಿದ್ದು, ನುಡಿದಳು. "ಇಲ್ಲ ಹೇಮಂತ! .ಇದರಲ್ಲಿ ನಿನ್ನ ತಪ್ಪು ಎಳ್ಳಷ್ಟೂ ಇಲ್ಲ. ಕೇವಲ ನಿನ್ನೊಬ್ಬ ನನ್ನು ಬಿಟ್ಟು ಉಳಿದ ನಾವೆಲ್ಲರೂ ತಪ್ಪುಗಾರರು. ನಾವೇ—ನಾವಾಗಿ ಕನಸಿನ ಬಲೆ ಹೆಣೆದು, ಅದರಲ್ಲಿ ಸಿಕ್ಕಿ ಹಾಕಿಕೊಂಡೆವು. ನನ್ನ-ನಿನ್ನ ಒಡನಾಟ— ಸಾಮಿಪ್ಯ—ಮಾತುಕತೆ. ಅಪಾರ್ಥಕ್ಕೆ ಹಾದಿ ಮಾಡಿ ಕೊಟ್ಟಿತು. ಆ ರೀತಿಯಿಂದ ವಿಚಾರಿಸಿದರೆ, 'ನಾವೇ' ನಿಜವಾದ ತಪ್ಪು ಗಾರರು, ನಾವೆಲ್ಲ ಸೇರಿ, ನಿನಗೆ ಮಾನಸಿಕ ಹಿಂಸೆ ಕೊಟ್ಟೆವು. ನಮ್ಮನ್ನು ಕ್ಷಮಿಸು. ಇನ್ನು ನನಗೆ ಊರಿಗೆ ಹೋಗಲು ಒಪ್ಪಿಗೆ ಕೊಡು!"

"ಮದುವೆಗೆ ನಿಲ್ಲುವದಿಲ್ಲವೆ?"

ಉಕ್ಕಿ ಬಂದ ದುಃಖವನ್ನು ಸುಷಮಾ ತಡೆದಕೊಂಡಳು. ಮೇಲಿನ ಹಲ್ಲುಗಳಿಂದ ಕೆಳಗಿನ ತುಟಿಯನ್ನು ಬಲವಾಗಿ ಕಚ್ಚಿ ನುಡಿದಳು.

"ಇಲ್ಲ .ನನಗೆ ಹೋಗಲು ಬಿಡು"

"ಸರಿ—ಒತ್ತಾಯ ಮಾಡಲಾರೆ. ಒಂದು ಕೆಲಸ...ಅಷ್ಟು ಉಪಕಾರ ಮಾಡು. ಇಂದು ಒಂದು ದಿನ ಇರು ಸಂಜೆ ನನ್ನೊಡನೆ ಬಂದು ಮದುವೆಗೆ ಬಟ್ಟೆ ಆರಿಸು ...ಅಮ್ಮ ಬರುವ ಹಾಗಿಲ್ಲ, ನಾಳೆ ಬೆಳಗ್ಗೆ ಸೂರಪ್ಪ—ನಿನ್ನನ್ನು ಊರಿಗೆ ಬಿಟ್ಟು ಬರುತ್ತಾನೆ."

ಬಹು ಪ್ರಯಾಸದಿಂದ ಸುಷಮಾ "ಆಗಲಿ" ಅಂದಳು.

"ಸಾಯಂಕಾಲ, ಹೇಮಂತ ಹಾಗೂ ಸುಷಮಾ ಪೇಟೆಗೆ ಹೋಗಿ ಜವಳಿ ಖರೀದಿ ಮಾಡಿದರು. ಮದುವೆ ಸೀರೆ, ಪೀತಾಂಬರ, ಆರಿಸುವಾಗ ಸುಷಮಾಳ ಹೃದಯದಲ್ಲಿ ಕತ್ತರಿ ಆಡಿಸಿದಂತಾಯಿತು. ರಾತ್ರಿ ಯಾರೂ ಸರಿಯಾಗಿ ಊಟ ಮಾಡಿಲ್ಲ—ನಿದ್ದೆ ಸಹ. ಬೆಳಗು ಮುಂಜಾನೆ, ಸ್ನಾನ ಮಾಡಿ ತಿಂಡಿತಿಂದ ಶಾಸ್ತ್ರ ಮಾಡಿದ, ಸುಷಮಾ ಹೊರಟು ನಿಂತಳು. ಅವಳ ಹಣೆಗೆ ಕುಂಕುಮ ಹಚ್ಚಿ ಅವಳನ್ನು ತಮ್ಮೊಂದಿಗೆ ಬಲವಾಗಿ ಒತ್ತಿಕೊಂಡು ಶಾರದಮ್ಮ ನುಡಿದಳು.

"ಮಗು....ನನ್ನ ಮನೆಯ ಸೊಸೆ ಎಂದು ಹೇಳಿ ನಿನ್ನನ್ನು ಕರೆ ತಂದೆ ಆದರೆ ಈಗ, ಪರಕೀಯಳನ್ನಾಗಿ ಮಾಡಿ ಹೊರಹಾಕುತ್ತಿದ್ದೇವೆ. ಕಂದಾ . ನನ್ನನ್ನು ಕ್ಷಮಿಸು ..."

"ಇಲ್ಲ ಅತ್ತೆ! .. ಇದರಲ್ಲಿ ನಿನ್ನ ತಪ್ಪು ಇಲ್ಲ.. ಅತ್ತೆ ನನಗೆ ಎರಡು ಮಾತು ಕೊಡುವೆಯಾ?"

"ಹೇಳು ಮಗು, ಕೈಲಾದರೆ ನಡೆಸಿಕೊಡುತ್ತೇನೆ."

"ಒಂದನೆಯದಾಗಿ, ನೀನು—ಕೊರಗು ಹಚ್ಚಿಕೊಂಡು ಹೇಮಂತನಿಗೆ ಹಿಂಸೆ ಕೊಡಬಾರದು...."

ಶಾರದಮ್ಮ ಮಾತಾಡಲಿಲ್ಲ.

"ಎರಡನೆಯದಾಗಿ, ಶಾಂತಿಯನ್ನು ನನ್ನಂತೆಯೇ ನೋಡಬೇಕು."

"ಅಮ್ಮಾ, ಸುಷಮಾ—ನೀನು ಹೆಣ್ಣಲ್ಲ ತಾಯಿ ! ..ನೀನು ದೇವತೆ ! ಎಂಥ ದೊಡ್ಡ ಗುಣವಿದೆಯಲ್ಲಮ್ಮಾ! ನಿನ್ನಲ್ಲಿ ..ನಿನ್ನೆದೆಯನ್ನು ಬೇರೊಬ್ಬರು ಕಸಿದು ತಿನ್ನುವಾಗ, ನೀನು ಅವರಿಗೆ ಒಳ್ಳೆಯದು ಮಾಡುತ್ತಿದ್ದೀಯಲ್ಲಾ?! —ಸುಷಮಾ—ನಿನ್ನ ಮುಂದೆ ನಾನು ಚಿಕ್ಕವಳಾದೆ !"

ಸುಷಮಾ, ಶಾರದಮ್ಮಳನ್ನು ತಬ್ಬಿಕೊಂಡು ಬಿಕ್ಕಿಬಿಕ್ಕಿ ಅತ್ತಳು.

ಜೀಪು ಬಂದು ನಿಂತಿತು. ಸೂರಪ್ಪ, ಸೂಟ್‌ಕೇಸು ಅದರಲ್ಲಿರಿಸಿದ. ಸುಷಮಾ ಹೇಮಂತನ ಕಡೆ ಹೊರಳಿದಳು

"ಹೇಮಂತಾ! ಬೆಟ್ಸನ್ನು ನಾನು ಸೋತೆ? .ನೀನು ಗೆದ್ದೆ—ತೆಗೆದುಕೋ ಸೀಬೆ ಹಣ್ಣು !"

ಅವಳ ಕೈಯಲ್ಲಿ ಒಂದು ಸೀಬೆಕಾಯಿ. ತದೇಕಚಿತ್ತದಿಂದ ಹೇಮಂತ, ಆ ಸೀಬೆಕಾಯಿಯನ್ನೇ ನೋಡಿ ಹೇಳಿದ

"ಹೀಗೇ ಬೇಡ ! .ಲಂಗದಲ್ಲಿ ಹಾಕಿ ಕಚ್ಚಿಕೊಡು" ಸುಷಮಾ, ಸೀಬೆ ಕಾಯಿ ಲಂಗದಲ್ಲಿ ಹಾಕಿ, ಕಚ್ಚಿ ಎರಡು ತುಂಡು ಮಾಡಿಕೊಟ್ಟಳು. ಒಂದು ತುಂಡು ಅವಳ ಕೈಲಿಟ್ಟು ಒಂದು ತುಂಡು ತಾನು ತೆಗೆದುಕೊಂಡು ಹೇಮಂತ ಹೇಳಿದ.

"ಸೋಲು-ಗೆಲುವುಗಳಲ್ಲಿ ನಮ್ಮಿಬ್ಬರಿಗೂ ಸಮಪಾಲಿರಲಿ."

ಮರುದಿನ ಸೂರಪ್ಪ ಬಂದು, ಹೃದಯ ವಿದ್ರಾವಕ ಘಟನೆ ವಿವರಿಸಿದ, ಇಲ್ಲಿಯ ಸುದ್ದಿ ತಿಳಿದು, ಗೋಪಾಲರಾಯರು ಭಾವಿ ಬಿದ್ದಿದ್ದರೆಂದೂ ಸೂರಪ್ಪ ಭಾವಿಗೆ ನೆಗೆದು ಅವರನ್ನು ಉಳಿಸಿದನಂತೆ. ಅವನ ಅತ್ತೆ, ಬಾಯಿಗೆ ಬಂದಂತೆ ಹೇಮಂತನನ್ನು ಶಪಿಸಿದರು, ನೆರೆದಜನ ಬಾಯಿಗೆ ಬಂದಂತೆ, ಉಗಿದರು. ಆದರೆ, ಸುಷಮಾ ಮಾತ್ರ ಶಾಂತವಾಗಿದ್ದು ಅವರೆಲ್ಲ ರಿಗೂ ಸಮಾಧಾನ ಹೇಳಿದಳು.

ಸೂರಪ್ಪ ಇದನ್ನೆಲ್ಲ ಹೇಳುವಾಗ ಬಿಕ್ಕುತ್ತಿದ್ದ. ಅವನ ಕಪೋಲಗಳ ಮೇಲಿನಿಂದ ನೀರು ಹರಿಯುತ್ತಿತ್ತು. ಹೇಮಂತ ಶೂನ್ಯನೋಟ್ಟು ದಿಟ್ಟಿಸುತ್ತಾ, ದೀರ್ಘಶ್ವಾಸ ಬಿಟ್ಟು—"ದೇವರೇ, ನನಗೇಕೆ ಈ ರೀತಿ ಶಿಕ್ಷೆ ಕೊಡುತ್ತಿರುವೆ" ಎಂದು ಕೇಳಿದ ಮನದಲ್ಲಿ....

ಫೋನು ಕರೆಯಿತು.. ಆ ಕಡೆಯಿಂದ ರೋಜಲೀನಾ ಮಾತನಾಡುತ್ತಿದ್ದಳು ಹಿಂದಿನ ದಿನ ಎರಡು ಬಾರಿ ಫೋನು ಮಾಡಿದ್ದಳಂತೆ! ಸೂರಪ್ಪ, ನಾನು ಊರಲ್ಲಿರಲಿಲ್ಲ ಎಂದು ಹೇಳಿದ.

"ಪಿಂಕಿ ನಿನ್ನನ್ನು ನೆನಸ್ತಾ ಇದೆ" ಅವಳು ನುಡಿದಳು.

"ಬರೀ ಪಿಂಕಿ ನೆನಸ್ತಿದ್ಯಾ?—ಅದರ ಜೊತೆ ನೀನೂ ನೆನಸ್ತಿದ್ಯಾ?!"

"ಹೋಗೀಪ್ಪಾ! ನೀವು ಭಲೆ ಕಿಲಾಡಿಗಳು! ಬರಲೇ ಇಲ್ಲಾ ಮನೇ ಕಡೆ?!"

"ಇದೀಗ ಬಂದಿರುವೆ. ಈಗ ಬೇಡ. ಸಂಜೆ ಬರುತ್ತೇನೆ—ಕತ್ತಲಾದ ಮೇಲೆ ...ಅಂದರೇ ಮಜಾ!"

"ಥೂ ಹೋಗೀಪ್ಪಾ! ..ನಿಮಗೆ ಸ್ವಲ್ಪವೂ ನಾಚಿಕೆ ಇಲ್ಲ."

ಆಫೀಸಿನಲ್ಲಿ ಹೇಮಂತ ಕೇಳಿದ.

"ಸೂರಪ್ಪ! ಯಾರದು ಫೋನು?"

ಗಾಬರಿಯಾದ ಸೂರಪ್ಪ "ಆಮೇಲೇ ...ಸಂಜೆ" ಎಂದು ಹೇಳಿದವನೇ, ಫೋನು ಕೆಳಗಿಟ್ಟು, ಹಲ್ಲು ಗಿಂಜುತ್ತಾ "ಅದೇ, ಪಿಂಕೀದು ಫೋನು" ಎಂದ.

"ಏನು? ಪಿಂಕೀದಾ?"

"ಹೌದು ಸಾರ್!"

"ಏನೋ—ಏನು ಹೇಳ್ತಾ ಇದೀ? ಪ್ರಜ್ಞೆ ಇದೆ ತಾನೇ?"

"ಏನ್ ಸಾರ್—ಈ ರೀತಿ ಕೇಳ್ತೀರಿ. ನಮ್ಮಪ್ಪನಾಣೆಗೂ ಪಿಂಕೀ ಫೋನು ಸಾರ್!"

"ಲೋ ಬೇಕೂಫ್, ಪಿಂಕಿ ಅಂದರೆ ನಾಯಿಮರಿ. ಅದು ಹೇಗೆ ಫೋನು ಮಾಡುತ್ತೆ?"

"ಅಯ್ಯೋ! ಸತ್ತೆ!...ಅಲ್ಲಾ ಸಾರ್...—ಫೋನು ಪಿಂಕಿಯನ್ನು ಸಾಕಿದವರದು"....ಎಂದು ಹೇಳಿದವನೇ ಅಲ್ಲಿಂದ ಕಂಬಿಕಿತ್ತ.

ಮದುವೆಗೆ ಕೇವಲ ಮೂರು ದಿನಗಳು ಮಾತ್ರ ಉಳಿದಿದ್ದವು. ಮದುವೆ ಪತ್ರ ಎಲ್ಲಡೆ ಕಳಿಸಿ ಆಗಿತ್ತು. ಶಾಂತಿಯ ಮನೆಯಲ್ಲಿ ಆನಂದ ಹಾಗೂ ಸಂತಸದ ಹೊಳೆ ಹರಿಯುತ್ತಿದ್ದರೆ—ಇತ್ತ ಹೇಮಂತನ ಮನೆಯಲ್ಲಿ ಉದಾಸೀನತೆ, ದುಃಖ, ಬಿಸಿಯುಸಿರು ಮನೆ ಮಾಡಿದ್ದವು.

ಹೇಮಂತನಿಗೂ, ದಿನ ನೂಕುವುದೇ ಕಠಿಣವಾಗಿತ್ತು. ಶಾಂತಿ ಹಾಗೂ ಸುಷಮಾ ಇಬ್ಬರ ಮುಖಗಳು ಅವನೆದುರು ಬಂದು ನಿಲ್ಲುತ್ತಿದ್ದವು ಅವನಿಗೆ ಇಬ್ಬರೂ ಇಷ್ಟ!....ಏನು ಮಾಡುವುದು? ದೈವದ ಮುಂದೆ ಆತ ವಿವಶ

ನಾಗಿದ್ದ....ಒಂದು ಸಮಯದ ಗೊಂಬೆಯಾಗಿದ್ದ.. ಅಷ್ಟೇ !

ರಾತ್ರಿ ಹತ್ತು ಗಂಟೆಯ ಸುಮಾರಿಗೆ, ನಂಜುಂಡಪ್ಪ ಫೋನು ಮಾಡಿದರು. "ಶಾಂತಿ ಬಂದಿದ್ದಾಳೆಯೇ" ಎಂದು ಕೇಳಿದರು. ಹೇಮಂತ "ಇಲ್ಲ" ಎಂದು ಉತ್ತರಿಸಿದ. ಅವರು ."ಎಲ್ಲಿ ಹೋದಳೋ—ಸಾಯಂಕಾಲ ರೋಜಲೀನಾಳನ್ನು ಊರಿಗೆ ಕಳಿಸಲು ಹೋದವಳು ಇನ್ನೂ ಬಂದೇ ಇಲ್ಲ" ಎನ್ನುತ್ತಾ ಫೋನು ಕೆಳಗಿಟ್ಟರು. ಹೇಮಂತ ಚಿಂತಿತನಾದ. ಆಕೆ ಎಲ್ಲಿಗೆ ಹೋಗಿರಬಹುದು ? ಸುಷಮಾಳ ಬಳಿಗೆ ಹೋದಳೇನೋ ?" ಎಂಬ ಚಿಂತೆ ಕಾಡತೊಡಗಿತು.

ಅವನು ಯೋಚಿಸತೊಡಗಿದ. ಮತ್ತೆ ಫೋನು ಧಾರಿಸಿತು. ಈ ಬಾರಿ ಯಾರೋ ಮಾತನಾಡಿದರು. ಆಫೀಸಿನವರು ಮದುವೆಗಾಗಿ ಅಭಿನಂದನೆ ಸಲ್ಲಿಸಿದರು. ಶುಷ್ಕವಾಗಿ ವಂದನೆ ಸಲ್ಲಿಸಿ, ಹೇಮಂತ ಫೋನು ಕೆಳಗಿಟ್ಟು ಮರುಕ್ಷಣ ಮತ್ತೆ ಗಂಟೆ ಬಾರಿಸೀತೆಂದು ಭಯದಿಂದ, ರಿಸೀವರ್ ತೆಗೆದು ಕೆಳಗಿಟ್ಟ, ..ಈಗ ಅವನಿಗೆ ಭಯವಿರಲಿಲ್ಲ.

ಆರಾಮ ಕುರ್ಚಿಯ ಮೇಲೆ ಕುಳಿತು, ಯೋಚಿಸಲಾರಂಭಿಸಿದ. ಯಾವಾಗ, ಅಲ್ಲಿಯೇ ನಿದ್ದೆ ಆವರಿಸಿತೋ ತಿಳಿಯದು. ಒಮ್ಮೆಲೇ, ನಾಲ್ಕಾರು ಕಂಠ ಕೇಳಿದಾಗ, 'ಎದ್ದು ಕುಳಿತ. ನಂಜುಂಡಪ್ಪನವರ ಆಕ್ರೋಶ .. ಬಂದೆಲ್ಲರ ಉತ್ತೇಜಕ ಮಾತಿಗೆ ಸ್ವಲ್ಪ ಗಾಬರಿಯಾಗಿ ಹೊರಗೆ ಬಂದು .. ನೋಡಿದ ,

ನಂಜುಂಡಪ್ಪ ನೆಲದ ಮೇಲೆ ಬಿದ್ದು ಉರಳಾಡುತ್ತಿದ್ದರು "ಅಯ್ಯೋ ! ನಾನು ಸತ್ತೆ ...ನಾನು ಹಾಳಾದೇ ! ...ನನ್ನ ಮಗಳನ್ನು ಎಲ್ಲಿ ಹುಡುಕಲಿ ? ಅವಳೂ ಹೋದಳೂ—ಒಂದು ಲಕ್ಷ ರೂಪಾಯಿಯೂ ಹೋಯಿತು ಅಯ್ಯೋ ! ಅಯ್ಯೋ ! ನಾನೇನು ಮಾಡಲೀ !"

ಹೇಮಂತ ಅವರನ್ನು ಮೇಲೆಬ್ಬಿಸಿ, ಕುಳ್ಳಿರಿಸಿದ, ಸಮಾಧಾನಪಡಿಸಿದ. ಕ್ರಮೇಣ ನಡೆದ ವಿವರವೇನೆಂಬುದನ್ನು ತಿಳಿದುಕೊಂಡ

ರಾತ್ರಿ ಹನ್ನೆರಡರ ಸುಮಾರಿಗೆ ನಂಜುಂಡಪ್ಪನವರಿಗೆ ಒಂದು ಫೋನು ಬಂದಿತು.

"ನಂಜುಂಡಪ್ಪ, ನಿನ್ನ ಮಗಳು ಶಾಂತಿ, ನಮ್ಮ ಬಳಿ ಇದ್ದಾಳೆ. ಸರಿಯಾಗಿ ಒಂದು ಗಂಟೆಗೆ, ಒಂದು ಒಂದು ಲಕ್ಷ ರೂಪಾಯಿಯೊಂದಿಗೆ, ರಾಮ ಮಂದಿರದ ಹಿಂದೆ ಒಂಟಿಯಾಗಿ ಬಾ. ಹಣ ಕೊಟ್ಟೆ ಅಂದರೆ, ನಿನ್ನ ಮಗಳು ಜೀವಂತವಾಗ ಸಿಗುತ್ತಾಳೆ, ಇಲ್ಲ—ಅವಳ ಹೆಸರೂ ಸಹ ನಿನಗೆ

ಸಿಗಲಾರದು."

ನಂಜುಂಡಪ್ಪನವರು ಈ ವಿಷಯ, ಹೇಮಂತನಿಗೆ ತಿಳಿಯಬೇಕೆಂದು ಫೋನ್ ಮಾಡಿದರು. ಎಷ್ಟು ಬಾರಿ ಮಾಡಿದರೂ, ಎಂಗೇಜ್ ಬರತೊಡಗಿತು. ಫೋನು ಕೆಟ್ಟಿರಬೇಕು ಅಥವಾ ಶಾಂತಿಯನ್ನು ಹುಡುಕಲು ಹೊರಟಿರಬೇಕು—ಎಂದು ಯೋಚಿಸಿದರು ಸಮಯ ಬೇರೆ ಬಹಳ ಇಲ್ಲ. ಮನೆಯಲ್ಲಿದ್ದ ಹಣ ಕಡಿಮೆ, ಇದ್ದುದಕ್ಕೆ, ಮದುವೆಗೆಂದು ಮಾಡಿದ ಒಡವೆ ತೆಗೆದುಕೊಂಡು ಒಬ್ಬರೇ, ರಾಮಮಂದಿರದ ಹಿಂದೆ ಹೋದರು. ಸರಿಯಾಗಿ ಒಂದೂವರೆಗೆ ಕಪ್ಪು ವಸ್ತ್ರ ಹಾಗೂ ಮುಖವಾಡ ಧರಿಸಿದ ನಾಲ್ಕು ಜನ ಬಂದರು. ಹಣತೆಗೆದುಕೊಂಡು "ನೀನು ಮನೆಗೆ ಹೋಗು. ಒಂದು ಗಂಟೆ ಬಿಟ್ಟು, ನಿನ್ನ ಮಗಳು ಮನೆ ಸೇರುತ್ತಾಳೆ" ಅಂದರು. ಅದರಂತೆ ಮನೆಗೆ ಬಂದದ್ದಾಯಿತು.

ಆದರೆ, ಇನ್ನೂವರೆಗೂ ಶಾಂತಿಯ ಸುಳಿವಿಲ್ಲ. ಹೇಮಂತ ಫೋನು ಮಾಡಿ, ಧನಂಜಯನನ್ನು ಕರೆಸಿ ಎಲ್ಲಾ ವಿಷಯ ಕೇಳಿ ಆತ ಅಸಹಾಯಕತೆ ವ್ಯಕ್ತಪಡಿಸಿದ. "ಈಗೇನು ಮಾಡಲು ಆಗುತ್ತೆ ? ಆವಾಗಲೇ ತಿಳಿದಿದ್ದರೆ, ಅವರ ಸುತ್ತ ಬಲೆ ಹೆಣೆಯಬಹುದಿತ್ತು" ಅದು ನಿಜ ಎಂದು ಹೇಮಂತನಿಗೂ ಗೊತ್ತು. ಓರ್ವ ಪೋಲೀಸ್ ಅಧಿಕಾರಿಯಾಗಿದ್ದುಕೊಂಡು ಕರ್ತವ್ಯ ನಿರ್ವಹಣೆಯಲ್ಲೂ ಆತ ಪ್ರಥಮ ಬಾರಿ ..ಸೋತಿದ್ದ. ಫೋನು ಎತ್ತಿಯಿಟ್ಟಿದ್ದ ಅದಕ್ಕಾಗಿ ಆತ ತೆತ್ತ ಬೆಲೆ—ಶಾಂತಿ ; ಶಾಂತಿ !

ಶಾಂತಿ—ಎಲ್ಲಿರುವಳು ಎಂದು ಚಿಂತಿಸಿದ. ಜೀಪು ತೆಗೆದುಕೊಂಡು ಊರೆಲ್ಲ ಸುತ್ತಿದ. ಆಕೆಯ ಗೆಳತಿಯರನ್ನು ಕಂಡ. ಆಪ್ತರನ್ನು ಕಂಡ. ಎಲ್ಲಿಯೂ ಸಿಗಲಿಲ್ಲ. ಅಪ್ಪರಲ್ಲಿ, ..?

ಈ ಘಟನೆ ನಡೆದ ಎರಡನೇ ದಿವಸ, ರೋಜಲೀನಾ ಬಂದಳು. ಹೇಮಂತ ಹಾಗೂ ಧನಂಜಯ ಅವಳನ್ನು ಕರೆಸಿದರು. ಅವರ ಜೊತೆಯಲ್ಲಿ ನಂಜುಂಡಪ್ಪ ಹಾಗೂ ನಾಲ್ಕಾರು ನಾಗರೀಕರೂ ಬಂದರು. ಹೇಮಂತ ಕೇಳಿದ. "ರೋಜಲೀನಾ, ಮೊನ್ನೆ ಶಾಂತಿ ನಿಮ್ಮನ್ನು ಊರಿಗೆ ಕಳಿಸಲು ಬಂದಳಲ್ಲ ಅಲ್ಲಿಂದ ಮುಂದೆ ಎಲ್ಲಿ ಹೋಗುತ್ತೇನೆ ಎಂದು ಹೇಳಿದಳು."

"ಅವಳು ನನ್ನ ಜೊತೆ ಬರಲೇ ಇಲ್ಲ."

"ಅಂದರೆ .?"

"ಅಂದರೆ, ನಾವಿಬ್ಬರೂ ಬೀದಿಗೆ ಬರುವುದಕ್ಕೂ ಒಂದು ಜೀಪು ಬಂದು ನಿಂತಿತು, ಅದರಿಂದ ಒಬ್ಬ ಪಿ.ಸಿ. ಇಳಿದು, "ಹೇಮಂತ ಸಾಹೇಬರು

ಕರೆಯುತ್ತಿದ್ದಾರೆ ಎಂದು ಶಾಂತಿಗೆ ಹೇಳಿದ. ಶಾಂತಿ ಜೀಪಿನಲ್ಲಿ ಹೊರಟು ಹೋದಳು."

ಗರ ಬಡಿದವನಂತೆ ಕುಳಿತುಬಿಟ್ಟ ಹೇಮಂತ. ಅವಳನ್ನು ಅಪಹರಿಸಿದವರು, ಹೇಮಂತನ ಹೆಸರಿನಿಂದ, ತಮ್ಮ ಕೆಲಸ ಸಾಧಿಸಿದ್ದರು.

"ಹಾಂ .ಹಾಂ ..ನನಗೆಲ್ಲಾ ಗೊತ್ತಾಯಿತು" ನಂಜುಂಡಪ್ಪ ಅರಚುತ್ತಾ ಎದ್ದು ನಿಂತರು—ಹುಚ್ಚರಂತೆ!

"ಹೇಮಂತಾ, ಇದೆಲ್ಲಾ ನಿನ್ನದೇ ಕಾರಾಸ್ಥಾನ. ನೀನು, ನನ್ನ ಮಗಳೊಡನೆ ನಾಟಕವಾಡಿದೆ ಚಕ್ಕಂದವಾಡಿದೆ ಅಲ್ಲದೇ, ನಿನ್ನ ಮೇಲೆ—ನಿನ್ನ ಮಾವನ ಮಗಳನ್ನು ಮದುವೆಮಾಡಿಕೊಳ್ಳಲು ಒತ್ತಾಯ ಬಂದಿತ್ತು. ಅದಕ್ಕೇ, ಅದಕ್ಕೇ, ನೀನು ಈ ರೀತಿ ಆಟವಾಡಿದೆ. ನೀನು ಪಾಪಿ, ಮೋಸಗಾರ, ಘಾತುಕ ..."

ಹುಚ್ಚರಂತೆ ಅರಚುತ್ತಾ ಅವರು ಬೀದಿಗೆ ಓಡಿದರು. ಧನಂಜಯ ಅವರ ಹಿಂದೆ ಓಡಿದ, ಹೇಮಂತ ಧರೆಗಿಳಿದುಹೋದ. ಛೇ ನಾನು ಹೀಗೆ ಮಾಡಬಹುದೇ ಎಂದಾತ ಯೋಚಿಸಿದ.

ಈ ಸುದ್ದಿ, ಸಂಜೆ—ಪತ್ರಿಕೆಯಲ್ಲಿ ಪ್ರಕಟವಾಗಿ ಕಾಡ್ಗಿಚ್ಚಿನಂತೆ ಊರಲ್ಲಿ ಹರಡಿತು. ಕೆಲವೊಂದು ಪತ್ರಿಕೆಗಳು—ಸ್ಪಷ್ಟವಾಗಿ ಇನ್‌ಸ್ಪೆಕ್ಟರ್ ಹೇಮಂತನ ಕೈವಾಡವೇಕೆ ಇರಬಾರದು—ಎಂದೂ ಸಹ ಬರೆದಿದ್ದವು. ಮರುದಿವಸ ಅದರ ಪರಿಣಾಮ ಭಯಾನಕ ರೀತಿಯಿಂದ ಪರಿಣಮಿಸಿತು. ಮಹಿಳಾ ಮಂಡಳಿ, ಮಹಿಳಾ ಸಮಾಜ, ನಾರೀ ನಿಕೇತ, ಸ್ತ್ರೀ ರಕ್ಷಣಾ ಸಮಿತಿ, ಮುಂತಾದವರೆಲ್ಲ ಒಂದೆಡೆ ಸಭೆ ಸೇರಿ, ಇದನ್ನು ಪ್ರತಿಭಟಿಸಿದವು. ಇದರಲ್ಲಿ ಒಂದು ವೇಳೆ ಇನ್‌ಸ್ಪೆಕ್ಟರ್ ಹೇಮಂತನದೇ ತಪ್ಪಿದ್ದರೆ, ನಿರ್ದಾಕ್ಷಿಣ್ಯವಾಗಿ ಅವನನ್ನು ಶಿಕ್ಷಿಸಬೇಕು ಎಂದು ಪಟ್ಟು ಹಿಡಿದವು.

ವಿರೋಧ ಪಕ್ಷದವರು ಇದನ್ನೇ ಒಂದು ಅಸ್ತ್ರವನ್ನಾಗಿ, ಆಡಳಿತ ಪಕ್ಷದ ಮೇಲೆ ಪ್ರಯೋಗಿಸಿದರು ರಕ್ಷಿಸಬೇಕಾದ ವ್ಯಕ್ತಿಯೇ, ಭಕ್ಷಕನಾದರೆ, ರಕ್ಷಿಸುವವರು ಯಾರು ? ಎಂದು ಪ್ರಶ್ನಿಸಿ,—ಸರಕಾರ ಜನತೆಗೆ ರಕ್ಷಣೆ ನೀಡುವಲ್ಲಿ ವಿಫಲವಾಗಿದೆ, ಕಾರಣ—ರಾಜೀನಾಮೆ ಕೊಡಬೇಕು ಎಂದು ಆಗ್ರಹಪಡಿಸಿದರು.

ಇವೆಲ್ಲವೂ ಸೇರಿಕೊಂಡು, ಮೊದಲೇ ಇಬ್ಬಗೆಯಲ್ಲಿ ಸಿಕ್ಕು, ಮಾನಸಿಕ ಹಿಂಸೆ ಅನುಭವಿಸಿದ ಹೇಮಂತನನ್ನು ಹಿಂಸಿಸತೊಡಗಿದವು. ಮದುವೆಯಂತೂ ನಿಂತುಹೋಯಿತು, ಬೀದಿಗೆ ಹೋದರೆ ಜನ ಉಗಿಯುತ್ತಿದ್ದರು.

ಒಂದು ದಿನವಂತೂ ಓರ್ವ ಮಹಿಳೆ ಅವನತ್ತ ಕೊಳೆತ ಟೊಮೇಟೋ ಎಸೆದು —ಕ್ಯಾಕರಿಸಿ ಉಗಿದಳು. ಅವಳ ಹಿಂದೆಯೇ, ಒಂದಿಬ್ಬರು ಕಿಡಿಗೇಡಿಗಳು ಕಲ್ಲು ಬೀರಿದರು. ಒಂದು ಕಲ್ಲು ತಾಗಿ,ತಲೆಯಿಂದ ರಕ್ತ ಹರಿಯಲಾರಂಭಿಸಿತು. ಹೇಮಂತನಿಗೆ, ಇದರ ಪರಿವೆಯೇ ಇರಲಿಲ್ಲ. ಅಲ್ಲಿಯವರೆಗೂ, ಹಾಸಿ, ಹರಸಿ ಪೂಜಿಸಿದ ಜನರೇ ಅವನ ವಿರುದ್ಧ ಬಿದ್ದಿದ್ದರು. ಇನ್‌ಸ್ಪೆಕ್ಟರ್ ಹೇಮಂತ ಎಂದರೆ, ಓರ್ವ ಅತಿಮಾನವನಾಗಿದ್ದ ..ಅಂದು ...! ಆದರೆ ಇಂದು ? ಆತ ನೊಬ್ಬ ದಾನವ ರಾಕ್ಷಸ.

ಜಗತ್ತೇ ಎದುರು ಬಿದ್ದಿತ್ತು. ತಾಯಿ, ಬಾಯಿಬಿಡಲಾರಳು. ಸುಷಮಾಳ ತಂದೆತಾಯಿಗಳ ಶಾಪ, ತಮ್ಮ ಮಗನಿಗೆ ತಟ್ಟಿತು ಎಂಬುದೇ ಅವರ ಭ್ರಮೆ. ಅವರ ನಿಟ್ಟುಸಿರು, ಮಹಾ ಜ್ವಾಲೆಯಾಗಿ, ತಮ್ಮ ಮನೆತನವನ್ನೆ ನಾಶ ಮಾಡುತ್ತದೆ—ಎಂದು ಬಲವಾಗಿ ನಂಬಿದ ಅವರು, ಘೋರ ಯಾತನೆ ಯನ್ನು, ಅನುಭವಿಸುತ್ತಿದ್ದರು—ಬಾಯಿಬಿಟ್ಟು ಹೇಳಲಾರರು. ಅವರೊಂದು ಹಿಮದ ಬೊಂಬೆಯಾಗಿದ್ದರು. ಅವರ ಕಣ್ಣೀರು ಬತ್ತಿಹೋಗಿತ್ತು.

ಒಮ್ಮೆಂದೊಮ್ಮೆಲೇ ಸುಷಮಾ ಬಂದು, ತಮ್ಮೆದುರು ಕುಳಿತಾಗ, ಅಲ್ಲಿಯ ವರೆಗೂ ಹೃದಯದ ಅಂತರಾಳದಲ್ಲಿ ಹೆಪ್ಪುಗಟ್ಟಿಹೋಗಿದ್ದ ದುಃಖದ ಹಿಮ ಗಡ್ಡೆ ಕರಗಿತು ಶಾರದಮ್ಮನ ಕಣ್ಣುಗಳಿಂದ ಕಾರಂಜಿ ಚಿಮ್ಮಿತು. ಅವರು ಅವಳನ್ನು ಅಪ್ಪಿಕೊಂಡು ಬೋರೆಂದು ಅತ್ತರು, ಸುಷಮಾ ಅವರನ್ನು ಸಮಾಧಾನ ಪಡಿಸಿದಳು ದೈವದ ಮುಂದೆ ನಾವು ಕೈ ಚೆಲ್ಲಲೇಬೇಕೆಂದು ಆಕೆ, ಬುದ್ಧಿಮಾತು ಹೇಳಬೇಕಾಯಿತು

ಅವರ ಹೃದಯದ ಬೇಗೆ ಎಷ್ಟೋ ಪಾಲು ಕಡಿಮೆಯಾಯಿತು. ಆಮೇಲೆ ಸುಷಮಾ ಹೇಮಂತನತ್ತ ದೃಷ್ಟಿಹರಿಸಿದಳು. ಕರುಳು ಕಿತ್ತಿಬಂದಂತಾಯಿತು. ಹೇಗಿದ್ದವ ಹೇಗಾದ ? ಮನ್ಮಥನಂತಿದ್ದವ ಬೆದರು ಬೊಂಬೆಯಾಗಿದ್ದ. ಎಲುವಿನ ಹಂದರವಾಗಿದ್ದ. ಅವನೊಂದು ಜೀವಂತ ಶವದಂತೆ ಕಾಣುತ್ತಿದ್ದ.

## ಹನ್ನೆರಡು

ಮರುದಿನದಿಂದ ಸುಷಮಾ, ಹೇಮಂತನ ಸೇವೆ ಮಾಡಲಾರಂಭಿಸಿದಳು. ಅವನನ್ನು ಹಸುಗೂಸಿನಂತೆ ನೋಡಿಕೊಳ್ಳಲಾರಂಭಿಸಿದಳು. ಹುಚ್ಚನಂತೆ ತನ್ನಷ್ಟಕ್ಕೆ ತಾನೇ ಆತ ಮಾತಾಡಿಕೊಳ್ಳುತ್ತಿದ್ದ. ಮೇಲಿಂದಮೇಲೆ ಶಾಂತಿ

....ಶಾಂತಿ—ಎಂದೆನ್ನುತ, ಮನೆಯಲ್ಲಿ ಸುತ್ತುತ್ತಿದ್ದ. ಅಮ್ಮನ ಎದುರು ಬಂದು ನಿಂತು :

"ಅಮ್ಮಾ! ಶಾಂತಿ ಬಂದಿದ್ದಾಳೆ?" ಎಂದು ಕೇಳುತ್ತಿದ್ದ ಆಮೇಲೆ—"ಎಲ್ಲಿ ಹೋದಳೋ ಏನೋ? ನನ್ನ ಮೇಲೆ ಕೋಪ ಮಾಡಿಕೊಂಡಿದ್ದಾಳೆ.." ಅನ್ನುತ್ತಿದ್ದ. ಆತ, ಸುಷಮಾಳ ಗುರುತು ಹಿಡಿಯಲಿಲ್ಲ. "ನೀನು! ನೀನು ..ಶಾಂತೀನಾ?" ಎಂದು ಕೇಳುತ್ತಿದ್ದ. ಅವಳಿಗಾಗಿ ತಂದ ಪೀತಾಂಬರ, ಮದುವೆ ವಸ್ತ್ರ, ವಡವೆ, ಎಲ್ಲಾ ತಲದಿಂಬಿಟ್ಟುಕೊಂಡು, ಕಣ್ಣೀರು ಮಿಡಿಯುತ್ತಿದ್ದ . ಸುಷಮಾಳಿಗೆ ಇದನ್ನೆಲ್ಲ ನೋಡಲಾಗದು ಆದರೆ, ಅದನ್ನು ಸಹಿಸದ ಹೊರತು, ಬೇರೆದಾರಿಯಿರಲಿಲ್ಲ.

ತಾನೇ ನಿಂತು, ಅವನಿಗೆ ಸ್ನಾನ ಮಾಡಿಸುವಳು ಬಟ್ಟೆ ತೊಡಿಸುವಳು. ಮಗುವಿಗೆ ಉಣ್ಣಿಸುವಂತೆ, ರಮಿಸಿ, ನಾಲ್ಕು ತುತ್ತು ಬಾಯಿಗೆ ಹಾಕುವಳು. ಹೀಗಾಗಿ, ನಾಲ್ಕಾರು ದಿನಗಳು ಕಳೆದಾಗ ಆತ ಸ್ವಲ್ಪ ಸುಧಾರಿಸಿದ.

ಒಂದು ದಿನ, ಸುಷಮಾ, ಅವನನ್ನು ಪೇಟೆಗೆ ಕರೆದುಕೊಂಡು ಹೋದಳು ..ಸಾಯಂಕಾಲ ಜನಜಂಗುಳಿ. ಆದರಲ್ಲಿ, ಹಬ್ಬ ಸಮೀಪಿಸಿದ್ದರಿಂದ ಹೆಣ್ಣು ಮಕ್ಕಳ ಸಂಖ್ಯೆಯೇ ಹೆಚ್ಚಾಗಿತ್ತು. ಸುಷಮಾಳೊಂದಿಗೆ ಫುಟ್ ಪಾತ್‌ಮೇಲೆ ನಡೆಯುತ್ತಿದ್ದ ಹೇಮಂತ ಒಮ್ಮೆಲೇ ಶಾಂತೀ ಎಂದು ಕೂಗಿದವನೇ, ರಸ್ತೆಯ ಮಧ್ಯೆ ವಾಹನಗಳು ಬರುತ್ತಿವೆ ಎಂಬುದನ್ನೂ ಗಮನಿಸದೆ—ಪಕ್ಕದ ಬೀದಿಗೆ ನುಗ್ಗಿದ. ಕೈಯಲ್ಲಿ ವ್ಯಾನಿಟಿ ಬ್ಯಾಗ್ ಹಿಡಿದು ಅಂಜೂರಿ ವರ್ಣದ ಸೀರೆ ಉಟ್ಟಿದ್ದ ಯುವತಿಯೊಬ್ಬಳ ಕೈ ಹಿಡಿದು, "ಶಾಂತಿ-ಶಾಂತಿ" ಎಂದು ಕೂಗಿದ. ಆಕೆ ಅವಕ್ಕಾಗಿ ನಿಂತುಬಿಟ್ಟಳು ಒಂದು ಕ್ಷಣ ಒಂದೇ ಒಂದು ಕ್ಷಣ....ಮರುಕ್ಷಣವೇ ಭಯಂಕರವಾಗಿ ಅವಳು ಚೀರಿಕೊಂಡಾಗ ಸುತ್ತಲಿದ್ದ ಜನ ಸೇರಿದರು. ಅವಳೆದುರು ನಿಂತು, ಶಾಂತಿ! ಶಾಂತಿ ನೀನು ಎಲ್ಲಿಗೆ ಹೋಗಿದ್ದೆ ನನ್ನನ್ನು ನಿನ್ನ ಜೊತೆ ಕರೆದುಕೊಂಡು ಹೋಗು ಎಂದು ಹಲುಬುತ್ತಿದ್ದ ಹೇಮಂತನನ್ನು ಹಿಡಿದು ಕೈಗೆ ಬಂದಂತೆ ಥಳಿಸಿದರು. ಹೇಮಂತ ಅವರಿಂದ ಪಾರಾಗದೇ, ಬಿಡಿಸಿಕೊಳ್ಳಲು ಪ್ರಯತ್ನಿಸದೆ ಶಾಂತಿ–ಶಾಂತಿ ಎಂದು ಕೂಗುತ್ತಲೇ ಇದ್ದ.

ಒಮ್ಮೆಲೇ ನೂರಾರು ವಾಹನಗಳು ಬಂದಿದ್ದರಿಂದ ಆ ಬದಿಗಿದ್ದ ಸುಷಮಾಳಿಗೆ, ಈ ಬದಿಗೆ ಬರಲು ಸ್ವಲ್ಪ ವೇಳೆ ತಗುಲಿತು. ಅಷ್ಟರಲ್ಲಿ ಈ ಘಟನೆ ನಡೆದು ಹೋಗಿತ್ತು. ನೆಲಕ್ಕೆ ಬಿದ್ದು ಹೇಮಂತ ಶಾಂತಿ–ಶಾಂತಿ, ಎಂದು ಬಡಬಡಿಸುತ್ತಿದ್ದ.

ಸುಷಮಾಳ ಬಾಯಿಯಿಂದ ತಾವು ಮನಸೋಚ್ಛ ಥಳಿಸಿದವ—ಇನ್ಸ್ಪೆಕ್ಟರ್ ಹೇಮಂತ ಎಂಬ ಅರಿವು, ಜನಜಂಗುಳಿಗೆ ಆದಾಗ ಅವರೆಲ್ಲ ಅಲ್ಲಿಂದ ಪಲಾಯನ ಮಾಡಿದರು.

ಅಷ್ಟರಲ್ಲಿ ಅಲ್ಲಿಗೆ ರೋಜಲೀನಾ ಬಂದಳು. ಪರಿಸ್ಥಿತಿಯ ಅರಿವಾಯಿತು. ಕೂಡಲೇ ಒಂದು ಟ್ಯಾಕ್ಸಿ ಮಾಡಿ ಸಮೀಪದಲ್ಲಿದ್ದ ತನ್ನ ಮನೆಗೆ ಕರೆದೊಯ್ದಳು. ಅವಳ ಫ್ಯಾಮಿಲಿ ಡಾಕ್ಟರ್ ನಾರಾಯಣ ಬಂದು ಪರಿಶೀಲಿಸಿದರು. ಹೇಮಂತ ಇನ್ನು ಶಾಂತಿ, ಶಾಂತಿ ಎಂದು ಬಡಬಡಸುತ್ತಿದ್ದ. ಸುಷಮಾ ನಡೆದ ಘಟನೆ ವಿವರಿಸಿದರು. ಸ್ವಲ್ಪ ಹೊತ್ತು ವಿಚಾರಿಸಿದ ನಾರಾಯಣರಾವ್ ಗಂಭೀರವಾಗಿ ಹೇಳಿದರು.

"ಹೇಮಂತನಿಗೆ ಮಾನಸಿಕ ಆಘಾತವಾಗಿದೆ. ಹೀಗೆ ಬಿಟ್ಟರೆ, ಅವರು ಹುಚ್ಚರಾಗಬಹುದು. ಅವರಿಗೆ ಎಲ್ಲಡೆ ಶಾಂತಿಯೇ ಕಾಣುತ್ತಿದ್ದಾಳೆ. ಶಾಂತಿ ಮರೆತರೆ ಅವರು, ಮೊದಲಿನಂತೆ ಆಗುತ್ತಾರೆ. ಆದರೆ ಅದು ಅಸಾಧ್ಯ.

"ಇದಕ್ಕೆ ದಾರಿ ಬೇರೆಯೇ ಇಲ್ಲವೆ?"

"ಇದೆ . ಆದರೆ ಅದಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ ಶಾಂತಿಯ ನೆನಪು ಮತ್ತಷ್ಟು ಮರುಕಳಿಸುವಂತೆ ಮಾಡಬೇಕು. ಹಿಂದೆ ನಡೆದ ಘಟನೆಗಳು ಮತ್ತೆ ನಡೆಯುವಂತೆ ನೋಡಿಕೊಳ್ಳಬೇಕು. ಆಗ .ಆಗ. .. ಉದ್ರೇಕವಾಗಿದ್ದ ಅವರ ಭಾವನೆಗಳು ಪ್ರವಹಿಸಿ, ಮನಕ್ಕೆ ಶಾಂತಿ ನೀಡುತ್ತದೆ. ಅವರು ಭಾವಜೀವಿಯಾದದ್ದರಿಂದ ಆಘಾತವಾಗಿದೆ. ಅವರ ಮನದಲ್ಲಿ ದುಃಖ ಹೆಪ್ಪುಗಟ್ಟಿದೆ. ಅದು, ಕರಗಬೇಕು ಶಾಂತಿಯ ನೆನಪು ಮತ್ತೆ ಹಸಿರಾಗಬೇಕು. ಆಗ ಅವರು ಮತ್ತೆ ಮೊದಲಿನಂತೆ ಆಗಬಹುದು. ಆಮೇಲೆ, ಆದಷ್ಟು ಅವರಿದ್ದ ಜಾಗದಿಂದ ಬೇರೆ ಜಾಗಕ್ಕೆ ಸ್ಥಳಾಂತರಿಸಿ. .ಅಂದರೆ, ಸ್ವಲ್ಪ ಬದಲಾವಣೆಯಿಂದ ಭಾವನೆಗಳು ಬದಲಾಗಬಹುದು.

ನಾರಾಯಣ ಹೊರಟು ಹೋದರು. ಸುಷಮಾ ಅವರು ಹೇಳಿದ ಮಾತನ್ನೇ ಕುರಿತು ವಿಚಾರಿಸತೊಡಗಿದಳು. ಹೇಮಂತನನ್ನು ಎಲ್ಲಿಗೆ ಒಯ್ಯಬೇಕು? ಕೊನೆಗೆ ಅದಕ್ಕೆ ಪರಿಹಾರ-ತೋರಿಸಿದವಳು ರೋಜಲೀನಾ!.. ಅವಳ ಗೆಳತಿಯೊಬ್ಬಳು ಹೊಸದಾಗಿ ನರ್ಸಿಂಗ್ ಹೋಮ್ ತೆಗೆದಿದ್ದಾಳೆ—ಊರ ಹೊರಗೆ ಪ್ರಶಾಂತವಾದ ಸ್ಥಳ. ಪ್ರತ್ಯೇಕವಾದ ಕಾಟೇಜುಗಳಿವೆ. ನಿನ್ನೆತಾನೇ ಆಸ್ಪತ್ರೆ ಪ್ರಾರಂಭವಾಗಿದೆ. ಹೇಮಂತನನ್ನು ಅಲ್ಲಿಗೆ ಕರೆದೊಯ್ದರೆ ಒಳ್ಳೆಯದು!

ಸುಷಮಾಳಿಗೆ ಅವಳ ಮಾತು ಹಿಡಿಸಿತು. ಅತ್ತೆಗೆ ಹೇಳಿ ಕಳಿಸಿ ನಡೆದ ಸಮಾಚಾರ ತಿಳಿಸಿದಳು. ನಂತರ, ಹೇಮಂತನನ್ನು ನರ್ಸಿಂಗ್ ಹೋಂಮ್‌ಗೆ

ವರ್ಗಾಯಿಸಲಾಯಿತು. ನರ್ಸಿಂಗ್ ಹೋಮ್‌ನಲ್ಲಿದ್ದ ಕಾಟೇಜುಗಳು ಖಾಲಿಯಾಗಿದ್ದವು. ಆಸ್ಪತ್ರೆಯಲ್ಲಿ ಮಾತ್ರ ಹತ್ತಾರು ಜನ ರೋಗಿಗಳಿದ್ದರು. ಹೀಗಾಗಿ ಹೇಮಂತನಿಗೆ ಬೇಕಾದ ಪ್ರಶಾಂತವಾತಾವರಣ ಅಲ್ಲಿ ದೊರೆಯಿತು.

ಹೇಮಂತನ ಜವಾಬ್ದಾರಿ ಮಾತ್ರ, ಈಗ ಸುಷಮಾಳ ಹೆಗಲಮೇಲೆಬಿದ್ದಿತು.

ಅಂದು ಸುಷಮಾ ವಧುವಿನಂತೆ ಸಿಂಗರಿಸಿಕೊಂಡಳು. ಹೇಮಂತ ಶಾಂತಿಗೆಂದು ತಂದ ಹಸಿರು ಬಣ್ಣದ ಪೀತಾಂಬರ, ಅದೇ ಬಣ್ಣದ ಕುಪ್ಪಸ ಧರಿಸಿದಳು ಮೈಮೇಲೆ ಪ್ರೀತಿಯಿಂದ ಅವನೇ ಶಾಂತಿಗೆಂದು ಮಾಡಿಸಿದ ಚಿನ್ನದ ಒಡವೆ ಧರಿಸಿದಳು. ಅಲಂಕಾರವೆಲ್ಲ ಮುಗಿದನಂತರ, ಒಂದು ಬಾರಿ ಕನ್ನಡಿಯಲ್ಲಿ ನೋಡಿಕೊಂಡಳು. ತೃಪ್ತಿಯಾಯಿತು. ಒಂದು ಕ್ಷಣ ನಿಂತು ಯೋಚಿಸಿದಳು. ವೈದ್ಯರು ಹೇಳಿದ್ದು ನೆನಪಾಯಿತು

"ಶಾಂತಿ ಬರಬೇಕು; ಅಂದರೆ ಹೇಮಂತ ಮೊದಲಿನಂತೆ ಆಗ್ತಾನೆ."

"ಶಾಂತಿ ಇಲ್ಲದಿದ್ದರೆ, ಶಾಂತಿಯ ನೆನಪು ತರುವಂತಹ ಘಟನೆಗಳು ಮರಕಳಿಸಬೇಕು"

"ಉದ್ರೇಕಗೊಂಡ ಹೇಮಂತನ ಭಾವನೆಗಳು ಶಾಂತವಾಗಬೇಕು... ಅವನಿಗೆ ಶಾಂತಿ ದೊರೆಯಬೇಕು."

"ಅದಕ್ಕೆಂದೇ, ಆಕೆ—ಶಾಂತಿಯಂತೆ ಸಿಂಗರಿಸಿಕೊಂಡು ನಿಂತಿದ್ದಳು. ಶಾಂತಿಯೊಂದಿಗೆ ಮದುವೆಯಾಗಿ ಸಂಸಾರ ಸಾಗಿಸಬೇಕೆಂದು ಹೇಮಂತ ಕಂಡ ಕನಸು ಭಗ್ನವಾಗಿತ್ತು. ಅವನ ಹೃದಯ ಒಡೆದು ಚೂರು-ಚೂರಾಗಿತ್ತು. ಅದು, ಮತ್ತೆ ಒಂದಾಗಬೇಕಾದರೆ ಶಾಂತಿ ಬೇಕು. ಆದರೆ.. .ಆದರೆ .ಎಲ್ಲಿದ್ದಾಳೆ ಶಾಂತಿ?"

ಮನದಲ್ಲಿ ಒಮ್ಮೆ ದೇವರನ್ನು ಸ್ಮರಿಸಿ ಹೇಮಂತನಿದ್ದ ಕೋಣೆಗೆ ಕಾಲಿರಿಸಿದಳು ಸುಷಮಾ. ಆತ ನಿದ್ದೆಯಲ್ಲಿದ್ದರೂ ಇನ್ನೂ ಕನವರಿಸುತ್ತಿದ್ದ —"ಶಾಂತಿ! ಶಾಂತಿ!"

ಒಮ್ಮೆಲೇ ಕೋಣೆಯಲ್ಲಿ "ನೀನೇ ನನ್ನ ಉಸಿರು, ಜೀವನ—ಬನದಾ ಹಸಿರು." ಎಂಬ ಹಾಡು ಮೆಲುವಾಗಿ ಕೇಳಿ ಬರಲಾರಂಭಿಸಿತು. ಕನವರಿಸುತ್ತಿದ್ದ ಹೇಮಂತ ಒಮ್ಮೆಲೇ ಮೌನತಾಳಿದು. ಮುಂದೆ ಮುಚ್ಚಿಕೊಂಡಿದ್ದ ಅವನ ರೆಪ್ಪೆಗಳು ಚಲಿಸಲಾರಂಭಿಸಿದವು. ಪಳಕ್ಕನೆ ಕಣ್ಣು ತೆರೆದ. ಕೋಣೆಯಲ್ಲಿ ಮಂದ ಬೆಳಕು. ಕಿವಿಗೆ ಇಂಪಾದ ಹಾಡು ಕೇಳುತ್ತಿದೆ. "ಅದೇ ಶಾಂತಿ ಹಾಡಿದ ಹಾಡು....ಓಹ್!. ಶಾಂತಿ!" ಎನ್ನುತ್ತಾ ಎದ್ದು ಕುಳಿತ. ಕೋಣೆಯ ತುಂಬಾ ದೃಷ್ಟಿ ಬೀರಿದ. ಅಲ್ಲಿ ಯಾರು ಕಾಣಲಿಲ್ಲ.

ಎದ್ದು, "ಶಾಂತಿ ...ಎಲ್ಲಿರುವೆ" ಎನ್ನುತ್ತಾ ಹೊರಗೆ ವರಾಂಡಕ್ಕೆ ಬಂದ. ಅಲ್ಲೊಂದು ಚಿಕ್ಕ ಕೈತೋಟ, ಬೆಳದಿಂಗಳು ಹಾಲು ಚೆಲ್ಲಿದಂತೆ ಹರಡಿದೆ ಹೂವಿನ ಗಿಡಗಳ ಅಡಿಯಲ್ಲಿ ಶಾಂತಿ ಕುಳಿತಿದ್ದಾಳೆ. ಅದೇ ಹಸಿರು ಸೀರೆ ಹಸಿರು ಕುಪ್ಪಸ ತಾನೇ ತಂದ ಆಭರಣಗಳು ಶಾಂತೀ ಎಂದು ಅತ್ತ ಧಾವಿಸಿದ ಒಮ್ಮೆಲೆ ಶಾಂತಿ ಮಾಯವಾದಳು. ಸುತ್ತಲೆಲ್ಲಾ ನೋಡಿದ ಅರೆ! ಎಲ್ಲಿ ಹೋದಳು? ಹಾಂ ..ಈಗ ತೂಗುಯ್ಯಾಲೆ ಮೇಲೆ! ಅಲ್ಲಿಂದ ಮಾಯ! ...ಮುಂದೆ, ಕೋಣೆಯ ಬಾಗಿಲ ಬಳಿ ...ಇದೇ ರೀತಿ, ಹೇಮಂತ ನನ್ನು ಕೆಣಕಿದಳು ಶಾಂತಿ. ಅಂತೂ ಕೊನೆಗೊಮ್ಮೆ ಅವಳು, ಅವನ ಕೈಗೆ ಸಿಕ್ಕಿಕೊಂಡಳು. ಹೇಮಂತ ಅವಳನ್ನು ಬಲವಾಗಿ ಅಪ್ಪಿಕೊಂಡ. ಸುಷಮಾಳ ಎಲುಬುಗಳು ಪುಡಿ-ಪುಡಿ ಆದಂತೆನಿಸಿದವು.

"ಬಿಡಿ ಹೇಮಂತ! ನನ್ನನ್ನು ಬಿಡಿ" ಎಂದು ಗೋಗರೆದಳು.

"ಇಲ್ಲ! ಬಿಡೋದಿಲ್ಲ! ಇಷ್ಟು ನನ್ನನ್ನು ಸತಾಯಿಸಿರುವೆ! ನಾ ನಿನ್ನ ಬಿಡಲಾರೆ! .

"ದಯವಿಟ್ಟು ಬಿಟ್ಟು ಬಿಡಿ ಕೈ ಮುಗಿಯುತ್ತೇನೆ."

"ಹಾಂ! ನನ್ನ ಮುಂದೆ ನಾಟಕ ಮಾಡ್ತೀಯಾ? ನಿನ್ನನ್ನು ಮದುವೆ ಆದದ್ದು, ಬಿಡೋಕಲ್ಲಾ! ನಾನಿನ್ನ ಬಿಡೋದಿಲ್ಲ .."

ಹೇಮಂತ ಅವಳನ್ನು ಅನಾಮತ್ತಾಗಿ ಎತ್ತಿ, ತನ್ನ ಮಲಗುವ ಕೋಣೆಗೆ ಬಂದ. ಸುಷಮಾ ಚಡಪಡಿಸಿದಳು, ವಿಲಿವಿಲಿ ಒದ್ದಾಡಿದಳು. ಆದರೂ, ಅವನಿಂದ ಬಿಡಿಸಿಕೊಳ್ಳಲಾಗಲಿಲ್ಲ. ಕ್ರಮೇಣ ಆಕೆ; ಅವನಿಗೆ ಶರಣಾದಳು.

ಹೇಮಂತನಿಗೆ ಔಷಧಿ ಕೊಡಬೇಕೆಂದು ಬಂದ ನೈಟ್‌ಡ್ಯೂಟಿ ನರ್ಸ್ ಮಾಯಾ, ಬೊಂಬೆಯಂತೆ ನಿಂತು, ಇದನ್ನು ನೋಡುತ್ತಿದ್ದಳು. ಅವಳ ಕಣ್ಣುಗಳಿಂದ ಇಳಿದ ನೀರು, ಗಲ್ಲವನ್ನು ತೋಯಿಸಿತ್ತು. ಔಷಧಿ ಕೊಡದೇ ಹಾಗೇ ವಾಪಸು ನಡೆದಳು ಆಸ್ಪತ್ರೆಯತ್ತ.

## ಹದಿಮೂರು

ವೈದ್ಯರ ಉಪಚಾರ, ಸುಷಮಾಳ ಆರೈಕೆಯಿಂದಾಗಿ ಹೇಮಂತ ಹದಿನೈದು ದಿನಗಳಲ್ಲಿ ಗುಣ ಹೊಂದಿದ. ಮನಸ್ಸಿನ ಮೇಲಿದ್ದ ಭಾರ ಕಡಿಮೆಯಾಗಿತ್ತು. ಸತ್ಯವೇನೆಂದು ಆತನಿಗೆ ತಿಳಿದಿತ್ತು. ಅದನ್ನೆದುರಿಸಲು ಆತ ತನ್ನ ಕೆಲಸದ

ಮೇಲೆ ಹಾಜರಾದ.

ಅಂದೇ ಸಂಜೆ ಇನ್‌ಸ್ಪೆಕ್ಟರ್‌ರಿಂದ ಕರೆ ಬಂತು. ಧನಂಜಯ ಅವನಿಗಾಗಿ ಕಾಯುತ್ತಿದ್ದ. ಹೇಮಂತ ಬರುತ್ತಲು ಉತ್ಸಾಹದಿಂದ ಕೈ ಕುಲುಕಿ ಸ್ವಾಗತಿಸಿದ. ಯಾವಾಗಲೂ ವಟ ವಟ ಮಾತನಾಡುವ ಸೂರಪ್ಪ ಮಾತ್ರ ಮೌನಿಯಾಗಿದ್ದ.

ಒಂದೈದು ನಿಮಿಷ ಮಿತ್ರರಿಬ್ಬರೂ ಏನೇನೋ ಮಾತನಾಡಿದರು. ವ್ಯರ್ಥಹರಟೆ. ಅಷ್ಟರಲ್ಲಿ ಕಾಫಿ ಬಂದಿತು. ಕುಡಿದದ್ದೂ ಆಯಿತು. ಧನಂಜಯ, ಟೇಬಲ್ ಮೇಲಿದ್ದ ಪೇಪರ್ ವೇಟನ್ನು ಅತ್ತಿತ್ತ ಸರಿಮಾಡುತ್ತಿದ್ದ. ಮಾತು ಹೇಗೆ ಪ್ರಾರಂಭಿಸಬೇಕು ? ವಿಷಯ ಹೇಗೆ ಹೇಳಬೇಕು ಎಂಬುದು ತಿಳಿಯದಂತಾಗಿತ್ತು. ಹೇಮಂತನೇ ಕೇಳಿದ:

"ಏನು ಧನಂಜಯ . ಬರ ಹೇಳಿದ್ದಿ !"

"ಹೇಮಂತ ! .ನೀನೂ ಸಹ ಪೋಲೀಸ್ ಇಲಾಖೆಯವನು ಈಗಾಗಲೇ ಬಹಳಷ್ಟು ಸಹಿಸಿಕೊಂಡಿದ್ದೀಯಾ ?....

ನೀನು, ಇನ್ನೂ ಅಷ್ಟು ಸಹಿಸಬೇಕಾಗಿದೆ. ನಿನಗೆ ನಿನ್ನ ಹಿಂದೆ ತಾಯಿ ಇದ್ದಾರೆ. ಅವರಿಗಾಗಿಯಾದರೂ ಗುಂಡಿಗೆ ಗಟ್ಟಿ ಮಾಡಿಕೊಳ್ಳಬೇಕು. ಬಂದದ್ದೆಲ್ಲಾ ಬರಲಿ ಎಂದು ಎಲ್ಲವನ್ನೂ ಸ್ವೀಕರಿಸು."

"ಏನಯ್ಯಾ ? police Inspector ಆಗಿದ್ದು, ಒಳ್ಳೇ ಹರಿಕಥೆ ಹೇಳುವವರ ಹಾಗೆ ಪುರಾಣ ಪ್ರಾರಂಭಿಸಿದೆಯಲ್ಲ ಏನು ವಿಷಯ ?"

ಅಷ್ಟರಲ್ಲಿ ಹೊರಗಡೆ ಸದ್ದಾಯಿತು. ಯಾರೋ ಧಡಪಡಿಸುತ್ತಾ ಒಳಗೆ ಬಂದರು. ಬಂದವರು, ನಂಜುಂಡಪ್ಪ. ಅವರನ್ನು ನೋಡುತ್ತಲೇ ಹೇಮಂತ ಎದ್ದು ನಿಂತ. ಆದರೆ ನಂಜುಂಡಪ್ಪ ಹೇಮಂತನನ್ನು ನೋಡ್ರಿಲ್ಲವೆಂದು ಕಾಣುತ್ತದೆ. ಬಂದವರೇ ನೇರವಾಗಿ ಧನಂಜಯನನ್ನು ಕೇಳಿದರು.

"ಏನ್ ಸಮಾಚಾರ? ಅರ್ಜೆಂಟ್ ಬರಬೇಕು ಅಂದ್ರೀ? ಶಾಂತಿ ಸಿಕ್ಕಳಾ?"

ಧನಂಜಯನ ಮೌನವೇ ಅವರಿಗುತ್ತರವಾಯಿತು. ಅವಾಗಲೇ, ನಂಜುಂಡಯ್ಯನವರ ದೃಷ್ಟಿ, ಹೇಮಂತನ ಮೇಲೆ ಬಿದ್ದದ್ದು, ಬಿರುಗಣ್ಣಿನಿಂದ ಅವನ ಕಡೆ ನೋಡುತ್ತ ನುಡಿದರು.

"ಈಗರ್ಥವಾಯಿತು ಬಿಡಿ. ನನ್ನನ್ನು ಕರೆಸಿದ್ದು ನೀವಲ್ಲ. ಈ ರಾಕ್ಷಸಾಂತ ! ಇವನ ಮುಖ ಸಹ ನೋಡಬಾರದು ಎಂದುಕೊಂಡಿದ್ದೆ. ನನ್ನ ಮನೆತನದ ದೀಪ—ನನ್ನ ಶಾಂತಿ !....ಎಲ್ಲವನ್ನು ಕಸಿದುಕೊಂಡವನು ಇವನೇ. ಇವನೇ ನನ್ನನ್ನು ಕರೆಸಿರಬೇಕು."

"ಇಲ್ಲ ಇಲ್ಲ ನೀವು ತಪ್ಪು ತಿಳಿದಿದ್ದೀರಿ ಮಾವ! ಶಾಂತಿ ಹೋಗಿದ್ದಕ್ಕೆ ನಿಮಗೆಷ್ಟು ದುಃಖವಾಗಿದೆಯೋ, ಅಷ್ಟೆ ನನಗಾಗದಿದ್ದರೂ, ಅದಕ್ಕಿಂತ ಕಡಿಮೆಯಾಗಿಲ್ಲ. ನನ್ನ ಮಾತು ನಂಬಿ.

"ಅದರಿಂದ ನನಗೇನೂ ಆಗಬೇಕಾಗಿಲ್ಲ ಹೇಳು ಏಕೆ ಕರೆದೆ! ಶಾಂತಿ ಅಂತೂ ಇಲ್ಲ. ಅವಳ ಆಸ್ತಿ ಬೇಕಾ? ಹೇಳು ..ಹೇಳು ..ನಿನ್ನ ಹೆಸರಿಗೇ ಬರೆದುಕೊಡುತ್ತೇನೆ. ಶಾಂತಿಯೇ ಇಲ್ಲ, ಆಸ್ತಿ, ಪಾಸ್ತಿ ತೆಗೆದುಕೊಂಡು ನಾನೇನು ಮಾಡಲೀ ಎಲ್ಲಾ, ನಿನ್ನ ಹೆಸರಿಗೇ ಬರೆದಿಟ್ಟು ನಾನು ಯಾತ್ರೆಗೆ ಹೊರಟು ಹೋಗುತ್ತೇನೆ." ನಂಜುಂಡಪ್ಪ ಚುಚ್ಚಿ ನುಡಿದರು.

ಧನಂಜಯ ಸಮಾಧಾನಪಡಿಸಿದ.

"ಸ್ವಾಮಿ! ಸ್ವಲ್ಪ ಧೈರ್ಯ ತೆಗೆದುಕೊಳ್ಳಿ! ನಿಮಗಾದ ಅನ್ಯಾಯ ಯಾರಿಗೂ ಆಗಬಾರದು—ನಿಜ! ಆದರೆ ದೈವೇಚ್ಛೆ ಹಾಗಿರುವಾಗ ಯಾರು, ಏನು ಮಾಡಲಿಕ್ಕೆ ಆಗುತ್ತೆ? ಶಾಂತಿಗಾಗಿ ಹೇಮಂತ ಪಟ್ಟ ಪಾಡು —ನಾಯಿ ಪಾಡು! ಎಲ್ಲಾ ಒಂದು ಒಂದೂವರೆ ತಿಂಗಳು ಆತ ಹುಚ್ಚನಾಗಿ ಅಲೆದಿದ್ದಾನೆ ಕಲ್ಲೇಟು ತಿಂದಿದ್ದಾನೆ. ಅದು ನಿಮಗೆ ಗೊತ್ತು....ಗೊತ್ತಿದ್ದೂ —ಈ ರೀತಿ?!"

"Inspector ..ನನ್ನನ್ನು ಕ್ಷಮಿಸಿ ನೀವು ಹೇಳುವುದು ಸರಿ! ಆದರೆ, ನಾನೊಬ್ಬ ತಂದೆ ಎಂಬುದನ್ನು ಮರೆಯದಿರಿ. ನನಗೇನೂ ಹತ್ತೆಂಟು ಮಕ್ಕಳಿಲ್ಲ. ಒಬ್ಬಳೇ ಒಬ್ಬಳು ಮಗಳು! ಅವಳಿಗಾಗಿ ನಾನು ಜೀವಿಸಿದ್ದ ... ನಾನೇನು ಮಾಡಲಿ, ಹೇಳೀ ..."

"ಸ್ವಲ್ಪ ಸಮಾಧಾನ ತೆಗೆದುಕೊಂಡು, ನನ್ನಜೊತೆ ಬರುತ್ತೀರಾ? ... ಹೇಮಂತ ನೀನೂ ಬಾ!"

ಇಬ್ಬರೂ ಧನಂಜಯನನ್ನು ಹಿಂಬಾಲಿಸಿದರು. ಹೇಮಂತನ ಎದೆ ಭಯದಿಂದ ಡವಗುಡುತ್ತಿತ್ತು. ಧನಂಜಯನ ವರ್ತನೆಯಿಂದ ಏನೋ, ಅನಿಷ್ಟ ಕಾದಿದೆ. ಬಹುಶಃ ಶಾಂತಿಯ ಶವ ಸಿಕ್ಕಿರಬೇಕು—ಎಂದುಕೊಂಡ ಮನದಲ್ಲಿ. ಅವನೂ ಒಬ್ಬ ಪೋಲೀಸ್ ಅಧಿಕಾರಿ. ಇಂಥ ಹತ್ತಾರು ಪ್ರಸಂಗಗಳನ್ನು ದಾಟಿ ಬಂದಿದ್ದ ಆವನಿಗೆ ಅರ್ಥವಾಗಿ ಗಂಟಲು ಉಬ್ಬಿ ಬಂತು.

ಕೆಳಗಡೆ ಒಂದು ರೂಮು ಅದರ ಮೇಲೆ "ಶವಾಗಾರ" ಎಂದು ಬರೆಯಲಾಗಿತ್ತು. ಹೇಮಂತ, ಹಿಂದಿದ್ದವ 'ಗಪ್' ಎಂದು ನಿಂತುಬಿಟ್ಟ. ಧನಂಜಯ ಹಾಗೂ ನಂಜುಂಡಪ್ಪ ಒಳಗೆ ಪ್ರವೇಶಿಸಿದರು.

ಹೇಮಂತ ಅಲ್ಲಿಯೇ ಗೋಡೆಗಾತು ನಿಂತುಕೊಂಡ. ಮುಂದೆ ಹೋಗಲು

ಅವನಿಂದ ಆಗದು. ಅದೇ ಕ್ಷಣ "ಅಯ್ಯೋ ಶಾಂತಿ ...ನನ್ನನ್ನು ಬಿಟ್ಟು ಹೋದೆ ಏನಮ್ಮಾ? ಅಯ್ಯೋ ನಾನೆಂಥಾ ಪಾಪಿ! ..ಮದುವೆ ಮಾಡಿ ಗಂಡನ ಮನೆ ಕಾಣಬೇಕಾದವಳು ಸ್ಮಶಾನಕ್ಕೆ ಕಳಿಸಬೇಕಾಗಿ ಬಂತೇ!?"

ಅವರ ಹಿಂದೆಯೇ ಧನಂಜಯ ಬಲವಂತವಾಗಿ, ಅವರನ್ನು ಅಲ್ಲಿಂದ ಎಳೆದು ಹೊರಗೆ ತಂದ ಹೇಮಂತನನ್ನು ನೋಡಿ, ಅವರು ಮತ್ತೆ ಆಕ್ರೋಶ ಮಾಡಿದರು.

"ಹೋಗು! ನೋಡು—ಚೆನ್ನಾಗಿ ನೋಡೋ ನಂತರ ಒಂದು ತಂಬಿಗೆ ಹಾಲು ಕುಡಿ ಸಮಾಧಾನವಾಗುತ್ತೆ!"

ಹೇಮಂತ ಮೆಲ್ಲನೆ ಒಂದೊಂದೇ ಹೆಜ್ಜೆ ಇಡುತ್ತಾ ಬಾಗಿಲಿಗೆ ಬಂದ. ಎದುರುಗಡೆ ಒಂದು ಮಂಚ, ಮಂಚದ ಮೇಲೆ ಕುತ್ತಿಗೆಯವರೆಗೆ ಬಿಳಿ ಅರಿವೆ ಹೊದ್ದು ಶಾಂತಳಾಗಿ ಮಲಗಿದ್ದಳು ಶಾಂತಿ. ಒಂದೊಂದೇ ಹೆಜ್ಜೆ ಇಡುತ್ತಾ! ಹೇಮಂತ ಮುಂದೆ ಬಂದು ನಿಂತ! ಶಾಂತಿಯ ಮುಖದ ಮೇಲೆ—ದೇವರ ಮುಂದೆ ಉರಿಸಿದ ನೀಲಾಂಜನದ ಕಾಂತಿ ಹರಡಿತ್ತು. ಮೈಮೇಲಿನ ಹೊದಿಕೆ ಸರಿಸಿದ—ಮರುಕ್ಷಣ ಕಣ್ಣುಮುಚ್ಚಿಕೊಂಡ! ಅಮಾನುಷ ಕ್ರಿಯೆ. ಶಾಂತಿಯ ಮೇಲೆ ಅತ್ಯಾಚಾರ ಮಾಡಲಾಗಿದೆ ಎಂಬುದಕ್ಕೆ ಬೇಕಾದಷ್ಟು ಸಾಕ್ಷಿಗಳಿದ್ದವು. ಅವನ ಮೈಯಲ್ಲಿಯ ರಕ್ತ ಕುದಿಯತೊಡಗಿತು. ಕಣ್ಣುಗಳು ಕೆಂಡದುಂಡೆಯಾದವು ಕೈಮುಷ್ಠಿ ಬಿಗಿಯ ತೊಡಗಿತು. ಕೆಳತುಟಿ ಪಿಟ-ಪಿಟ ಸದ್ದು ಮಾಡತೊಡಗಿತು. ಅವನ ದೇಹ ತರಗೆಲೆಯಂತೆ ಕಂಪಿಸತೊಡಗಿತು.

"ಶಾಂತಿ ಶಾಂತಿ ...! ನಿನ್ನ ಮೇಲೆ ಈ ಅತ್ಯಾಚಾರ ಮಾಡಿದವರನ್ನು ನಾನು ಜೀವ ಸಹಿತ ಬಿಡೋಲ್ಲ, ಬಿಡೋಲ್ಲ." ಅದರ ಮರುಕ್ಷಣ ಆತ, ಅವಳ ಶವದ ಮೇಲೆ ಬಿದ್ದು ಜೋರಾಗಿ ಅರಚಿದ ..."ಶಾಂತಿ."

ಶಾಂತಿಯ ಶವವನ್ನು ಮನೆಗೆ ತಂದಾಗಿತ್ತು. ಅದಕ್ಕೂ ಮೊದಲು "ಪೋಸ್ಟ್‌ಮಾರ್ಟಂ" ಕೆಲಸ ಮುಗಿಸಿ ಆಗಿತ್ತು. ಸಾವಿರಾರು ಜನ, ಅವಳ ಅಂತ್ಯಯಾತ್ರೆಯಲ್ಲಿ ಭಾಗವಹಿಸಿದ್ದರು. ನೂರಾರು ಜನಬಂದು ನಂಜುಂಡಪ್ಪ ನವರಿಗೆ ಸಾಂತ್ವನ ಹೇಳಿದರು.

ಒಂದು ಕಡೆ ಹೇಮಂತ, ಇನ್ನೊಂದು ಕಡೆ ನಂಜುಂಡಪ್ಪ, ಹೆಗಲು ಕೊಟ್ಟು ಶವ ಎತ್ತಿದರು. ಹೇಮಂತ ಹಾಗೂ ನಂಜುಂಡಪ್ಪ ಒಬ್ಬರನ್ನೊಬ್ಬರು ನೋಡಿಕೊಂಡರು. ಹೇಮಂತ ಹೇಳಿದ :

"ಮಾವಾ! ಈ ದುಃಖದಲ್ಲಿ ನಾವೆಲ್ಲರೂ ಸಮಪಾಲುಗಾರರು. ದಯ ವಿಟ್ಟು ನನ್ನನ್ನು ತಪ್ಪು ತಿಳಿಯಬೇಡಿ. ಶಾಂತಿ, ನನ್ನ ಜೀವದ ಉಸಿರಾಗಿದ್ದಳು.

ಅವಳ ಶವ ಹೊತ್ತಿರುವಾಗಲೇ, ನಾನು ಪ್ರಮಾಣ ಮಾಡಿ ಹೇಳುತ್ತೇನೆ— ಈ ಕೃತ್ಯಮಾಡಿದವರನ್ನು ತಂದು ನಿಮ್ಮ ಪಾದದ ಮೇಲೆ ಹಾಕ್ತೇನೆ. ಇದು ನನ್ನ ಶಪಥ, ಇದು ನನ್ನ ಪ್ರಮಾಣ."

ಸಾಯಂಕಾಲ ಐದು ಗಂಟೆಗೆ ಸಂಸ್ಕಾರ ಮುಗಿದುಹೋಯಿತು. ಬಂದವರೆಲ್ಲರೂ ಹೊರಟುಹೋದರು. ಉಳಿದವರು ಹತ್ತೆಂಟು ಜನ, ಅವರು ನಂಜುಂಡಪ್ಪನವರಿಗೆ ಸಮಾಧಾನ ಹೇಳುತ್ತಿದ್ದರು. ಬಿಳಿ ಧೋತರ, ಮಲ್ಲಿನ ಅಂಗಿ, ಹಾಕಿಕೊಂಡ, ದಪ್ಪಮೀಸೆಯವರೊಬ್ಬರು, ನಂಜುಂಡಪ್ಪನವರಿಗೆ ತೀರ ಆತ್ಮೀಯರೆಂದು ಕಾಣಿಸುತ್ತದೆ, ಅವರು ಹೆಚ್ಚು ದುಃಖತಪ್ತರಾಗಿ, ಅವರನ್ನಪ್ಪಿಕೊಂಡೇ ಕುಳಿತಿದ್ದರು, ಅವರೆದುರು ನಾಲ್ಕಾರು ಮಂದಿ. ಪ್ಯಾಂಟು, ಶರಟು ಧರಿಸಿದ ಯುವಕನೊಬ್ಬ ಹೆಚ್ಚು ಮಾತನಾಡಿ, ಈ ಮನೆಗೆ ಹೆಚ್ಚು ಹತ್ತಿರದವ ಎಂದು ತೋರಿಸಿಕೊಳ್ಳುತ್ತಿದ್ದ.

ಹೇಮಂತ, ಮತ್ತೊಮ್ಮೆ ಶಾಂತಿಯ ಕೋಣೆಗೆ ಬಂದ. ಅವಳ ಮಂಚದ ಮೇಲೆ ಕುಳಿತ. ಎಲ್ಲ ನೆನಪುಗಳೂ ಅವನ ಮುಂದೆ ಬಂದು ಕುಣಿಯ ತೊಡಗಿದವು. ಟೇಬಲ್ ಮೇಲಿದ್ದ ಫೋಟೋ, ಅವನನ್ನು ಕರೆಯಿತು. ಎತ್ತಿಕೊಂಡು ಅದಕ್ಕೆ ಮೆಲುವಾಗಿ ಮುದ್ದುಕೊಟ್ಟ.

"ಶಾಂತಿ—ದೇವರು ನಿನ್ನನ್ನು ತನ್ನ ಬಳಿ ಕರೆದುಕೊಂಡಿದ್ದಾನೆ. ನಾವೆಲ್ಲ ಪಾಪಿಗಳು, ಅದಕ್ಕೇ ಇಲ್ಲಿದ್ದೇವೆ. ಒಂದಲ್ಲ ಒಂದು ದಿನ, ನಾವೂ ನಿನ್ನ ಬಳಿ ಬಂದೇ ಬರುತ್ತವೆ ...ನನ್ನ ನಿರೀಕ್ಷೆ ಮಾಡು ಶಾಂತಿ—ನಿನ್ನ ಆತ್ಮಕ್ಕೆ ದೇವರು ಶಾಂತಿ ನೀಡಲಿ."

## ಹದಿನಾಲ್ಕು

ಗೋಪಾಲರಾಯರಿಗೆ ದಿಕ್ಕೇ ತೋಚದಂತಾಗಿದೆ. ರಾಧಾಬಾಯಿಗೆ, ತನ್ನ ಒಡಲಲ್ಲಿಯ ದುಃಖ ಯಾರ ಮುಂದೆ ತೋಡಿಕೊಳ್ಳಬೇಕು ಎಂಬುದು ತಿಳಿಯದಂತಾಗಿದೆ. ನೋಡನೋಡುತ್ತಿರುವಂತೆಯೇ ವಾರ, ಹದಿನೈದು ದಿನಗಳೂ ಸರಿದವು. ನೋಡ-ಮಾ ಬಂದು, ಮತ್ತೆ ಎರಡೂ, ಮೂರು ತಿಂಗಳಾದವು. ಶಾಂತಿ ಸತ್ತ ಮೇಲೆ, ಒಂದು ತಿಂಗಳು ಅಲ್ಲಿದ್ದು, ಇಲ್ಲಿಗೆ ಬಂದಿದ್ದಾಳೆ. ಆಕೆ, ಯಾರ ಮಾತೂ ಕೇಳಲೊಲ್ಲಳು. "ಹೇಮಂತನೆ ತನ್ನ ಪತಿ ಉಳಿದವರೆಲ್ಲ ನನ್ನ ಅಣ್ಣಂದಿರು" ಅನ್ನುತ್ತಿದ್ದಾಳೆ. ಅವಳ ಗತಿ ಏನು? ಅವಳನ್ನು ಬೇರೆ ಯಾರು ಮದುವೆಯಾಗುತ್ತಾರೆ?....ಹಾಗೇಯೇ ದಿನ ಸೂಸುತ್ತಾ ಇದ್ದರು.

"ಒಂಯಿಕ್....ಒಂಯಿಕ್"....ಯಾರೋ ವಾಂತಿ ಮಾಡಿಕೊಳ್ಳುತ್ತಿದ್ದಾರೆ ಯಾರಿರಬಹುದು? ಅಡಿಗೆ ಮನೆಯಲ್ಲಿದ್ದ ರಾಧಾಬಾಯಿ ಹಿತ್ತಲಕ್ಕೆ ಬಂದಳು. ಅಲ್ಲಿ ಸುಷಮಾ ವಾಂತಿ ಮಾಡಿಕೊಳ್ಳುತ್ತಿದ್ದಳು. ಹಾಗೆಯೇ ತಲೆಸುತ್ತಿ ಬಂದು, ಹಿಂದಕ್ಕೆ ಬಿದ್ದುಬಿಟ್ಟಳು. ಎತ್ತಿ ತಂದು ಒಳಗಡೆ ಹಾಕಿದರು. ಕ್ಷಣ ಮಾತ್ರದಲ್ಲಿ ಹತ್ತಾರು ಜನ ಸೇರಿದರು. ಪಕ್ಕದ ಮನೆಯಿಂದ ಸರೋಜಮ್ಮ, ಕೂಡಲೆ ಅಲ್ಲಿಗೆ ಬಂದು ಪರಿಶೀಲಿಸಿ "ಮೂರು ತಿಂಗಳು" ಎಂದು ಒಂದೇ ಮಾತು ಹೇಳಿ ಅಲ್ಲಿಂದ ಮೇಲೆದ್ದಳು.

ಕಾಗೆಯು ತಲೆ ಕುಕ್ಕುವಂತೆ, ಎಲ್ಲ ಜನ ತಲೆಗೊಂದು ಮಾತಾಡಿ, ಚದುರಿದರು ಗೋಪಾಲರಾಯರು ಕಲ್ಲಿನಂತಾಗಿದ್ದರು. ಅವರೂ ತಮ್ಮ ಕೋಣೆ ಸೇರಿದರು. ರಾಧಾಬಾಯಿ ನೆಲದ ಮೇಲೆ ಬಿದ್ದುಕೊಂಡು, ಮುಳು ಮುಳು ಅತ್ತರು.

ಎಷ್ಟೇ ಹೊಡೆದರೂ, ಎಷ್ಟೇ ಬಡಿದರೂ, ಸುಷಮಾ ಬಾಯಿ ಬಿಡಲಿಲ್ಲ; ಹೊಟ್ಟೆಯಲ್ಲಿಯ ಪಿಂಡಕ್ಕೆ ತಂದೆ ಯಾರೆಂದು ಹೇಳಲಿಲ್ಲ. ಎಲ್ಲಾದಕ್ಕೂ ಮೌನವೇ ಉತ್ತರ ...ಒಂದು, ಒಂದು ಮುಂಜಾನೆ ..ರಾಧಾಬಾಯಿ ಎದ್ದಾಗ ಸುಷಮಾಳ ಹಾಸಿಗೆ ಬರಿದಾಗಿತ್ತು. ಆಕೆ ಇರಲಿಲ್ಲ. ಎಲ್ಲಿಗೆ ಹೋದಳೋ ತಿಳಿಯದು. ಹೌಹಾರಿದ ಅವರು ಎದೆ ಎದೆ ಒಡಿದುಕೊಂಡು ಗೋಳಾಡ ತೊಡಗಿದರು. ಗೋಪಾಲರಾಯರು, ಅವರನ್ನೆಳೆದುಕೊಂಡು ಸಮಾಧಾನ ಪಡಿಸಲು ಪ್ರಯತ್ನಿಸಿ ಕೊನೆಗೆ, ತಾವೂ ಕಣ್ಣೀರಮಿಡಿಯತೊಡಗಿದರು.

ಆ ಊರಲ್ಲಿರಲು ಅವರಿಗೆ ಮುಖವಿರಲಿಲ್ಲ. ಅಂದೇ ಗಂಡ-ಹೆಂಡತಿ ಇಬ್ಬರೂ, ಮಗನಿದ್ದ ಕಡೆ ಗಂಟು-ಮೂಟೆ ಕಟ್ಟಿಕೊಂಡು ನಡೆದರು, ಬಾಗಿಲಿನ ಬೀಗ ಹಾಕಿ...

ಒಮ್ಮೆಂದೊಮ್ಮೆಲೆ ಧುತ್ತೆಂದು ಎದುರುಬಂದು ನಿಂತ ಸುಷಮಾಳನ್ನು ಕಂಡು, ಶಾರದಮ್ಮನವರಿಗೆ ಒಂದು ಕ್ಷಣ ಗಾಬರಿಯಾಯಿತು. ಕೆದರಿದ ಕೂದಲು, ಮನೆಯಲ್ಲಿ ಉಡುವ ಮಾಸಿದ ಸೀರೆ, ಕಾಲಲ್ಲಿ ಚಪ್ಪಲಿ ಇಲ್ಲ; ಕೈಯಲ್ಲಿ ಚೀಲವಿಲ್ಲ .. ಏನಿದು ಅವಾಂತರ? ಸುಷಮಾ ಹೀಗೇಕೆ ಆಗಿದ್ದಾಳೆ? ಈ ಅವಸ್ಥೆಯಲ್ಲಿ ಆಕೆ ಬರಲು ಕಾರಣವೇನು? ಒಂದೂ ತಿಳಿಯಲಿಲ್ಲ. 'ಬಾರಮ್ಮಾ" ಎಂದರು ಕುಳಿತಲ್ಲಿಂದಲೇ!—ಅಮೃತ ವರ್ಷ ಕರೆದಂತೆ ಮಮತೆ ಹಾಗೂ ವಾತ್ಸಲ್ಯದ ಕೂಗು ಕಿವಿಗೆ ಬೀಳುತ್ತಲೂ, ಸುಷಮಾ, ಓಡಿ ಬಂದು, ಶಾರದಮ್ಮನವರನ್ನು ತಬ್ಬಿಕೊಂಡಳು. ದುಃಖದ ಕಟ್ಟೆ ಒಡೆದಿತ್ತು. ಅವಳನ್ನು ಸಮಾಧಾನ ಪಡಿಸುವ ಗೋಜಿಗೆ ಶಾರದಮ್ಮ ಹೋಗಲಿಲ್ಲ.

ಅವಳ ಪಾಡಿಗೆ ಅವಳನ್ನು ಬಿಟ್ಟು ಬಿಟ್ಟರು. ಒಂದರ್ಧ ಗಂಟೆ ಕಳೆದಾಗ ಸುಷಮಾ ಸುಧಾರಿಸಿದ್ದಳು. ತಾನೇ ಮೋಸ ಹೋಗಿದ್ದಳು. ಸಮಾಧಾನ ಪಟ್ಟುಕೊಂಡು ಹೊರಗೆ ಬಂದಾಗ, ಶಾರದಮ್ಮ ಅವಳ ಮುಂದೆ ಕಾಫಿ ಬಟ್ಟಲು ಸರಿಸಿದಳು. ಸುಷಮಾ ಕಾಫಿ ಕುಡಿದು ಕೋಣೆ ಸೇರಿದಳು. ಒಂದು ಮಾತಿಲ್ಲ; ನುಡಿಯಿಲ್ಲ. ಸ್ವಲ್ಪ ಹೊತ್ತು ಬಿಟ್ಟು ಶಾರದಮ್ಮ ಕೋಣೆಗೆ ಬಂದಾಗ, ಸುಷಮಾ, ಎರಡು ಕಾಲುಗಳನ್ನು ಹೊಟ್ಟೆಯಲ್ಲಿ ಸೇರಿಸಿಕೊಂಡು ಹಸುಗೂಸಿನಂತೆ ಮಲಗಿದ್ದಳು. ಅವಳ ಕಣ್ಣುಗಳಲ್ಲಿ ಮುತ್ತಿನಂತೆ ನೀರ ಹನಿಗಳು ಹೊಳೆಯುತ್ತಿದ್ದವು. ಶಾರದಮ್ಮನ ಕರುಳು 'ಚುರ್' ಎಂದಿತು. ಮುಂದೆ ಬಂದು, ಸೆರಗು ತುದಿಯಿಂದ ಕಣ್ಣೀರು ಒರೆಸಿ, ಮೈತುಂಬ ಚಾದರ ಹೊದಿಸಿ ಹೊರಗೆ ಬಂದರು.

ಹೇಮಂತ ಮನೆಗೆ ಬಂದಾಗ, ರಾತ್ರಿ ಎಂಟು ಗಂಟೆ ಬಾಗಿಲು ತೆರೆದವಳು —ಸುಷಮಾ! ಒಮ್ಮೇಲೆ, ಅವಳನ್ನು ಎದುರಿಗೆ ನೋಡಿ, ಸ್ವಲ್ಪ ಅಚ್ಚರಿ ಎನಿಸಿದರೂ, ಮನಸ್ಸಿಗೆ ಸ್ವಲ್ಪ ಮುದುವೆನಿಸಿತು, "ಅರೆ!, ನೀನು ಯಾವಾಗ ಬಂದೆ?" ಎಂದು ಕೇಳಿದ. "ಮಧ್ಯಾಹ್ನ" ಎಂದು ಚುಟುಕಾಗಿ ಉತ್ತರಿಸಿದ ಆಕೆ, ಅಡಿಗೆ ಮನೆಕಡೆ ನಡೆದಳು. ಊಟವಾದನಂತರ, ತಮ್ಮ ಕೆಲಸ ಮುಗಿಸಿ ಕೊಂಡು, ಶಾರದಮ್ಮ ಹಾಸಿಗೆಯಲ್ಲಿ ಪವಡಿಸಿದರು ..ಸುಷಮಾ, ನಿದ್ದೆ ಹತ್ತಿದವಳಂತೆ, ಸೋಗುಮಾಡಿದಳು. ಅರ್ಧ ಗಂಟೆಯಲ್ಲಿ ಶಾರದಮ್ಮನವರ ಮೆಲವಾದ ಗೊರಕೆ ಕೇಳಿ ಬರತೊಡಗಿದಾಗ, ಸುಷಮಾ ಮೆಲ್ಲನೆ ಮೇಲೆದ್ದಳು. ಹೇಮಂತನ ರೂಮಿಗೆ ಕಾಲಿಟ್ಟಳು ಹೇಮಂತ ಕೋಣೆಯಲ್ಲಿ ಅತ್ತಿಂದಿತ್ತ ಸುತ್ತುತ್ತಿದ್ದ. "ಬಾ! ಏಕೆ—ನಿದ್ದೆ ಬರಲಿಲ್ಲವೇ?" ಎಂದ. ತನ್ನ ಹಿಂದೆಯೇ ಬಾಗಿಲು ಹಾಕಿದ ಸುಷಮಾ, ತಲೆ ಕೆಳಗೆ ಹಾಗಿ, "ಹೇಮಂತ್, ನನಗೀಗ ಮೂರು ತಿಂಗಳು" ಎಂದಳು.

"ವಾಟ್? ನಾನ್‌ಸೆನ್ಸ್?"- 'ಹಾಗೆಂದರೇನು?' ಮೂರು ತಿಂಗಳು ಅಂದರೆ, ನೀನಿನ್ನೂ ಹಸುಗೂಸಾ?"

"ಹೇಮಂತ, ನಾನು ಮೂರು ತಿಂಗಳು ಗರ್ಭಿಣಿ. ಅಪ್ಪ-ಅಮ್ಮನ ಮನೆ ಬಿಟ್ಟು—ಓಡಿ ಬಂದಿದ್ದೇನೆ. ನೀನು ನನ್ನ ಕೈ ಬಿಡಬೇಡ."

"ಅಯ್ಯೋ! ಎಂಥ ಕೆಟ್ಟಕೆಲಸ ಮಾಡಿದೆಯಲ್ಲ. ಈ ರೀತಿ ನೀನು, ಓಡಿ ಬರಬಾರದಾಗಿತ್ತು. ಪಾಪ! ಅವರೆಷ್ಟು ನೊಂದುಕೊಳ್ಳುವರೋ?! ಸುಷಮಾ ನೀನಿಂಥ ಕೆಲಸವೇಕೆ ಮಾಡಿದೆ? ಯಾರು ಆ ಹುಡುಗ?....ನನ್ನ ಮುಂದೆ ಹೇಳು. ನಾನು ಎಳೆದು ತಂದು ನಿನ್ನ ಜೊತೆ ಅವನ ಮದುವೆ ಮಾಡುತ್ತೇನೆ."

"ಹೇಮಂತ್, ನೀನೇನು ಹೇಳುತ್ತಿರುವೆ? ನಿನ್ನ ಮೈಮೇಲೆ ಪ್ರಜ್ಞೆ ಇಲ್ಲವೆ? ಅಥವಾ ಗೊತ್ತಿದ್ದೂ, ಗೊತ್ತಿದ್ದೂ, ಈ ರೀತಿ ವರ್ತಿಸುತ್ತಿರುವಿಯೋ?

"ಸುಷಮಾ ನನಗೆಲ್ಲಿ ಗೊತ್ತಿದೆ ?"

"ಎಲ್ಲಾ ಗೊತ್ತಿದ್ದೂ ಈ ರೀತಿ ವರ್ತನೆ ?—ನನ್ನ ಕೊಲ್ಲಬೇಡ. ನಿನಗೆ ಕೈ ಮುಗಿಯುತ್ತೇನೆ. ನನ್ನನ್ನು ನನ್ನ ಮನೆತನದ ಗೌರವವನ್ನೂ ಉಳಿಸು!"

"ಸುಷಮಾ! ನಿನಗಾಗಿ ಹಾಗೂ, ನಿನ್ನ ಮನೆತನಕ್ಕಾಗಿ, ನಾನು ಏನು ಬೇಕಾದರೂ, ಮಾಡಲು ಸಿದ್ಧ. ಮೊದಲು ಹೇಳು. ಏನು ಮಾಡಲಿ ?"

"ನೀನು—ನನ್ನ ಮದುವೆಯಾಗಬೇಕು."

"ಸುಷಮಾ,—" ಹೇಮಂತ ನೋವಿನಿಂದ ಚೀರಿದ.

"ಹೌದು! ಹೇಮಂತಾ! ನೀನು, ನನ್ನ ಮದುವೆಯಾಗಬೇಕು. ನನ್ನ ಹೊಟ್ಟೆಯಲ್ಲಿರುವ ಮಗುವಿಗೆ ತಂದೆಯಾಗಬೇಕು. ಅಷ್ಟೇ ಸಾಕು ಮತ್ತಿನ್ನೇನು ಬೇಡ" ..

"ಸುಷಮಾ, ನನ್ನನ್ನು ಪರೀಕ್ಷಿಸಬೇಡ. ಇಂಥ ಅಗ್ನಿಪರೀಕ್ಷೆಗೆ ನನ್ನನ್ನು ಗುರಿ ಮಾಡಬೇಡ. ಅದರ ಬದಲು, ಆ ಹುಡುಗನ ಹೆಸರು, ವಿಳಾಸ—ತಿಳಿಸು. ನನ್ನ ಪ್ರಾಣವನ್ನು ಒತ್ತೆ ಇಟ್ಟಾದರೂ, ಅವನನ್ನು ಕರೆ ತಂದು, ಮದುವೆ ಮಾಡುವೆ."

## ಹದಿನೈದು

"ಡಾಕ್ಟರ್....ಇವು ಏನು ?.... ಹೇಮಂತ ಕೇಳಿದ ಹೇಮಂತ ಒಬ್ಬನೇ" ಇರಲಿಲ್ಲ. ಅವನ ಜೊತೆ ಧನಂಜಯ ಸಹ ಇದ್ದರು. ಅವರಿಬ್ಬರೂ, ಸರಕಾರಿ ಡಾಕ್ಟರ ಕರೆಯ ಮೇರೆಗೆ, ಅವರ ಆಫೀಸಿಗೆ ಬಂದಿದ್ದರು. ಅವರಿಬ್ಬರೂ ಬರುತ್ತಲೇ, ಡಾಕ್ಟರು ಅವರಿಗೆ ಕುಳಿತುಕೊಳ್ಳಲು ಹೇಳಿ, ಅವರ ಮುಂದೆ ಒಂದು ಚಿಕ್ಕ "ಟ್ರೇ" ಇರಿಸಿದರು. ಅದರಲ್ಲಿ ಮೂರು ನಾಲ್ಕು ಪಾಲಿಥಿನ್ ಚೀಲಗಳು. ಅವುಗಳನ್ನು ನೋಡಿಯೇ ಹೇಮಂತ ಮೇಲಿನಂತೆ ಕೇಳಿದ್ದ. ಒಂದುಕ್ಷಣ ಸುಮ್ಮನಿದ್ದ ಡಾಕ್ಟರ್ ಹೇಳಿದರು . "ನನಗೂ ಗೊತ್ತಿಲ್ಲ. ನನಗೆ ಇವು ಶಾಂತಿಯ ಆವಾರದಲ್ಲಿ ದೊರೆತವು ಅಷ್ಟೇ!" ಹೇಮಂತ ಹಾಗೂ ಧನಂಜಯ ಬೆಚ್ಚಿಬಿದ್ದರು.

"ಹೇಮಂತ, ನಾನು ಸತ್ಯ ಹೇಳ್ತಾ ಇದ್ದೀನೆ ನನ್ನ ಕಡೆ—ಶಾಂತಿಯ

ಶವ ಶಸ್ತ್ರಚಿಕಿತ್ಸೆಗಾಗಿ, ಬಂದಾಗ ಈ ನಾಲ್ಕು ಚೀಲಗಳು, ನನಗೆ ಅವಳ ಹೊಟ್ಟೆಯಲ್ಲಿ ದೊರೆತವು. ಅವಳ ಹೊಟ್ಟೆಯಲ್ಲಿ ಹೇಗೆ ಬಂದವು?—ತಿಳಿಯದು! ಸ್ವಲ್ಪ ಇವನ್ನು ಗಮನಿಸಿ, ಇವು ಅಡಿಕೆ ಚೀಲಗಳು. ಇದರ ಸುತ್ತಲೂ ಹೊಲಿಗೆ ಹಾಕಲಾಗಿದೆ. ಅದೂ ಕೈ ಹೊಲಿಗೆ. ಇದರೊಳಗೆ, ನನಗೆನಿಸುವ ಮಟ್ಟಿಗೆ ಕಾಗದವಿದೆ. ಒಂದು, ಐದು ನಿಮಿಷ ತಾಳಿರಿ. ಎಲ್ಲಾ ನಿಮ್ಮ ಕಣ್ಣೆದುರೇ ಬರುತ್ತಿದೆ.

ಇಬ್ಬರೂ ಉಸಿರು ಬಿಗಿ ಹಿಡಿದುಕೊಂಡು ಕುಳಿತರು. ಡಾಕ್ಟರ್ ಕತ್ತರಿಯಿಂದ ಸುತ್ತಲಿನ ಹೊಲಿಗೆ ಕತ್ತರಿಸಿದರು. ನಾಲ್ಕು ಚೀಲಗಳಿಂದ, ಚಿಕ್ಕ-ಚಿಕ್ಕ ನಾಲ್ಕು ಚೀಟಿಗಳು ಕಂಡುಬಂದವು. ಚೀಟಿಯ ಪ್ರತಿಯೊಂದು ಕೆಳಗೂ—'ಶಾಂತಿ' ಎಂದು ಸಹಿ ಹಾಕಲಾಗಿತ್ತು.

"ಅಂದರೆ .. ಅಂದರೆ ...ಸಾಯುವ ಮುನ್ನ ಅಥವಾ ಕೊಲೆಯಾಗುವ ಮುನ್ನ—ಶಾಂತಿ ಚೀಟಿ ಬರೆದು, ತಾನೇ—ತನ್ನ ಹೊಟ್ಟೆಯೊಳಗೆ ಹಾಕಿಕೊಂಡರೆ? ನಂಬಿಕೆಯಾಗದು! ಹೇಮಂತ ಅಸ್ಪಷ್ಟವಾಗಿ ನುಡಿದ

"ನೀವು—ನುಡಿದಿರುವುದು—ನೂರಕ್ಕೆ ನೂರು ಸತ್ಯ—ಹೇಮಂತ! ನೀವು ಹೇಳಿದಂತೇನೇ ಆಗಿದೆ ...ಸ್ವಲ್ಪ ಇರೀ ..ಆ ಚೀಟಿ, ಒಂದೊಂದಾಗಿ ಓದೋಣ!"

ನಾಲ್ಕು ಚೀಟಿ, ಸರಿಯಾಗಿ ಹೊಲಿಗೆ ತೆಗೆದು—ನಂತರ ಓದಲು ಪ್ರಾರಂಭಿಸಿದರು ...

## ಮೊದಲ ಚೀಟಿ

"ನನ್ನ ಹೆಸರು ಶಾಂತಿ" ತಂದೆ ಹೆಸರು ನಂಜುಂಡಪ್ಪ ಇನ್‌ಸ್ಪೆಕ್ಟರ್ ಹೇಮಂತನೊಂದಿಗೆ ನನ್ನ ಮದುವೆ ನಿಶ್ಚಯವಾಗಿತ್ತು. ಅಂದು ರೋಜಲೀನಾಳನ್ನು ಕಳಿಸಲು ಹೊರಟಾಗ—ಒಬ್ಬ ಪಿ ಸಿ ಬಂದು, 'ಹೇಮಂತ ಕರೀತಿದಾರೆ' ಅಂದ ನಾನು ಜೀಪ್ ಹತ್ತಿದೆ ನನ್ನ ಬಾಯಿ ಮುಚ್ಚಿದರು. ವಸ್ತ್ರ ಹಿಡಿದರು, ಎಚ್ಚರ ತಪ್ಪಿತು. ಎಚ್ಚರ ಬಂದಾಗ ನಾನು ಅವರ ಬಲೆಯಲ್ಲಿದ್ದೆ ಅದೊಂದು ನೆಲಮಾಳಿಗೆ ಕೋಣೆಯ ಹಿಂದೆ ಒಂದು ಕೆರೆ ಇದೆ. ಒಂದು ದೊಡ್ಡ ಆಲದ ಮರ ಇದೆ. ಕಿಟಕಿಯಿಂದ ನೋಡಿದರೆ—ದೂರದಲ್ಲಿ ಕೈಲಾಸಪತಿ ದೇವಾಲಯದ ಗೋಪುರ ಕಾಣುತ್ತಿದೆ. ಆಗ ನನಗೆ ಖಾತ್ರಿಯಾಯಿತು, ಇದರಲ್ಲಿ ಹೇಮಂತನ ಕೈವಾಡವಿಲ್ಲ. ನಾನೇ ಮೋಸ ಹೋದೆ

**ಶಾಂತಿ**

## ಚೀಟಿ-ಎರಡು

ಒಟ್ಟು ಇವರು ನಾಲ್ಕು ಜನರಿದ್ದಾರೆ. ಒಬ್ಬನನ್ನು ಬಿಟ್ಟು ಮೂವರೂ ಮುಖ

ವಾಚ ಧರಿಸಿದ್ದಾರೆ. ಒಬ್ಬನ ಬಲಗೈಯಲ್ಲಿ—ಎರಡು ವಜ್ರದ ಉಂಗುರಗಳಿವೆ. ಒಂದು ಕೆಂಪು, ಇನ್ನೊಂದು ಬಿಳಿ ಇನ್ನೊಬ್ಬನ ಧ್ವನಿ ನನಗೆ ಪರಿಚಿತ. ಎಲ್ಲಿಯೋ ನೋಡಿದ ನೆನಪು ಅಷ್ಟೇ ಅಲ್ಲ ಅತ ನನಗೆ ತೀರಾ ಹತ್ತಿರದವ ಅನ್ನಿಸುತ್ತೆ. ಆದರೆ, ಯಾರೆಂದು ಅರ್ಥವಾಗದು. ಅವರಿಬ್ಬರನ್ನೂ ಬಿಟ್ಟು, ಇನ್ನಿಬ್ಬರು ನನ್ನ ಶೀಲಹರಣ ಮಾಡಿದರು ಅಂದೇ ನನ್ನ ತಂದೆಯಿಂದ ಲಕ್ಷ ರೂಪಾಯಿ ತರಿಸಿದರು ಮುಂದೆ ಅವರು ನನ್ನನ್ನು ಕೊಲ್ಲಲಿದ್ದಾರೆಂದು ನನಗೆ ಅವರ ಮಾತುಗಳಿಂದ ತಿಳಿಯಿತು

ಶಾಂತಿ

## ಮೂರನೆಯ ಚೀಟಿ

ಸಾವಿಗೆ ನಾನು ಹೆದರುವುದಿಲ್ಲ ಹುಟ್ಟಿದ ಮಗುವೂ ಇಂದಿಲ್ಲ ನಾಳೆ ಸಾಯಲೇ ಬೇಕು ಆದಕ್ಕಾಗಿ, ನಾನೊಂದು ನಿರ್ಧಾರಕ್ಕೆ ಬಂದಿದ್ದೇನೆ ನಾನು ಸತ್ತರೂ ನನ್ನನ್ನು ಬಲಾತ್ಕರಿಸಿ, ಶೀಲಹರಣ ಮಾಡಿ ನಿಮ್ಮ ಹೆಸರಿಗೆ ಕಲಂಕ ತರುವ ಈ ರಾಕ್ಷಸರು ಹಾಗೆ ಉಳಿಯಬಾರದು ಅವರು ಸಿಕ್ಕಿ ಹಾಕಿಕೊಳ್ಳಬೇಕು ಶಿಕ್ಷೆ ಪಡೆಯಬೇಕು. ಅದಕ್ಕೊಂದು ಉಪಾಯ ನನ್ನ ಬಳಿ ಇದೆ. ನನ್ನ ಪರ್ಸ್‌ನಲ್ಲಿ ೫-೬ ಅಡಿಕೆ ಚೀಟಿ ಇವೆ ಅವರಿಂದ ಸೂಜಿ ದಾರ ತರಿಸಿಕೊಂಡಿದ್ದೇನೆ ಲಂಗ ಹರಿದಿದೆ ಎಂದು ಸುಳ್ಳು ಹೇಳಿದ್ದೇನೆ ಚೀಟಿ ಬರೆದು ಹಾಕಿ ಹೊಲಿಯುತ್ತೇನೆ ಅನಂತರ ನೀರಿನಸಹಾಯದಿಂದ ಅದನ್ನು ಒಂದೊಂದಾಗಿ ನುಂಗುತ್ತೇನೆ ಅವರು ನನ್ನ ಕೊಲೆ ಮಾಡಿ ಶವ ಎಲ್ಲಿಯಾದರೂ ಎಸೆದೇ ಎಸೆಯುತ್ತಾರೆ. ಅದು ಪೋಲೀಸರಿಗೆ ಸಿಕ್ಕು ಪೋಸ್ಟ್ ಮಾರ್ಟಮ್‌ಗೆ ಹೋಗುತ್ತದೆಂದು ನನಗೆ ಗೊತ್ತು. ಆಗ ಈ ಚೀಟಿ ಪೋಲೀಸರಿಗೆ ಸಿಗುತ್ತವೆ

ಶಾಂತಿ

## ಚೀಟಿ ನಾಲ್ಕು

ಕೊನೆಯದಾಗಿ ನನ್ನ ಬೇಡಿಕೆ ದಯವಿಟ್ಟು, ಈ ಅಪರಾಧಿಗಳನ್ನು ಬಿಡಬೇಡಿ ಹೇಮಂತ—ನನ್ನಾಣೆ—ನನ್ನ, ನಿನ್ನ ಕನಸನ್ನು ನುಚ್ಚು ನೂರು ಮಾಡಿದ ದ್ರೋಹಿಗಳನ್ನು ಸದೆಬಡೆ. ನನ್ನ ತಂದೆಗೆ ಸಾಂತ್ವನ ನೀಡು ಅಮ್ಮಾಗೆ ನಮಸ್ಕಾರ ತಿಳಿಸು. ನನ್ನನ್ನು ಮರೆಯಬೇಡ ಯಾವಾಗಲೂ ದೂರದಲ್ಲಿ ಎಲ್ಲೋ ಇದ್ದು—ನಾನು, ನಿನ್ನನ್ನು ನೋಡ್ತಾ ಇರ್ತೇನೆ ಒಂದು ಮಾತು ಹೇಮಂತ ಸುಷಮಾ ತುಂಬಾ ಒಳ್ಳೇ ಹುಡುಗಿ ಅವಳನ್ನು ಕಂಡರೆ ನನಗೆ ತುಂಬಾ ಪ್ರೀತಿ ಅವಳ ಆತ್ಮದಲ್ಲಿ ನಾನು ವಾಸವಾಗುತ್ತೇನೆ. ನೀನು ಅವಳನ್ನು ಮದುವೆಯಾಗು ಈ ರೀತಿ, ನನ್ನ ಕೊನೆಯ ಆಶೆ, ನೀನು ನೆರವೇರಿಸು—ಎಲ್ಲರಿಗೂ ನಮಸ್ಕಾರಗಳು.

ಶಾಂತಿ

ಪತ್ರ ಓದಿ ಧನಂಜಯ ಹೇಮಂತನ ಕಡೆ ನೋ... ...ಕಣ್ಣುಗಳಿಂದ ಇಳಿದ ನೀರು ಗಲ್ಲ ತೋಯಿಸಿತ್ತು. ಅವನ ಕಣ್ಣುಗಳಿಂದ, ಕಿಡಿಗಳು ಉದುರ

ತೊಡಗಿದವು. ಧನಂಜಯ, ಅವನ ಬೆನ್ನ ಮೇಲೆ ಕೈಯಾಡಿಸಿ—

"ಹೇಮಂತ.. ಶಾಂತನಾಗು" ..ಎಂದ.

"ಶಾಂತಿ ? ...ಹಹ್ಹ ಹಹಹ . ." ವಿಕಟವಾಗಿ ನಕ್ಕ ಹೇಮಂತ, "ಇನ್ನೆಲ್ಲಿಯ ಶಾಂತಿ ನನಗೆ ? ...ಎಲ್ಲಿಯವರೆಗೂ ನಾನು ಈ ಅಪರಾಧಿಗಳನ್ನು ಕಂಡು ಹಿಡಿದು, ಶಾಂತಿಗಾದ ಅನ್ಯಾಯದ ಸೇಡು ತೀರಿಸಿಕೊಳ್ಳುವದಿಲ್ಲವೋ, ಅಲ್ಲಿಯವರೆಗೂ ನನಗೆ ಶಾಂತಿ ಇಲ್ಲ. ಅನ್ನ, ನೀರು, ವಿಶ್ರಾಂತಿ ಯಾವುದು ನನಗೆ ಬೇಡ, ...ಯಾವುದು ನನಗೆ ಬೇಡ, ಶಾಂತಿಯ ಅಂತಿಮ ಆಸೆ ಪೂರೈಸಿದರೆ ಸಾಕು, ನನ್ನ ಹೆಸರಿಗೆ ಬಂದ ಕಲಂಕ ತೊಡೆದರೆ ಸಾಕು.

ಬಿರುಗಾಳಿಯಂತೆ ಹೊರಗೆ ನಡೆದ ಹೇಮಂತ. ಡಾಕ್ಟರ್ ಮತ್ತು ಧನಂಜಯ, ಅವನು ಹೋಗುವದನ್ನೇ ನೋಡುತ್ತ ಕುಳಿತಿದ್ದರು. ಅವರ ಮುಖದಲ್ಲಿ ಅಪಾರ ಅನುಕಂಪ ಮನೆ ಮಾಡಿತ್ತು.

## ಹದಿನಾರು

ಎರಡು ದಿನಗಳಿಂದ, ಕಣ್ಣಿಗೆ ಕಣ್ಣು ಹಚ್ಚಿರಲಿಲ್ಲ. ಒಂದು ದಿನ ನೀರು, ಸಹ ಕುಡಿದಿರಲಿಲ್ಲ. ಶಾರದಮ್ಮ ಹತ್ತು ಸಾರಿ ಹೇಳಿದರೂ—ಆತ ಒಂದು ತುತ್ತು ಅನ್ನ ತಿಂದಿರಲಿಲ್ಲ. ಹೇಳಿ-ಹೇಳೀ ಬೇಸತ್ತು—ಅವರು ಅಡಿಗೆ ಮನೆಗಯಲ್ಲಿ ದಾರಾಶಾ ಹಿಗಳಾದರು. ಅವರ ಕಣ್ಣುಗಳಿಂದ, ಹರಿಯ್ಳುವ ನೀರು ನೆಲ ತೋಯಿಸಿತು. "ಮನೆಯಲ್ಲಿರುವವರೆಗೆ—ನಿನ್ನ ಮುಖ ತೋರಿಸಬೇಡ. ನನ್ನೊಂದಿಗೆ ಮಾತನಾಡಬೇಡ"—ಎಂದು ಹೇಮಂತ ಸ್ಪಷ್ಟವಾಗಿ ಹೇಳಿದ್ದರೂ—ಸುಷಮಾ ಒಂದು ನಿರ್ಧಾರಕ್ಕೆ ಬಂದಳು. ಅವಳಿಗೆ ಶಾರದಮ್ಮನ ಕೊರಗು ನೋಡಲಿಕ್ಕೆ ಆಗದು. ಒಂದು ತಟ್ಟೆಯಲ್ಲಿ ಊಟ ಬಡಿಸಿಕೊಂಡು, ಹೇಮಂತನಿದ್ದಲ್ಲಿಗೆ ಬಂದಳು. ಹೇಮಂತ ಸೂರಪ್ಪನಿಗೆ ಹೇಳುತ್ತಿದ್ದ, "ಸೂರಪ್ಪಾ, ಊರಿನಲ್ಲೆಲ್ಲಾ ಸುತ್ತು .ಸಂದಿಗುಂದಿ ಹುಡುಕು. ಹಿಂದೆ ತೆರೆಯಿರುವ, ಆಲದ ಮರವಿರುವ ಹಾಗೂ ದೂರಕ್ಕೆ ಗುಡಿ-ಗೋಪುರ ಕಾಣುವ ಮನೆ ಸಿಗುತ್ತದೇನೋ ನೋಡು. ಸಿಕ್ಕರೆ ನನಗೆ ಹೇಳು ಹು.... ಎಲ್ಲಿಯವರೆಗೂ ನಿನ್ನಿಂದ ಈ ಕೆಲಸ ಆಗುವದಿಲ್ಲವೋ ಅಲ್ಲಿಯವರೆಗೆ ನೀನು, ನನಗೆ ಮುಖ ತೋರಿಸಬೇಡ." ತುಟಿ ಎರಡು ಮಾಡದೇ ಸೂರಪ್ಪ ಎದ್ದ. ಸುಷಮಾ ಅನ್ನದ ತಟ್ಟೆಯನ್ನು ತಂದು ಆತನ ಮುಂದಿರಿಸಿದಳು.

ಅಗ್ನಿಯ ನೇತ್ರದಿಂದ, ಅವಳತ್ತ ನೋಡಿದ :

"ನಿನಗೆ ಹೇಳಿರಲಿಲ್ಲವೇ ? ನನಗೆ ನಿನ್ನ ಮುಖ ತೋರಿಸಬೇಡ" ಅಂತ ! ..

"ಇನ್ನು ಮುಂದೆ ತೋರಿಸುವುದಿಲ್ಲ. ...ನನ್ನ ಮೇಲಿನ ಕೋಪದಿಂದ, ಅಮ್ಮನಿಗೆ ಶಿಕ್ಷೆ ಕೊಡಬೇಡಿ. ನಿಮಗೆ ನೀವೇ ಹಿಂಸೆಪಟ್ಟುಕೊಳ್ಳಬೇಡಿ. ನಾನು, ಇಲ್ಲಿಂದ ಹೊರಟುಹೋಗುತ್ತೇನೆ ದಯಮಾಡೀ, ಎರಡು ತುತ್ತು ಊಟ ಮಾಡಿ .."

"ಯಾರಿಗೆ ಬೇಕಾಗಿದೆ ನಿನ್ನ ಊಟ ! ನೀನೂ ಬೇಡ ! ನಿನ್ನ ಊಟವೂ ಬೇಡ ! ತೊಲಗಿಲ್ಲಿಂದ ."

"ಹೇಮಂತಾ, ಎರಡುತುತ್ತು ."

"ರಾಮ ..! ಅನ್ನ ನನಗೆ ಬೇಡವೇ ಬೇಡ". ಹೇಮಂತ ತಟ್ಟೆಯನ್ನು ಬೀಸಿ, ಅವಳ ಮುಖದ ಮೇಲೆ ಒಗೆದ. ಅನ್ನ, ಸಾಂಬಾರು, ಪಲ್ಯ, ಅವಳ ಮುಖದ ಮೇಲೆ ಸೂರೆಯಾಯಿತು. ಒಂದು ಕಡೆ ತಟ್ಟೆ ತಗಲಿ, ರಕ್ತ ಸಹ ಕಾಣಿಸಿತು. ಸೀರೆಯ ಸೆರಗಿನಿಂದ ಮುಖ ಒರೆಸಿಕೊಂಡು, ಬಿಕ್ಕುತ್ತಾ, ಮನೆಯಿಂದ ಹೊರಗೋಡಿದಳು. ಹೊರಗೆ—ಊರ ಹೊರಗೆ ..ಎಷ್ಟುದೂರ ಓಡಿದಳೋ ತಿಳಿಯದು. ಕೆರೆಯ ಬಳಿ ಬಂದು ನಿಂತಳು. ಬಾಳು ಬೇಸರ ವಾಗಿತ್ತು. ಕೆರೆಯಲ್ಲಿ ಹಾರಿದಳು, ಮರುಕ್ಷಣ, ಅವಳ ಹಿಂದೆಯೇ ಹಾರಿದ ಸದ್ದು. ಸುಷಮಾಳಿಗೆ ಎಚ್ಚರ ತಪ್ಪಿತು.

ಮುಂದೆ ಅವಳಿಗೆ ಎಚ್ಚರ ಬಂದಾಗ, ಎದುರಿಗೆ, ಹೇಮಂತನಿದ್ದ ಆಸ್ಪತ್ರೆಯ ನರ್ಸು ಹಾಗೂ ಅವಳ ಜೊತೆ— ಪುರುಷ ಇದ್ದರು.

"ನೀನು ಸುಷಮಾ ಅಲ್ಲವೇ ? ಆಕೆ ಕೇಳಿದಳು"

"ಹೌದು ..! ನನ್ನನ್ನೇಕೆ ಬದುಕಿಸಿದಿರಿ ..?"

"ನಾನು ನಿನ್ನನ್ನು ಬದುಕಿಸಲಿಲ್ಲ, ನಿನ್ನನ್ನು ನನ್ನ ಪತಿ ಬದುಕಿಸಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ—ನಿನ್ನನ್ನು ದೈವ ಬದುಕಿಸಿದೆ. ನೀನೇಕೆ ಆತ್ಮಹತ್ಯೆಗೆ ಪ್ರಯತ್ನಿಸಿದೆ ...? ಹೇಳು ..ನನ್ನಿಂದಾದ ಸಹಾಯ ಮಾಡ್ತೇನೆ !"

"ಅದು ಸರೀ. ನೀವು ಯಾರು ? ನಿಮ್ಮ ಹೆಸರೇನು ? "

"ಸಾರೀ ನಾನೇ ಮರೆತೆ. ನಾನು, ನಿನ್ನನ್ನು ಚೆನ್ನಾಗಿ ಬಲ್ಲೆ ಹೇಮಂತ ನಿದ್ದ ಆಸ್ಪತ್ರೆಯಲ್ಲಿ ನಾನು ನರ್ಸ್ ಕೆಲಸ ಮಾಡುತ್ತೇನೆ. ನನ್ನ ಹೆಸರು ಮಾಲಾ ! ನೀನು ಯಾವ ರೀತಿ, ಹೇಮಂತನಿಗೆ ಶಾಂತಿಯ ರೂಪದಲ್ಲಿ ಸೇವೆ ಮಾಡಿದೆಯೋ—ಅದನ್ನೆಲ್ಲಾ ನಾನು ಕಣ್ಣಾರೆ ನೋಡಿದ್ದೇನೆ ...ಸುಷಮಾ, ನಿಜವಾಗಿಯೂ, 'ನೀನು' ತ್ಯಾಗಜೀವಿ. ನಿನ್ನದನ್ನು ಹಾಳು ಮಾಡಿಕೊಂಡು,

ಮತ್ತೊಬ್ಬರಿಗೆ ಸೇವೆ ಮಾಡಲು ಬಯಸಿದೆ.

ಹಾಸಿಗೆಯಲ್ಲಿ ಮಲಗಿದ್ದ ಸುಷಮಾಗೆ ತಲೆಭಾರವೆನಿಸಿದಂತಾಯಿತು. ಮಬ್ಬಾದ ಕಂಗಳ ಮುಂದೆ ಹೇಮಂತನೊಡನೆ ನಡೆದ ಬಿರುಸಿನ ಮಾತುಗಳ ದೃಶ್ಯ ಚಲನಚಿತ್ರದಂತೆ ಮೂಡಿ ಒರಲಾರಂಭಿಸಿತು... "ಹೇಮಂತ, ನಿನ್ನ ಮಾತು ನನಗೆ ಅರ್ಥವಾಗ್ತಾ ಇಲ್ಲ ನೀನು—ತಿಳಿದೂ ಈ ರೀತಿ ಮಾತ ನಾಡಬೇಡ. ಈ ಪಿಂಡಕ್ಕೆ ಕಾರಣವಾದ, ಇಲ್ಲದ ಹುಡುಗನನ್ನು ನಾನೆಲ್ಲಿಂದ ತರಲಿ ?"

"ಹಾಗಾದರೆ ಇದಕ್ಕೆ ಹೊಣೆಯಾರು ?"

"ಏಕೆ ? ನಿನಗೆ ಗೊತ್ತಿಲ್ಲವೆ ? ಅಥವಾ ನನ್ನ ಬಾಯಿಯಿಂದಲೇ ಕೇಳ ಬೇಕೆಂದಿರುವೆಯಾ ?"

"ಸುಷಮಾ, ಮೊದಲೇ ನಾನು, ಅರ್ಧಸತ್ತಿದ್ದೇನೆ. ಈಗ ಈ ರೀತಿ ಚುಚ್ಚಿ ಚುಚ್ಚಿ ಮಾತನಾಡಿ ನನ್ನನ್ನು ಕೊಲ್ಲಬೇಡ ನನ್ನಲ್ಲಿ ಅದನ್ನು ತಡೆದು ಕೊಳ್ಳುವ ಶಕ್ತಿ ಇಲ್ಲ"

"ಹಾಗಾದರೆ ಕೇಳು ಇದಕ್ಕೆ ನೀನೆ ಹೊಣೆ! ನನ್ನ ಹೊಟ್ಟೆಯಲ್ಲಿರು ವುದು ನಿನ್ನದೇ ಕೂಸು ತಿಳಿಯಿತಾ ?!"

"ಛಟೀರ್" ಎಂದು, ಸುಷಮಾಳ ಕೆನ್ನೆಯ ಮೇಲೊಂದು ಬಾರಿಸಿದ ಹೇಮಂತ. ಅದರ ಹಿಂದೆಯೇ ರೋಷ ಪೂರಿತವಾದ ಮಾತುಗಳು ಸಿಡಿದು ಬಂದವು. "ಥೂ ! ...ಇಂತ ಮಾತನಾಡಲು ನಿನಗೆ ನಾಚಿಕೆಯಾಗೋದಿಲ್ಲವೆ ? ಯಾರಿಗೋ ಬಸಿರಾಗಿ, ಈಗ ಅದರ ಅಪವಾದವನ್ನು ನನ್ನ ಮೇಲೆ ಹಾಕಲು ಬಂದಿರುವೆಯಾ? ಚೆನ್ನಾಗಿದೆ. ನಿನ್ನ ಮದುವೆಯಾಗಲು—ನಾನು ಒಪ್ಪಲಿಲ್ಲ ನೋಡು, ಅದಕ್ಕಾಗಿ, ಸೇಡು ತೀರಿಸಿಕೊಳ್ಳಲು ಈ ನಾಟಕ ಆಡ್ತಾ ಇದಿಯಾ ?—ಒಂದು ಮಾತು ನೆನಪಿನಲ್ಲಿಟ್ಟುಕೋ! ನಿನ್ನ ಯಾವ ಮಾತಿಗೂ ನಾನು ಮರುಳಾಗಲಾರೆ ನಿನ್ನ ನಾಟಕ ನನ್ನೆದುರು ನಡೆಯು ಲಾರದು! ಹೂಂ! ಇನ್ನು ನಡೆಯಾಚೆ! ನನಗೆ ನಿನ್ನ ಹಾಳು ಮುಖ ತೋರಿಸಬೇಡಾ !"

ಸುಷಮಾ ಧೊಪ್ಪನೆ ನೆಲಕ್ಕೆ ಬಿದ್ದು, ಅವನ ಕಾಲುಗಳನ್ನು ಹಿಡಿದು ಕೊಂಡು ಬೇಡಿಕೊಂಡಳು.

"ಹೇಮಂತ....ಹೇಮಂತ ...ಇಂಥಾ ಕಟು ಮಾತುಗಳನ್ನಾಡುವದಕ್ಕಿಂತ, ನನಗೆ ಒಂದಿಷ್ಟು ವಿಷವನ್ನಾದರೂ ಕೊಟ್ಟುಬಿಡು. ನಿಶ್ಚಿಂತೆಯಿಂದ ಸಾಯು ತ್ತೇನೆ ಆದರೆ ಒಂದು ಮಾತು ಮಾತ್ರ ಸತ್ಯ....ನನ್ನ ಹೊಟ್ಟೆಯಲ್ಲಿರುವ

ಕೂಸಿಗೆ "ನೀನೇ" ತಂದೆ ಅದು ನಿನ್ನದೇ ಪಿಂಡ. ಇಂದಲ್ಲ, ನಾಳೆಯಾದರೂ ಅದನ್ನು ನೀನು ಒಪ್ಪಿಕೊಳ್ಳಲೇ ಬೇಕು."

"ಇಂಥ ಬಣ್ಣದ ಮಾತುಗಳು ಬೇಕಾಗಿಲ್ಲ ಹೂಂ : ಏಳು ಮೇಲೆ... ಅಮ್ಮ ಎದ್ದು ನೋಡಿದರೆ, ಮತ್ತೊಂದು ಅವಾಂತರವಾದೀತು."

"ಕಣ್ಣೀರು ಸುರಿಸಿದರೆ, ಕಲ್ಲು ಕರಗೀತೆ?" ಸುಷಮಾಗೆ ಗೊತ್ತು ಹೇಮಂತ ಒಪ್ಪಲಾರನೆಂದು ತನ್ನ ದೈವ, ತನ್ನ ಮೇಲೆ ಮುನಿದರೆ ಯಾರೇನು ಮಾಡಲು ಸಾಧ್ಯ?—ಅವಳು ಬಾಗಿಲು ದಾಟುವ ಮುನ್ನ ಹೇಮಂತ ನುಡಿದ "ನೀನು—ಇಲ್ಲಿಯೇ ಇರುವುದಾದರೆ—ಎಂದೂ 'ನನ್ನ ಮುಂದೆ' ಬರಬೇಡ, ಹಾಗೂ ಮಾತನಾಡಿಸಲು ಇಚ್ಛಿಸಬೇಡ ಅದಷ್ಟು ಬೇಗ, ನೀನಿಲ್ಲಿಂದ ಹೊರಟುಹೋದರೆ ಸಾಕು "

ಸುಷಮಾ ಭೋರಾಡಿ ಅಳಬೇಕೆಂದರೂ, ಅವಳ ಕಣ್ಣೀರು ಬತ್ತಿಹೋಗಿದ್ದವು ಅತ್ತರೆ ಏನು ಪ್ರಯೋಜನ? ಬೊಂಬೆಯಂತೆ ನಡೆದು ಬಂಧು ತನ್ನ ಹಾಸಿಗೆ ಸೇರಿದಳು. ಬೆಳಕು ಹರಿಯುವವರೆಗೂ, ಕಣ್ಣುರೆಪ್ಪೆ ಕೂಡಿಸಲಿಲ್ಲ. ನಿದ್ದೆ ಅವಳ ಬಳಿ ಸುಳಿಯಲಿಲ್ಲ ಸುಮಾರು ಆರು ಗಂಟೆಯ ಹೊತ್ತಿಗೆ ಶಾರದಮ್ಮ, ಎದ್ದು, ದೇವರ ಪಟಕ್ಕೆ ಕೈಮುಗಿದರು. ಅಂಗೈ ನೋಡಿಕೊಂಡು, "ಕರಾಗ್ರೇ ವಸತೇ ಲಕ್ಷ್ಮೀ" ಪಠಿಸಿ, ಕಣ್ಣು ಬಿಡುತ್ತಲೂ, ಸುಷಮಾ ತಮ್ಮತ್ತಲೇ ನೋಡುತ್ತಿರುವದನ್ನು ಗಮನಿಸಿ, ಕೇಳಿದರು.

"ಏನಮ್ಮಾ ?—ಹಾಗೇಕೆ ನೋಡ್ತಾ ಇದೀಯಾ ?"

"ಅತ್ತೇ, ನಾನೊಂದು ಮಾತು ಹೇಳಿದ್ರೇ, ನೀವು ಕೋಪಮಾಡಿಕೊಳ್ಳೋದಿಲ್ಲ ತಾನೆ ?" "ಇಲ್ಲಮ್ಮಾ ಅದೇನು ಹೇಳು ?"

"ನಾನು ಸ್ವಲ್ಪ ದಿವ್ಸ-ಅಂದ್ರೆ, ಒಂದೋ ಎರಡೋ ತಿಂಗಳು ಇಲ್ಲಿದ್ದರೆ ನಿಮಗೆ ತೊಂದರೆಯಾಗೋದಿಲ್ಲವಷ್ಟೆ !"

"ಸುಷಮಾ, ಏನಮ್ಮಾ, ಈ ರೀತಿ ಮಾತನಾಡ್ತಾ ಇದೀಯಾ ?—ಇದರಲ್ಲಿ ತೊಂದರೆಯ ಪ್ರಶ್ನೆ ಎಲ್ಲಿಂದ ಬಂತು ?"

"ಇದೇನಮ್ಮಾ—ಅದಕ್ಕೆ ನಾನು ಹೇಳಿದ್ದು. !—ಏಕೆಂದರೆ ನೀವು, ನನಗೆ ತಾಯಿಯ ಸಮಾನ. ನಿಮ್ಗೆ ಮೋಸ ಮಾಡಲು ನನಗಿಷ್ಟಾ ಇಲ್ಲ. .."

"ಏನೋತಾಯಿ ?!—ನೀನು ಮಾತನಾಡೋದು ನನಗೊಂದೂ ಅರ್ಥ ಆಗ್ತಾ ಇಲ್ಲ ."

"ನಿಧಾನವಾಗಿ ಎಲ್ಲಾ ಒಂದೊಂದೂ ತಾನೇ ಅರ್ಥವಾಗುತ್ತಮ್ಮಾ.... ಕೇಳಿ—ನನಗೀಗ ಮೂರು ತಿಂಗಳು...."

"ಏನೇ ?—ಏನೇ ನೀನು ಹೇಳ್ತಾ ಇರೋದು ?"

"ನಾನು ಹೇಳ್ತಾ ಇರೋದು—ನಿಜವಮ್ಮಾ....ನನಗೀಗ, ಮೂರು ತಿಂಗಳು. ಅಂದರೆ, ನಾನು ಮೂರು ತಿಂಗಳ ಬಸುರಿ. ನಾನು—ಮದುವೆಯಾಗದೇ ಬಸುರಿಯಾಗಿದ್ದೇನೆ."

ದೆವ್ವಬಡಿದವರಂತೆ, ಗರ ಹೊಡೆದು ಕೂತು ಬಿಟ್ಟರು ಶಾರದಮ್ಮನವರು. ಸುಷಮಾ ಅವರ ಬಳಿ ಬಂದು ಮೆಲ್ಲನೆ ಅವರ ಮಡಿಲಲ್ಲಿ ದುಃಖ ತೋಡಿಕೊಂಡು ಹೇಳಿದಳು. "ಅತ್ತೆ, ನಾನು ದಾರಿ ತಪ್ಪಿಲ್ಲ. ನನ್ನದು ಪಾಪ ಪಿಂಡವೂ ಅಲ್ಲ. ಇದೊಂದು ಪವಿತ್ರ ಪಿಂಡ. ನನ್ನ ದೇಹದ ಆಸೆಗೋಸುಗ, ನಾನು ಬಸಿರಾಗಿಲ್ಲ. ಸಮಯ ಬರುವವರೆಗೂ ಇದಕ್ಕಾಗಿ ಕಾರಣ ಎಂದೂ ಕೇಳಬೇಡಿ ಸ್ವಲ್ಪದಿವಸವಿದ್ದು, ನಂತರ—ನನ್ನಷ್ಟಕ್ಕೆ ನಾನು ಹೊರಟು ಹೋಗುತ್ತೇನೆ. ಈ ಮಧ್ಯೆ ದಯವಿಟ್ಟು 'ನನ್ನಾರು ಮಾತನಾಡಿಸಬೇಡಿ. ನನ್ನ ಪಾಡಿಗೆ ನನ್ನನು ಬಿಡಿ—ಸಾಕು "

## ಹದಿನೇಳು

ಮಾಲಾ ಹಾಗೂ ಅವಳ ಪತಿ ರಮೇಶ ಒಳಗೆ ಬಂದಾಗ, ಹೇಮಂತ ಅಪರಾಧಿಗಳ ಫೋಟೋ ಆಲ್ಬಂ ನೋಡುತ್ತಿದ್ದ. ಅವನಿಗೆ ಶಂಕರ–ಸುಂದರರ ವಿಳಾಸ ಬೇಕಿತ್ತು. ಆದು ಸಿಗುತ್ತಲು ಅವರ ವಿಳಾಸ ಗುರುತುಹ್ಹಾಕಿಕೊಂಡು, ಆಲ್ಬಂ ಮುಚ್ಚುವದರಲ್ಲಿ—ಮಾಲಾ "ನಮಸ್ಕಾರ" ಅಂದಳು.

"ನಮಸ್ಕಾರ ಕುಳಿತುಕೊಳ್ಳಿ" ಅಂದ ಹೇಮಂತ. ಅಷ್ಟರಲ್ಲಿ ಶಾರದಮ್ಮ ಹೊರಗಡೆ ಬಂದು "ಸುಷಮಾ ಕಾಣ್ತಾ ಇಲ್ಲ. ನೀನು ನೋಡಿದೆಯಾ ?" ಎಂದು ಕೇಳಿದಳು.

"ಇಲ್ಲ" ಎಂದ ಶುಷ್ಕವಾಗಿ ಹೇಮಂತ.

"ಅಮ್ಮಾ ?—ನಿಮ್ಮ ಜೊತೆ ಸ್ವಲ್ಪ ಮಾತಾಡಬೇಕು. ಇಲ್ಲೇ ಕುಳಿತುಕೊಳ್ತೀರಾ ?—ಶಾರದಮ್ಮ."

"ಆಗಲೀ ತಾಯಿ" ಅನ್ನುತ್ತಾ ಹೇಮಂತನ ಬಳಿ ಕುಳಿತುಕೊಂಡರು.

ಮಾಲಾ ಒಂದೂ ಬಿಡದೇ, ಚಾಚೂತಪ್ಪದೆ, ಸುಷಮಾ ವಿಷಯ—ಹೇಳಿ ಮುಗಿಸಿದಾಗ, ಹೇಮಂತ ಪೂರ್ತಿ ಬೆವತು ಹೋಗಿದ್ದ.

"ಅಂದರೆ, ಅಂದರೆ,—ನೀವನ್ನೋದು, 'ನಾನೇ' ಸುಷಮಾಳ ಹೊಟ್ಟೆ

ಯಲ್ಲಿರುವ ಕೂಸಿಗೆ, ತಂದೆಯೆ ?"

"ನಿಸ್ಸಂಶಯವಾಗಿ—ಹೇಮಂತ ! ಒಂದು ದೃಷ್ಟಿಯಿಂದ, 'ನೀವೂ' ಸುಷಮಾಳಿಗೆ ಕೃತಜ್ಞರಾಗಿರಬೇಕು. ಆಕೆಯೇ ನಿಮಗೆ ಪುನರ್ಜನ್ಮನೀಡಿದಳು. ಒಂದು ವೇಳೆ ಅವಳು ಶಾಂತಿಯ ರೂಪದಲ್ಲಿ ನಿಮ್ಮ ಸೇವೆ ಮಾಡದಿದ್ದರೆ, ಶಾಂತಿಯ ನೆನಪಿನ ಮಾನಸಿಕ ಒತ್ತಡದಿಂದಾಗಿ, ನೀವು ಸಂಪೂರ್ಣ ಹುಚ್ಚ ರಾಗಬಹುದಿತ್ತು. ನಿಮ್ಮ ಮೆದುಳಿಗೆ, ಆರೋಗ್ಯಕ್ಕೆ, ಶಾಂತಿ ಬೇಕಾಗಿತ್ತು. ಒಂದು ದೃಷ್ಟಿಯಿಂದ 'ನೀವು' ಶಾಂತಿಯನ್ನು ಪ್ರೀತಿಸಿದಿರಿ, ಮದುವೆ ನಿಶ್ಚಯವಾಗಿತ್ತು. ನೀವು ಅವಳನ್ನು ವಧುವಿನ ರೂಪದಲ್ಲಿ ಕಂಡು, ಅವಳೊಡನೆ ಸುಖಪಡೆಯುವ ಕನಸು ಕಂಡಿದ್ದೀರಿ. ಆದರೆ, ಅದು ಪೂರ್ತಿ ಆಗಲಿಲ್ಲ. ನಿಮಗೆ ಅವಳ ದೇಹದ ಸುಖ ಸಿಗಲಿಲ್ಲ. ನಿಮ್ಮ ಅತೃಪ್ತ ಮನಸ್ಸು ಕೆರಳಿತು. ನೀವು 'ನಿಮ್ಮತನ'ಕಳೆದುಕೊಂಡಿರಿ. ಮತಿ ವಿಕಾರವಾಯಿತು. ಆಗ, ಸುಷಮಾ, ಶಾಂತಿಯ ರೂಪದಲ್ಲಿ ಬಂದು, ನಿಮಗೆ ದೇಹ ಸುಖ ನೀಡಿದಳು. ಪರಿಣಾಮವಾಗಿ—ನಿಮಗೆ ಮಾನಸಿಕ ಶಾಂತಿ, ಸಿಕ್ಕಿತು. ಶಾಂತಿ, ನಿಮಗೆ ಸಿಕ್ಕಿತು ಎಂಬ ತೃಪ್ತಿ ದೊರೆಯಿತು ನೀವು ಅಪಾಯದಿಂದ ಪಾರಾದಿರಿ. ವೈದ್ಯಕೀಯ ದೃಷ್ಟಿಯಿಂದ ನಮ್ಮ ಕೈಯ್ಯಲ್ಲಿ ಎಷ್ಟು ಸಾಧ್ಯವೋ ಅಷ್ಟು ಮಾಡಿದವು. ಎದ್ದು ಮೇಜಿನ ಮೇಲೆ ಕೈಮುಷ್ಠಿಮಾಡಿ ಹೇಮಂತ · "ಅಯ್ಯೋ ! ನನ್ನಿಂದ ಎಂಥ ಅನ್ಯಾಯ, ಕಾಲಿಗೆ ಬಿದ್ದು ಆಕೆ ಇದಕ್ಕೆ 'ನೀವೇ ಕಾರಣ' ಅಂದಳು. ನಾನು, ಅವಳಿಗೆ ಏನೇನೋ ಅಂದು ಹೊರದಬ್ಬಿದೆ. ನಾನು ಪಾಪಿ ! ಈಗವಳನ್ನು ನಾನು, ಎಲ್ಲಿ ಹುಡುಕಲಿ ?" ಪ್ರಲಾಪಿಸತೊಡಗಿದ.

ಮಾಲಾಳ ಮುಖದ ಮೇಲೆ ಸಂತಸ ಲಾಸ್ಯವಾಡಿತು. "ಚಿಂತಿಸಬೇಡಿ. ಆಕೆ ನನ್ನ ಮನೆಯಲ್ಲಿದ್ದಾರೆ. ನಿಮ್ಮಿಂದ ತಿರಸ್ಕೃತಳಾದನಂತರ ಆಕೆ, ಕೆರೆಗೆ ಹಾರಿಕೊಂಡಿದ್ದಳು. ನನ್ನ ಪತಿ ರಮೇಶ್, ಅವಳನ್ನು ಬದುಕಿಸಿದ್ದಾರೆ. ನಡೆಯಿರಿ, ನಮ್ಮ ಮನೆಗೆ ಹೋಗೋಣ."

ಹೇಮಂತ, ಶಾರದಮ್ಮ, ಮಾಲಾಳೊಂದಿಗೆ ಅವರ ಮನೆಗೆ ಬಂದಾಗ, ಮನೆ ಬಿಕೋ ಅನ್ನುತ್ತಿತ್ತು. ಅಲ್ಲೆಲ್ಲೂ ಸುಷಮಾಳ ಸುಳಿವಿಲ್ಲ. ಮನೆಯೆಲ್ಲ ಜಾಲಾಡಿಸಿದ್ದಾಯಿತು. ಹೇಮಂತ ಹುಚ್ಚನಂತೆ "ಸುಷಮಾ!....ಸುಷಮಾ" ಎಂದು ಕೂಗುತ್ತಾ ಓಡಾಡಿದ. ಅಷ್ಟರಲ್ಲಿ ಮಾಲಾಳ ಆರು ವರ್ಷದ ಮಗ ಸಂದೀಪ ಅಳುತ್ತಾ ಬಂದು, "ಮಮ್ಮಿ!— ಇಬ್ಬರು ಬಂದು ನಮ್ಮ ಮನೆಯಲ್ಲಿದ್ದಳಲ್ಲ 'ಅವಳನ್ನು' ಎತ್ತಿಕೊಂಡು ಹೋದರು. ನಾನು ತಡೆದೆ. ನನ್ನನ್ನೂ ಎತ್ತಿ, ಹುಲ್ಲಿನ ಮೇಲೆ ಎಸೆದರು. ಒಬ್ಬನ ಎರಡೂ ಕಿವಿಗಳೂ

ಹರಿದಿದ್ದವು—ಮಮ್ಮೀ! ಆತ "ಹೂಂ! ಹೋಗಿ ..ವಿಷಯ ಹೇಮಂತನಿಗೆ ತಿಳಿಸು" ಅಂದ. ಮಮ್ಮೀ-ಮಮ್ಮೀ—ಹೇಮಂತ ಅಂದರೆ, ಯಾರು ಮಮ್ಮೀ?

"ಅಳುತ್ತಿದ್ದ ಮಗುವನ್ನು ಅಪ್ಪಿಕೊಂಡ ಹೇಮಂತ, "ಮಗೂ, ಅಳಬೇಡ ....ನಾನೇ ಹೇಮಂತ, ಆ ಪಾಪಿಗಳಿಗೆ ಸರಿಯಾದ ಶಿಕ್ಷೆ ನಾನು ಮಾಡ್ತೀನೆ" ಎಂದ

ಎಲ್ಲಕ್ಕಿಂತ ಹೆಚ್ಚು ಘಾಸಿಯಾದವರೆಂದ್ರೆ ಶಾರದಮ್ಮಾ. ವಿಧಿಯ ಅಣಕಾಟದ ಮುಂದೆ ಅವರು ಉಸಿರೆತ್ತದಂತಾಗಿದ್ದರು. ಕಾಣದ ಕುದುರೆಯ ಬೆನ್ನೇರಿ ಹೊರಟಿದ್ದರು ಅದೆಲ್ಲಿಗೆ ಒಯ್ಯುತ್ತೋ?—ಅಲ್ಲಿಗೆ ಹೋಗಲೇ ಬೇಕಲ್ಲ!"

ಹೇಮಂತನಲ್ಲಿ ಭೂತ ಸಂಚಾರವಾದಂತ್ತಿತ್ತು. ಈಗಾಗಲೇ ಶಾಂತಿಯನ್ನು ಕಳೆದುಕೊಂಡಿದ್ದ. ಇನ್ನು ತಡಮಾಡಿದರೆ ಸುಷಮಾ ಸಹ ತನ್ನಿಂದ ದೂರವಾಗುತ್ತಾಳೆ ಎಂಬ ಚಿಂತೆ ಅವನಿಗೆ ಆತ ಸೀದಾ ನಂಜುಂಡಪ್ಪನವರ ಬಳಿ ಬಂದ, ಅವರಲ್ಲಿ ಎರಡು ಉಂಗುರ ಧರಿಸಿರುವ ವ್ಯಕ್ತಿಬಗ್ಗೆ ವಿಚಾರಿಸಬೇಕೆಂದು ಹೇಮಂತ, ನಂಜುಂಡಪ್ಪನವರ ಮನೆಗೆ ಬಂದಾಗ, ಅವರು ಮೂರು-ನಾಲ್ಕು ಜನರ ಮಧ್ಯೆ ಕುಳಿತಿದ್ದರು ಎಲ್ಲರೂ ಅವರಿಗೆ ಸಾಂತ್ವನ ಹೇಳುತ್ತಿದ್ದರು. ಅವರಲ್ಲಿ ಪ್ಯಾಂಟು, ಶರಟು, ಧರಿಸಿದ ಸುಮಾರು ಮೂವತ್ತು ವರ್ಷದ ತರುಣ, ದೊಡ್ಡಬಾಯಿ ಮಾಡುತ್ತಾ, ಪೋಲೀಸರನ್ನೇ ಚುಡಾಯಿಸುತ್ತಿದ್ದ ಕೈಬಾಯಿ ಮಾಡುತ್ತಿದ್ದ ಅವನ ಹಾವ-ಭಾವ ನಟನೆಗಳಿಗೆ ಅಲ್ಲಿದ್ದ ಜನ ಮುಗ್ಧರಾಗಿ, ಅವನ ಮಾತನ್ನೇ ಸತ್ಯವೆಂಬಂತೆ ಕೇಳ್ತಾ ಇದ್ದರು. ಹೇಮಂತನ ದೃಷ್ಟಿಸಹ ಆ ವ್ಯಕ್ತಿಯ ಮೇಲೇ, ಅವನ ಕೈಕಾಲು ಬಾಯಿಗಳ ಮೇಲೆ ಹರಿದಾಡಿತು. ಅದೇ ಕ್ಷಣ ಶಾಂತಿ, ಚೀಟಿಯಲ್ಲಿ ಬರೆದ ವಿಷಯ ನೆನಪಿಗೆ ಬಂದಿತು.

"ಒಬ್ಬ ವ್ಯಕ್ತಿಯ ಬಲಗೈಯ್ಯಲ್ಲಿ ಎರಡು ಉಂಗುರಗಳಿವೆ. ಒಂದು ಕೆಂಪು —ಮತ್ತೊಂದು ಬಿಳಿಯದು."

"ಯೂ ಸ್ಕೌಂಡ್ರೆಲ್" ಎಂದು ವಿಕಾರವಾಗಿ, ಕೂಗುತ್ತಾ ಹೇಮಂತ ಆ ವ್ಯಕ್ತಿಯ ಮೇಲೆ ಆಕ್ರಮಣ ಮಾಡಿದ. ಅವನ ಆ ಅಪ್ರತ್ಯಕ್ಷ ಆಕ್ರಮಣದಿಂದಾಗಿ ಅಲ್ಲಿದ್ದವರೆಲ್ಲ ಬೆಚ್ಚಿ ಬಿದ್ದರು. ಆವ್ಯಕ್ತಿ ಗಾಬರಿಯಾಗಿ ಎದ್ದು ನಿಲ್ಲುವುದಕ್ಕೆ—ಹೇಮಂತ ಅವನ ಮುಖದ ಮೇಲೊಂದು ಪ್ರಹಾರ ಮಾಡಿದ. ಚೆಂಡಿನಂತೆ ಪುಟಿದು, ಗೋಡೆಗೆ ಬಡಿದು ಕೆಳಗೆ ಬಿದ್ದ ಆ ವ್ಯಕ್ತಿ ಮೂರ್ಛೆ ಹೋದ. ನಂಜುಂಡಪ್ಪ ಅಬ್ಬರಿಸಿದರು.

"ಏಯ್!....ಏನೋ ಇದು? ನನ್ನ ಮನೆಗೆ ನುಗ್ಗಿ, ಗಲಾಟೆ ಮಾಡಿ

ದ್ದೀಯಾ ? ."

"ಮಿಸ್ಟರ್ ನಂಜುಂಡಪ್ಪಾ" ಹೇಮಂತ ಗಂಭೀರವಾಗಿ ನುಡಿದ—"ನಾನು ಇನ್‌ಸ್ಪೆಕ್ಟರ್ ಆಗಿ ನಿನ್ನ ಮನೆಗೆ ಬಂದಿದ್ದೇನೆ, ಯಾರು ಆ ವ್ಯಕ್ತಿ ?"

"ಅವರು ಅವರು . ನಮ್ಮ ಶಾಲೆಗೆ ಮೊದಲು ಪಾಠ ಹೇಳೋದಕ್ಕೆ ಬರ್‍ತಾ ಇದ್ರು. ಅವರ ಹೆಸರು 'ನಟರಾಜ' ಅಂತ . ಏಕೆ ? ಏನಾಯ್ತು ?"

"ಏನೂ ಇಲ್ಲ ಶಾಂತಿಯನ್ನು ಅಪಹರಿಸಿ, ಕೊಲೆಮಾಡಿದ ಗುಂಪಿನಲ್ಲಿ ಈತನೂ ಒಬ್ಬ .."

"ಆಂ ?"—ನಂಜುಂಡಪ್ಪನವರ ಬಾಯಿಯಿಂದ ಮಾತೇ ಹೊರಡಲಿಲ್ಲ

ನಟರಾಜನನ್ನು ಜೀಪಿನಲ್ಲಿ ಹಾಕಿಕೊಂಡು ಧನಂಜಯನ ಬಳಿ ಕರೆತಂದ ಹೇಮಂತ ನಡೆದ ವಿಷಯ ತಿಳಿಸಿದ. ಶಾಂತಿ ಕೇಸಿಗೆ ಸಂಬಂಧಿಸಿದ, ಸುಪಮಾ ಸಿಕ್ಕಿದ್ದಕ್ಕೆ ಅವನಿಗೆ ಸಂತೋಷವಾಯಿತು. ..ಮುಂದೇನು? ಮುಂದೇನು? .. ಮುಂದೆ ಪ್ರಾರಂಭವಾಯಿತು ಆತಿಥ್ಯ. ಹತ್ತೇ ನಿಮಿಷಗಳಲ್ಲಿ ನಟರಾಜ ದಾರಿಗೆ ಬಂದ ಶಾಂತಿಯನ್ನು ಅಪಹರಿಸುವಲ್ಲಿ ಅವನ ಪಾತ್ರವಿದೆ ಎಂದು ಒಪ್ಪಿಕೊಂಡು ಬಾಯಿಬಿಟ್ಟ.

ನಟರಾಜನ ಊರು ಶಿವಮೊಗ್ಗ, ಅಲ್ಲಿ ಬೀರೆ ಬಡ ಹುಡುಗಿಯನ್ನು ಆತ ಪ್ರೇಮಿಸಿದ. ಅವಳೂ ಪ್ರೇಮಿಸಿದಳು. ಆದರೆ ನಟರಾಜನ ತಂದೆ ಅದಕ್ಕೆ ಅಡ್ಡಿಯಾದರು. ಅವರು ಆಗರ್ಭ ಶ್ರೀಮಂತರು. ಹುಡುಗಿ ದರಿದ್ರೆ. ನಟರಾಜ ಪ್ರೀತಿಯ ಮುಂದೆ, ತಂದೆಯ ಸಂಪತ್ತನ್ನು ಕಾಲಿನಿಂದ ಒದ್ದ. ಕುಸುಮಳನ್ನು ಕರಕೊಂಡು ಈ ಊರು ಸೇರಿದ. ಎರಡು ವರ್ಷ ಸಂಸಾರ ನಡೆಯಿತು ಈ ಮಧ್ಯ ನಟರಾಜ ಮನೆ ಪಾಠ ಹೇಳಲು ಹೋಗುತ್ತಿದ್ದ. ಕುಸುಮಾ ಒಂದು ಆಫೀಸಿನಲ್ಲಿ ಟೈಪಿಸ್ಟ್ ಆಗಿದ್ದಳು.

ಒಮ್ಮೆಲೇ ಕುಸುಮಾ ಬೇನೆ ಬಿದ್ದಳು ವೈದ್ಯರು ಅದು ಕ್ಯಾನ್ಸರ್ ಎಂದರು. ಅವಳನ್ನು ಬದುಕಿಸಲು ನಟರಾಜ ಹೆಣಗತೊಡಗಿದ, ಏನೇನೊ ಮಾಡಿ ದುಡ್ಡು ಹೊಂದಿಸಿದ. ಆದರೆ, ಅವನಿಗೆ ಬೇಕಾದದ್ದು ಲಕ್ಷರೂಪಾಯಿ ಗಳು. ಎಲ್ಲಿಂದ ತರುವುದು ?

ಆವಾಗಲೇ ಅವನಿಗೆ ಆ ರಹಸ್ಯ ವ್ಯಕ್ತಿಯಿಂದ ಕರೆ ಬಂದಿತು. ಎರಡೂ ಕಿವಿ ಹಿಂದ ನಂತರ, ಅವನ ಕಣ್ಣಿಗೆ ಬಟ್ಟೆ ಕಟ್ಟಿ, ಒಂದು ಮನೆಗೆ ಕರೆದೊಯ್ದ. ರಹಸ್ಯಮಯ ವ್ಯಕ್ತಿಯೊಂದಿಗೆ, ಮಾತು ಕತೆಗಳಾದವು ತಾನು ಹೇಳಿದಂತೆ ಕೇಳಿದರೆ ಎರಡು ಲಕ್ಷರೂಪಾಯಿ ಕೊಡುವೆ ಎಂದು ಆ ವ್ಯಕ್ತಿ ಹೇಳಿದಾಗ, ನಟರಾಜ ಒಪ್ಪಿಕೊಂಡ.

ಶಾಂತಿಯ ಅಪಹರಣವಾಯಿತು. ಅದನ್ನು ನಟರಾಜನೇ ಮಾಡಿದ್ದು. ಅದರಂತೆ ಒಂದು ಲಕ್ಷ ಅಂದೇ ಅವನಿಗೆ ಸಿಕ್ಕಿತು. ಇನ್ನೊಂದು ಲಕ್ಷ ನಾಳೆ ದೊರೆಯಲಿದೆ. ಇಷ್ಟು ವಿಷಯ ಬಿಟ್ಟು ಬೇರೆ ಏನೂ ಅವನಿಗೆ ತಿಳಿದಿರಲಿಲ್ಲ ಹೇಮಂತ ಕೆಣಕಿ-ಕೆಣಕಿ ಕೇಳಿದ್ದು, ವ್ಯರ್ಥವಾಯಿತು. ನಟರಾಜ ಹೇಳಿದ್ದು ಮಾತ್ರ ಸತ್ಯ ಆ ವ್ಯಕ್ತಿ ಯಾವಾಗಾದರೊಮ್ಮೆ ನಂಜುಂಡಪ್ಪನವರ ಮನೆಗೆ ಬರುತ್ತಾನೆ. ತುಂಬ ದೊಡ್ಡ ಮೀಸೆ, ಧೋತರ ಮಲ್ಲಿನ ಅಂಗಿ ..

ಸರೀ, ಅವನ ಬಗ್ಗೆ—ನಂಜುಂಡಪ್ಪನವರನ್ನೇ ವಿಚಾರಿಸಿದರಾಯಿತೆಂದು ಕೊಂಡು ಹೇಮಂತ, ಧನಂಜಯ ಪುನಃ ಮತ್ತೆ, ನಂಜುಂಡಪ್ಪನವರ ಮನೆ ಕಡೆ ನಡೆದರು—ಜೊತೆಯಲ್ಲಿ ನಟರಾಜ.

ಜೀಪು ಒಂದು ತಿರುವಿಗೆ ಬಂದಾಗ, ಎದುರಿಗೆ ನೀಲಿ ಬಣ್ಣದ ಪಿಯೆಟ್ ಕಾರೊಂದು ಹಾಯ್ದು ಹೋಯಿತು. ನಟರಾಜ ಒಮ್ಮೆಲೆ "ಐರಾವತ—ಐರಾವತ—ಗಾಡಿ ನಿಲ್ಲಿಸಿ" ಎಂದು ಅರಚತೊಡಗಿದ ಧನಂಜಯ ಗಾಡಿ ನಿಲ್ಲಿಸದೆ, ಹೇಮಂತನ ಕಡೆ ನೋಡುತ್ತಾ ...ಸಾಗಿದ. ನಟರಾಜ ಹುಚ್ಚನಂತೆ ಕೂಗಿದ—"ಹಾಂ ! ...ಅವನೇ ! ..ಅವನೇ !"—"ಆ ಕಾರಿನಲ್ಲಿ ಹೋದವನೇ ನನ್ನ ಬಾಸ್, ಕಾರಿನ ಎಡಬಲಕ್ಕೆ ಆನೆ ಕೋರೆಯಿಂದ ಮಾಡಿದ ಎರಡು "ಐರಾವತ" ತೂಗು ಹಾಕಲಾಗಿದೆ ಅದೇ ಕಾರಿನಲ್ಲಿ ನಾನು, ಎರಡು-ಮೂರು ಬಾರಿ, ಅವನ ಮನೆಗೆ ಹೋಗಿ ಬಂದಿದ್ದೇನೆ. ಅವನ ಮನೆಯಲ್ಲಿಯೂ ಸಹ ಹತ್ತು ಐರಾವತಗಳಿದ್ದವು. ನಿನ್ನೆ ರಾತ್ರಿ ಹೋದಾಗ 'ನಾನೇ' ಒಂದು ಐರಾವತ ಕದ್ದು ತಂದಿರುವೆ"—ನಟರಾಜ ಜೇಬಿಗೆ ಕೈಹಾಕಿ 'ಐರಾವತ' ವೊಂದನ್ನು ಹೊರಗೆ ತೆಗೆದು ತೋರಿಸಿದ.

ಅಷ್ಟರಲ್ಲಿ, ಕಾರು ಹೊರಟುಹೋಗಿತ್ತು, ಬೆನ್ನಟ್ಟಿ ಫಲವಿಲ್ಲ—ಎಂದು ಯೋಚಿಸಿ, ಅವರು ನಂಜುಂಡಪ್ಪನವರ ಮನೆ ಕಡೆ ಹೊರಟರು.

## ಹದಿನೆಂಟು

ನಂಜುಂಡಪ್ಪ ಮನೆಯಲ್ಲಿಯೇ ಇದ್ದರು. ಹೇಮಂತ ಅವರಿಗೆ, ನಡೆದ ವಿಷಯತಿಳಿಸಿದ. ಕುಳಿತಲ್ಲಿಂದಲೇ ಅವರು ಬಾಯಿ ತುಂಬಾ ಬಂದ ಉಗುಳನ್ನು ನಟರಾಜನ ಮೇಲೆ ಉಗಿದು, ಎದ್ದು ಬಂದರು. ತಮ್ಮ ಕೈ ಸೋಲುವ ವರೆಗೂ ಅವನನ್ನು ಹೊಡೆದರು. ನಟರಾಜ ಕೇವಲ "ಸಾರ್ ನನ್ನನ್ನು

ಕ್ಷಮಿಸಿ" ಅನ್ನುತ್ತಿದ್ದ.

ನಂಜುಂಡಪ್ಪ, ಹೇಮಂತನನ್ನು ಅಪ್ಪಿಕೊಂಡು "ಮಗೂ, ನನ್ನನ್ನು ಕ್ಷಮಿಸಪ್ಪಾ! ನಾನು, ನಿನ್ನ ಮೇಲೆ ಅಪವಾದಹೊರೆಸಿ ತಪ್ಪುಮಾಡಿದೆ" ಅಂದರು.

ಹೇಮಂತನ ಮನಸ್ಸು ಹೂವಿನಂತೆ ಹಗುರವಾಗಿತ್ತು. ಹೇಮಂತ ಸವಿಸ್ತಾರವಾಗಿ ಎಲ್ಲ ವಿಷಯ ಅವರ ಮುಂದೆ ಹೇಳಿ—"ಆ ವ್ಯಕ್ತಿ ಯಾರು? ನಿಮಗೆ—ಗೊತ್ತಿದೆಯೇ?" ಎಂದು ಕೇಳಿದ. ಎಲ್ಲ ಕೇಳಿ ಆದಮೇಲೆ—ನಂಜುಂಡಪ್ಪ "ಎಲಾ ನೀಚ! ಕೃತಘ್ನ! " ಎಂದು ಹಲ್ಲು ಕಡಿದರು. ನಂತರ ಹೇಮಂತನ ಕಡೆ ಹೊರಳಿ, ಅವನು ಅವನು ...ನನ್ನ ತಮ್ಮ ಸುರೇಶ—ಸಾರ್!' ಎಂದ ಖಿನ್ನನಾಗಿ.

ಹೇಮಂತ, ಧನಂಜಯ, ನಟರಾಜ ಮೂವರೂ ಬೆಚ್ಚಿ ಬಿದ್ದರು. ನಂಜುಂಡಪ್ಪ ಮುಂದುವರೆಸಿದರು.

"ಸುರೇಶ—ನನ್ನ ತಂದೆಯವರ ಸೂಳೆಯ ಮಗ. ಅವರು ಜೀವಂತವಿರುವಾಗ ಸಾಕಷ್ಟು ಹಣ ಕೊಟ್ಟಿದ್ದರು ಅವರು ಸತ್ತಮೇಲೆ, ನಾನೂ ಸಾಕಷ್ಟು ಕೊಟ್ಟಿರುವೆ. ಆದರೆ, ಆತ ಜೂಜುಕೋರ ..ಸ್ಮಗ್ಲರ್, ವಿಷಯ ಲಂಪಟ, ಆತ ಮಾಡಲಾರದ ಕೆಲಸವಿಲ್ಲ. ಹೀಗಾಗಿ ಯಾವಾಗಲೂ ಹಣ ಬೇಕು. ಈಗ ಆತ ದೊಡ್ಡ ಸಂಚುಮಾಡಿದ್ದಾನೆ. ನನ್ನ ಮಗಳನ್ನು ಕೊಂದು ನನ್ನನ್ನು ಮುಗಿಸಿದರೆ ನನ್ನೆಲ್ಲ ಆಸ್ತಿ, ತನಗೆ ದಕ್ಕುತ್ತದೆ ಎಂದು."

"ಅವರ ಮನೆ ಎಲ್ಲಿದೆ ಗೊತ್ತಿದೆಯೇ ?"

ಕೈಲಾಸಪತಿ ದೇವಾಲಯದ ಪಕ್ಕಕ್ಕೆ ಒಂದು ಕೆರೆ ಇದೆ. ಅದರ ದಂಡೆಯ ಮೇಲೆ ಒಂದು ಆಲದ ಮರ ಇದೆ. ಅದರ ಹಿಂದೆಯೇ ಅವನ ಮನೆ.

ಮತ್ತೆ ಹೇಮಂತನಿಗೆ, ಶಾಂತಿ ಬರೆದ ಚೀಟಿ ನೆನಪಾಯಿತು. ಆಕೆ ಬರೆದದ್ದೂ, ಈಗ–ಇವರು ಹೇಳುವುದೂ ಎರಡೂ 'ಒಂದೇ' ಮನೆ. "ನಡೆಯಿರಿ ಅಲ್ಲಿಗೆ ಹೋಗೋಣ." ಎಂದ ಹೇಮಂತ. ಧನಂಜಯ ಪೋಲೀಸ್ ಸ್ಟೇಷನ್ನಿಗೆ ಫೋನ್ ಮಾಡಿ, ಒಂದು ಜೀಪಿನಲ್ಲಿ ಹತ್ತುಹನ್ನೆರಡು ಜನ ಪೋಲೀಸರನ್ನೂ ಕರೆ ತರಲು ತಿಳಿಸಿದ '—'ನಂಜುಂಡಪ್ಪನವರು ಹೇಳಿದ ಮನೆಯ ಗುರುತು ಹೇಳಿ ಅಲ್ಲಿಗೆ ಕರೆತರಿಸಲು.'

ಎಲ್ಲರೂ ಹೊರಟರು ಸುರೇಶನ ಮನೆ ಹತ್ತಿರ. ಅಷ್ಟರಲ್ಲಿ ಕತ್ತಲೆ ಮುಸುಕತೊಡಗಿತು. ಮನೆಯ ಹೊರಗಡೆ ಜೀಪು ನಿಲ್ಲಿಸಿ ಎಲ್ಲರೂ ಕೆಳಗಿಳಿದರು. ಗೇಟು ತೆರೆದು ಒಳಗೆ ನಡೆದರು. ಬಾಗಿಲು ತೆರೆದೇ ಇತ್ತು. ಅವರೆಲ್ಲ, ಮನೆಯ ಒಳಗೆ ಕಾಲಿಡುತ್ತಲೇ ಬಾಗಿಲು ಒಮ್ಮೆಲೇ ಮುಚ್ಚಲ್ಪಟ್ಟಿತು.

ಸರಕ್ ಎಂದು ಹೇಮಂತ ಹೊರಳಿದ. ಬಾಗಿಲು ಮುಚ್ಚಿ ಕೈಯಲ್ಲಿ ಪಿಸ್ತೂಲು ಹಿಡಿದು ನಿಂತಿದ್ದ ಸುರೇಶ.

"ಎಲ್ಲರಿಗೂ ಸುಸ್ವಾಗತ ..ಹೂಂ ...ಎಲ್ಲರೂ ಮುನ್ನಡೆಯಿರಿ" ಎಂದ ಆತ.

"ಅವರೆಲ್ಲ ಹಾಲ್‌ದಾಟಿ ಒಳಗಿನ ಕೋಣೆಗೆ ಬಂದರು. ಆದರೆ ಎಡಕ್ಕಿರುವ ಮಾರ್ಗದಿಂದ ಕೆಳಗೆ ನೆಲಮಾಳಿಗೆಗೆ ಬಂದರು. ಅದೊಂದು ವಿಶಾಲವಾದ ನೆಲಮಾಳಿಗೆ, ಅಲ್ಲಿಯೇ ಸುಷಮಾಳನ್ನು ಬಂಧಿಸಿ ಇಡಲಾಗಿತ್ತು. ಅವಳ ಕೈ ಕಾಲು ಕಟ್ಟಿ ನೇತು ಹಾಕಲಾಗಿತ್ತು. ಅದನ್ನು ನೋಡುತ್ತಲೇ ಹೇಮಂತನ ಮೈ ಉರಿದು ಹೋಯಿತು.

ಅದನ್ನು ಗಮನಿಸಿದ ಸುರೇಶ ಗುಡುಗಿದ—"ನೀನು ನಿಂತಲ್ಲಿಂದ ತಪ್ಪಿ, ಹೆಜ್ಜೆ ಇಟ್ಟರೆ ನಿನಗೇ ಅಪಾಯ ಅದರೊಂದಿಗೆ ಸುಷಮಾ ಗರ್ಭಿಣಿ. ಆಕೆ, ನಮ್ಮ ವಶದಲ್ಲಿದ್ದಾಳೆ. ನಾವಂತೂ ಮನುಷ್ಯರಲ್ಲ !—" ಎಂದ.

ಅವನ ಮಾತಿಗೆ ಹೇಮಂತ ತಣ್ಣಗಾಗಬೇಕಾಯಿತು. ಸುರೇಶ, ನಂಜುಂಡಪ್ಪನ ಕಡೆ ಹೊರಳಿ ಹೇಳಿದ. "ನಾನು—ಸೂಳೆಯ ಮಗ ಅಂತ ಹೇಳಿ ಹೀಯಾಳಿಸಿ—ನೀನು ಮಾತನಾಡುತ್ತಿದ್ದೆ. ನಾನು ಹಣ ಕೇಳಿದರೆ—ನಾಯಿಯ ಮುಂದೆ, ರೊಟ್ಟಿ ಎಸೆಯುವಂತೆ—ನನಗೆ ಕೊಡುತ್ತಿದ್ದೆ. ಈಗ ಹೇಳು—ಶಾಂತಿ ಸತ್ತುಹೋದಳು .ನಾಳೆ ನಿನ್ನ ಹೆಣ ಸಹ ಬೀದಿಯಲ್ಲಿ ಬೀಳುತ್ತದೆ. ಆಗ, ಎಲ್ಲ ಆಸ್ತಿಗೆ ನಾನೇ ಯಜಮಾನ!—ಹ್ಹ ಹ್ಹ ಹ್ಹಾ!" ಎಂದು ನಕ್ಕನಂತರ ಹೇಮಂತನ ಕಡೆ ಹೊರಳಿ

"ಹೇಮಂತ—ನಾನು, ನಿನ್ನ ದ್ವೇಷಿ ಏನೂ ಅಲ್ಲ. ಆದರೆ, ನೀನು ಪ್ರಾಮಾಣಿಕ ಅಧಿಕಾರಿ. ಆದ್ದರಿಂದ, ನಿನ್ನ ಜೊತೆ ನಾನು ವೈರ ಕಟ್ಟಿಕೊಂಡೆ. ನಾನು ನಡೆಸುತ್ತಿದ್ದ ಚರಸ್, ಗಾಂಜಾ—ಡೈಮೆಂಡ್ ಸ್ಮಗಲಿಂಗ್ ವ್ಯಾಪಾರ ನಿನ್ನಿಂದ ನಾಶವಾಯಿತು. ನನಗೆ ತುಂಬ ಭಾರದ ಹಾನಿಯಾಯ್ತು. ಅದಕ್ಕಾಗಿ, ನಿನ್ನನ್ನು ಬಲೆಗೆ ಒಗೆಯಲು ಒಂದೇ ಕಲ್ಲಿನಿಂದ ಎರಡು ಹಣ್ಣು ಉದುರಿಸಲು—ಶಾಂತಿಯನ್ನು ಅಪಹರಿಸಿದೆ. ಹೇಗಿದೆ ನನ್ನ ಪ್ಲಾನ್" ಎಂದ ಅದೇ ವೇಳೆಗೆ ಹೊರಗಡೆ ಗಂಟೆ ಬಾರಿಸಿತು.

ಸೂರಪ್ಪ ಊರೆಲ್ಲ ಸುತ್ತಿ, ಸುಸ್ತಾಗಿ ಹೋಗಿದ್ದ. ಎಲ್ಲಿಯೂ ಹೇಮಂತ ಹೇಳಿದಂಥ ಮನೆ ಕಾಣಿಸಲಿಲ್ಲ. ಹೊಟ್ಟೆ ಬೇರೆ ಹಸೀತಾ ಇತ್ತು. ಏನು ಮಾಡುವುದು ಎಂದು ಯೋಚಿಸುತ್ತಾ ಇರುವಾಗ "ರಮಿ" ಕುಂಯಿ ಕುಂಯಿ ಮಾಡುತ್ತಾ ಮುಂದೆ ನಿಂತಿದ್ದ ಮೆಟಡೋರ್ ಹತ್ತಿರ ಹೋಯಿತು. ಮೆಟಡೋರ್ ಹತ್ತಿರ ಬ್ರೆಡ್ ತುಣುಕುಗಳು ಬಿದ್ದಿದ್ದವು. ಅದನ್ನು ತಿನ್ನುತ್ತ

ರವಿ ಹಾಗೆ ಮೆಟಡೊರಿನ ಒಳಗೆ ಹೋಯ್ತು. ಸೂರಪ್ಪ ನೋಡ ನೋಡುತ್ತ ಇರುವಂತೆ ಇಬ್ಬರು ಪಕ್ಕದ ಅಂಗಡಿಯಿಂದ ಹೊರಗೆ ಬಂದರು. ಅವರಲ್ಲಿ ಒಬ್ಬ ಕುರುಡ, ಇನ್ನೊಬ್ಬ ಕಿವಿಹರಕ. ಅವರನ್ನು ನೋಡುತ್ತಲೇ ಸೂರಪ್ಪ ನಿಗೆ ಶಂಕರ ಸುಂದರರ ನೆನಪು ಬಂದಿತು. "ಓಹ್ ! ಇಲ್ಲಿದ್ದಾರೆ " ಎಂದು ಅತ್ತ ನಗೆದ ಅವರು ಮೆಟಡೋರ್‌ನಲ್ಲಿ ಕುಳಿತರು. ಸೂರಪ್ಪ ಓಡಿ ಬಂದು ಹಿಂದಿನಿಂದ ಏರಿ ಕುಳಿತ. ರವಿ, ಒಳಗಿದ್ದ ಬ್ರೆಡ್, ಬನ್, ಕೇಕ್ ತಿನ್ನುತ್ತ ಇತ್ತು. "ಓಹ್ ! ರವಿ ! . ರವಿ ! ರವೀ ದಿ ಗ್ರೇಟ್!" ಎಂದು ಅನ್ನುತ್ತಾ, ಸೂರಪ್ಪ ಅದಕ್ಕೆ ಮುತ್ತಿಟ್ಟ.

ಮೆಟಡೋರ್ ಬಂದು, ಒಂದು ಮನೆಯ ಮುಂದೆ ನಿಂತಿತ್ತು. ಡ್ರೈವರ್ ಸ್ಥಾನದಲ್ಲಿದ್ದ ಶಂಕರ "ಅರೆ ಈ ಜೀಪು ಯಾರದು ?...ಓಹ್ ! .ಇದು ಪೋಲೀಸರದು ! ಸುಂದರಾ, ಬೇಗ ಬಾ ..ನೋಡೋಣ" ಎಂದೆನ್ನುತ್ತಾ ಮನೆಯ ಕಡೆ ಓಡಿದರು.

ಅವರು ಹೋದ ಸ್ವಲ್ಪ ಹೊತ್ತಿನ ಮೇಲೆ ಸೂರಪ್ಪ ಕೆಳಗಿಳಿದ. ಜೀಪು ನಿಜವಾಗಿಯೂ ತಮ್ಮದೆ ಎಂದು ಅದರೊಳಗೆ ಬಗ್ಗಿ ನೋಡಿದ. ಹೇಮಂತನ ಕೋಟು ಕಾಣಿಸಿದೊಡನೆ ತೆಗೆದುಕೊಂಡ. ಅದರ ಒಳಗಿದ್ದ ಪಿಸ್ತೂಲನ್ನು ಹಿಡಿದುಕೊಂಡು ಮನೆಯ ಒಳಗೆ ಬಂದ.

ಬಾಗಿಲು ಹಾಕಿತ್ತು. ಕರೆಗಂಟೆ ಬಾರಿಸಿದ. ಸ್ವಲ್ಪ ಹೊತ್ತು ಬಿಟ್ಟು ಬಾಗಿಲು ತೆರೆಯಿತು ಕರಿಬಣ್ಣದ ಟೊಣಪ ಹೊರಗೆ ಬಂದು "ಯಾರು ನೀನು ಯಾರು ಬೇಕಿತ್ತು ?" ಎಂದು ಗುಡುಗಿದ, ಸೂರಪ್ಪ ಪಿಸ್ತೂಲು ಅವನಿಗೆ ಗುರಿಯಿಡುತ್ತಾ "ನಾನು ! ನಿನ್ನಪ್ಪ ! ನನಗೆ—ನಿನ್ನಜ್ಜ ಬೇಕು. ನಡೆ ಒಳಗೆ " ಎಂದ ಅವನ ಹಿಂದೆ-ಹಿಂದೆ ಪ್ರವೇಶಿಸಿದ.

ಶಂಕರಸುಂದರ ಬಂದದ್ದು ಕಂಡು, ಸುರೇಶ ನಿಶ್ಚಿಂತೆಯಿಂದ ಉಸಿರುಬಿಟ್ಟ.

ಶಂಕರ ಹೇಮಂತನನ್ನು ನೋಡಿ "ವಾಹ್ ! ನಮ್ಮ ಬುಲ್ ಬುಲ್ ಮಗ ಬಂದೈತಿ !" ಅಂದ.

ಕಣ್ಣು ಕಾಣದಿದ್ದರೂ ಸುಂದರ "ಬರದೆ ಏನು ದೋಸ್ತ ! ಅವನ ಮೈನಾ ನಮ್ಮ ಕೈಯಾಗೆ ಸಿಕ್ಕತೆ" ಎಂದು ಕುಹಕ ನಗೆ ನಕ್ಕ.

"ಸುರೇಶ, ಶಂಕರನಿಗೆ ಹೇಳಿದ. "ಶಂಕರಾ, ಇವರನ್ನೆಲ್ಲ ಮುಗಿಸಿ, ನಾಲ್ಕು ದಿನ ನೆಲಮನೆಯಲ್ಲಿ ಕೊಳೆ ಹಾಕಿ, ನಂತರ ತಿಪ್ಪೆಗೆ ಎಸೆಯಬೇಕು. ಇವರ ಮಾಂಸವನ್ನು ನಾಯಿ ಹದ್ದುಗಳು ತಿನ್ನಬೇಕು. ತಿಳಿಯಿತಾ ?"

'ಯಸ್ ಬಾಸ್ ಆ ಕೆಲಸ ನನಗಿರಲಿ.'

ಗುಡ್! ತೆಗೆದುಕೋ ಪಿಸ್ತೂಲು. ಇದಕ್ಕೆ ಸೈಲೆನ್ಸರ್ ಹಚ್ಚಿದೆ. ಎಲ್ಲರನ್ನು ಶೂಟು ಮಾಡು.

ಸುರೇಶ, ಪಿಸ್ತೂಲನ್ನು ಶಂಕರನ ಕೈಗೆ ಕೊಟ್ಟು, ತಾನು ಬಂಧಿಸಿದ ಸುಷಮಾಳ ಹತ್ತಿರ ಬಂದ ಅವಳನ್ನು ಮುದ್ದಿಸಲು ಹೋದ. ಅದನ್ನು ನೋಡಲಾರದೇ, ಹೇಮಂತ ಅತ್ತ ಹೆಜ್ಜೆ ಇಟ್ಟಾಗ, ಶಂಕರ ಅವನತ್ತ ಪಿಸ್ತೂಲಿನಿಂದ ಗುರಿ ಇಟ್ಟ.

"ಢಂ" ಎಂದು ಗುಂಡುಹಾರಿತು. ಶಂಕರನ ಕೈಲಿದ್ದ ಪಿಸ್ತೂಲು ನಿಗರಿಬಿತ್ತು.

"ಸಾರ್! ನಾನು ಸುದ್ದೀ ಸೂರಪ್ಪ" ಎಂದ ಮೇಲಿಂದ.

"ವಾಹ್! ಸೂರಪ್ಪ!. ..ಸರಿಯಾದ ವೇಳೆಗೆ ಬಂದೆ!" ಎಂದು ಕೇಕೆಹಾಕಿ, ಹೇಮಂತ, ಸುರೇಶನ ಮೇಲೆ ಹಾರಿದ. ಧನಂಜಯ, ಶಂಕರನ ಮೇಲೆ.

ಅದೇ ವೇಳೆಗೆ ಧಡ ಧಡ ಧಡ ಬೂಟಿನ ಸದ್ದು ಎಲ್ಲೆಡೆ ಕೇಳಿಸತೊಡಗಿತು.

ಕ್ಷಣಾರ್ಧದಲ್ಲಿ ಪೋಲೀಸರ ಗುಂಪು ಅವರನ್ನು ಮುತ್ತಿತ್ತು.

ಹೇಮಂತ, ಸುಷಮಾಳ ಕಟ್ಟು ಬಿಚ್ಚಿ, ಅವಳನ್ನು ಅಪ್ಪಿಕೊಂಡು ಮುತ್ತಿನ ಮಳೆಗರೆದ.

ನಂಜುಂಡಪ್ಪ ಮತ್ತೊಮ್ಮೆ ಕ್ಷಮೆ ಕೇಳಿದರು. ಅವರೂ ಸಹ, ಹೇಮಂತನಿಗೆ ಸುಷಮಾಳನ್ನು ಮದುವೆ ಮಾಡಿಕೊಳ್ಳಲು ಒತ್ತಾಯ ಮಾಡಿದರು. ಹೇಮಂತ ಅವರ ಕಾಲಿಗೆ ಬಾಗಿ ನಮಸ್ಕರಿಸಿದ.

ಅಷ್ಟರಲ್ಲಿ ಸೂರಪ್ಪ ಓಡಿ ಬಂದ.

"ಸಾರ್ ! ..ಸಾರ್. ..ನನಗೆ !"

"ಸೂರಪ್ಪ, ನಿನಗೆ ಪ್ರಮೋಷನ್ ಕೊಡಲು ಶಿಫಾರಸು ಮಾಡಿರುವೆ. ನೀನು, ಎಸ್.ಐ. ಆಗ್ತೀಯ" ಎಂದ.

"ಸಾರ್, ಸಾರ್ !....ಇನ್ನೊಂದಕ್ಕೆ ಪರ್ಮಿಶನ್ ಕೊಡಬೇಕು. Please Sir" ಎಂದು ಸೂರಪ್ಪ ಗೋಗರೆದ.

"ಯಾವುದಕ್ಕೆ ?"

ಸೂರಪ್ಪ ಬಾಗಿಲ ಕಡೆ ಕೈ ಮಾಡಿ, "ಬಾರೇ, ವಯ್ಯಾರೀ" ಎಂದ.

ಕೈಯ್ಯಲ್ಲಿ ಪಿಂಕಿಹಿಡಿದಿದ್ದ ರೋಜಲೀನಾ ಬಂದು ಅವನ ಪಕ್ಕಕ್ಕೆ ನಿಂತಳು.

"ಸರ್ !....ಇದಕ್ಕೇ;!?" ಎಂದ ಸೂರಪ್ಪ.

ಹೇಮಂತ ಅವಳ ಕಡೆ ಕೈ ಮಾಡಿ—"ಹೂಂ ! ತಥಾಸ್ತು ! ಎಂದಾಗ ಎಲ್ಲೆಡೆ ನಗೆ ಬಾಂಬು ಸಿಡಿಯಿತು.

# ನಮ್ಮ ಕೆಲವು ಮುಖ್ಯ ಪ್ರಕಟಣೆಗಳು

| | | |
|---|---|---|
| 1 | ಭಾರತದ ಚರಿತ್ರೆ | 45–00 |
| 2 | ಮಹಾತ್ಮಾ ಗಾಂಧಿ | 20–00 |
| 3 | ಕನಕದಾಸರು | 80–00 |
| 4 | ಶಾಕುಂತಲ | 22–00 |
| 5 | ಟೀಪೂಸುಲ್ತಾನ | 36–00 |
| 6 | ಔರಂಗಜೇಬ | 45–00 |
| 7 | ಪಂಚತಂತ್ರ | 40–00 |
| 8 | ಸುಂದರ ಮಾಸ್ಕೋ – ಸುಂದರ ರಸಿಯಾ | 20–00 |
| 9. | ಶ್ರೀ ರಾಮಕೃಷ್ಣ ಚರಿತಾಮೃತ | 20–00 |
| 10 | ಭೂಮಿಗೀತೆ | 34–00 |

**Price : Rs. 15–00**